SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:10, Pages:56
May - 2023, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಮೇ 2023
ಬೆಲೆ ರೂ. 20/-



## ತಿರುಪತಿ
## ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
## 2023 ಮೇ 26 ರಿಂದ ಜೂನ್ 03 ರ ವರೆಗೆ

ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ 03-04-2023 ರಿಂದ 05-04-2023 ರ ವರೆಗೆ ನಡೆದ ವಸಂತೋತ್ಸವ ಕಾರ್ಯಕ್ರಮದ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್., ದಂಪತಿಗಳು ಮತ್ತು ಭಕ್ತರು














ಹರಿ ನಾರಾಯಣ ಹರಿನಾರಾಯಣ
ಹರಿನಾರಾಯಣ ಎನು ಮನವೆ.
ನಾರಾಯಣನೆಂಬ ನಾಮದ ಬೀಜವ
ನಾರದ ಬಿತ್ತಿದ ಧರೆಯೊಳಗೆ
ತರಳ ಧೃವನಿಂದ ಅಂಕುರಿಸಿತು ಅದು
ವರ ಪ್ರಹ್ಲಾದನಿಂದ ಮೊಳಕೆ ಆಯ್ತು
ಧರಣೀಶ ರುಕ್ಮಾಂಗದನಿಂದ ಚಿಗುರಿತು
ಕುರುಪಿತಾಮಹನಿಂದ ಹೂವಾಯ್ತು
ವಿಜಯನ ಸತಿಯಿಂದ ಕಾಯಾಯಿತು
ಅದು ಗಜರಾಜನಿಂದ ದೋರೆ ಹಣ್ಣಾಯ್ತು
ದ್ವಿಜ ಶುಕ ಮುನಿಯಿಂದ ಫಲ ಪಕ್ವವಾಯಿತು
ಅಜಮಿಳ ತಾನುಂಡು ರಸ ಸವಿದ
ಕಾಮಿತ ಫಲವೀವ ನಾಮವೊಂದಿರಲಿಕ್ಕೆ
ಹೋಮ ನೇಮ ಜಪ ತಪವೇಕೆ
ಸ್ವಾಮಿ ಶ್ರೀಪುರಂದರ ವಿಠಲ ನಾಮವ
ನೇಮದಿಂದ ನೀ ನೆನೆ ಮನವೆ

- ಶ್ರೀ ಪುರಂದರದಾಸರು






# ಭಗವದ್ಗೀತೆ

ಕ್ಲೈ ಬ್ಯಂ ಮಾ ಸ್ಮಗಮಃ ಪಾರ್ಥ ನೈತತ್ ತ್ವಯ್ಯುಪಪದ್ಯತೇ
ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯ ಕ್ತ್ವೋತ್ತಿಷ್ಠ ಪರಂ ತಪ

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -3)

**ಅರ್ಜುನ, ಎದೆಗೇಡಿಯಾಗಬೇಡ ನಿನಗೆ ಇದು ತರವಲ್ಲ ಹಗೆಗಳನ್ನು ಗದಗುಟ್ಟಿಸುವ ವೀರನೇ, ಕೀಳಾದ ಅಳುಕನ್ನು ಕೊಡವಿ ಹಾಕಿ ಎದ್ದೇಳು.**

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

ಪ್ರಣಿಹಿತಧಿಯಾಂ ತ್ವತ್ಸಂಪೃಕ್ತೇ ವೃಷಾದ್ರಿಶಿಖಾಮಣೌ ಪ್ರಸೃಮರಸುಧಾಧಾರಾಕಾರಾ ಪ್ರಸೀದತಿ ಭಾವನಾ ।
ದೃಢಮಿತಿ ದಯೇ ದತ್ತಾಸ್ವಾದಂ ವಿಮುಕ್ತಿ ಬಲಾಹಕಂ ನಿಭೃತಗರುತೋ ನಿಧ್ಯಾಯನ್ತಿ ಸ್ಥಿರಾಶಯಚಾತಕಾಃ॥80॥

ಹಿಂದಿನ ಪದ್ಯದಲ್ಲಿ ಪ್ರಪನ್ನನಿಗೆ ಎಂದಾದರೊಂದು ದಿನ ಖಂಡಿತವಾಗಿಯೂ ಫಲವು ದೊರಕುವುದೆಂದು ತಿಳಿಸಿದರು. ಈ ಪದ್ಯದಲ್ಲಿ ಭಕ್ತಿ ಯೋಗವನ್ನು ಮಾಡುವವನಿಗೂ ದಯಾದೇವಿಯ ಅನುಗ್ರಹದಿಂದಲೇ ಆ ಭಕ್ತಿ ಯೋಗವು ಸಫಲವಾಗುವುದೆಂದು ನಿರೂಪಿಸುವರು.

ಮೋಕ್ಷಕ್ಕಾಗಿ ಮಾಡುವ ಭಕ್ತಿಯೋಗವು ಪರಮಪುರುಷನ ವಿಷಯವಾಗಿ ಮತ್ತೊಂದು ವಸ್ತುವನ್ನು ನೆನೆಸಿಕೊಂಡೆಯಾ ತಡೆಯಿಲ್ಲದಂತೆ ಧಾರಾಕಾರವಾದ ನೆನವಾಗುವುದು. ಇದನ್ನೇ ಧ್ಯಾನವೆಂದೂ, ಉಪಾಸನೆಯೆಂದೂ ಹಲವು ಬಗೆಯಾಗಿ ಹೇಳುವರು. ಇಂತಹ ಪರಮಪುರುಷನ ಧ್ಯಾನವೆಂಬುದು ಅಮೃತಧಾರೆಯಂತೆ ಯೋಗಿಗೆ ಅತ್ಯಂತ ಪ್ರಿಯವೆನಿಸುವುದು. ಅಲ್ಲದೆ, ಅವನ ಸ್ಥಾನ , ರೂಪ, ಗುಣ ಮೊದಲಾದವುಗಳೊಡನೆ ಕೂಡಿರಬೇಕು. ಅವುಗಳಲ್ಲಿಯೂ ಗುಣಗಳೇ ಬಹುಮುಖ್ಯವಾದವು. ಈ ವಿಷಯವು ದಹರವಿದ್ಯೆಯಲ್ಲಿ ಸ್ಪಷ್ಟವಾಗಿರುವುದು. ಆ ಗುಣಗಳಲ್ಲಿಯೂ ದಯೆಯು ಅತ್ಯಂತ ಮುಖ್ಯವಾದದು. ಏಕೆಂದರೆ, ಈ ಗುಣದಿಂದಲೇ ಇತರ ಗುಣಗಳೂ ಗುಣಗಳಾಗಿ ಆಗುತ್ತವೆಯಲ್ಲವೆ! ಆದ್ದರಿಂದ ಈ ದಯಾಗುಣದಿಂದ ಕೂಡಿರುವ ಪರಮಪುರುಷನನ್ನು ಧ್ಯಾನಿಸಿದರೇನೇ ಆ ಧ್ಯಾನವು ಅಮೃತಧಾರೆಯಂತೆ ಅತ್ಯಂತ ಪ್ರಿಯವಾಗಿರುವುದು. ಈ ಗುಣವಿಲ್ಲದಿದ್ದರೆ ಅಪರಾಧಿಗಳಾದ ನಮ್ಮಂಥವರು ಪರಮಾತ್ಮನೊಡನೆ ಸೇರಿರಲು ಅವಕಾಶವಿಲ್ಲ. ಆದ್ದರಿಂದ ಯೋಗಿಗಳೂ ಕೂಡ ಈ ಗುಣವನ್ನು ಪುರಸ್ಕರಿಸಿಯೇ ವೇಂಗಡಮಲೆಯರಸನಾದ ಶ್ರೀನಿವಾಸನನ್ನು ಧ್ಯಾನಿಸುತ್ತಾರೆ. ಆಗಲೇ ಅವರಿಗೆ ಭಕ್ತಿಯೋಗವು ಪ್ರಸನ್ನವಾಗುವುದು ಸಫಲವಾಗುವುದು, ಈ ವಿಷಯವನ್ನು ತಿಳಿದೇ ಮೇಘವನ್ನೇ ರಕ್ಷಕವಾಗಿಯುಳ್ಳ ಜಾತಕಪಕ್ಷಿಯಂತಿರುವ ಯೋಗಿಗಳು ಇಂತಹ ಉತ್ತಮವಾದ ರಸಾಸ್ವಾದವನ್ನು ಉಂಟುಮಾಡುವವನೂ, ಮೋಕ್ಷವೆಂಬ ಮಳೆಗೆ ಮೇಘದಂತಿರುವವನೂ ಆದ ಭಗವಂತನನ್ನೇ ತಮಗೆ ಸಿದ್ಧೋಪಾಯವಾಗಿಟ್ಟುಕೊಂಡು ತಮ್ಮ ಜ್ಞಾನ. ಕರ್ಮಗಳೆಂಬ ರೆಕ್ಕೆಗಳನ್ನು ತೆರೆಯದೆ ಅಂದರೆ, ಮತ್ತೆ ಯಾವ ದೇವತೆಯಲ್ಲಿಯೂ ಧ್ಯಾನವಿಲ್ಲದಿರುವಂತೆ ಪರಮಪುರುಷನ ವಿಷಯದಲ್ಲಿಯೇ ಸಲ್ಲಿಸಿ ಅವನನ್ನೇ ಧ್ಯಾನಿಸುವರು.

ಹೀಗೆ ಈ ಪದ್ಯವನ್ನು (ಪೂರ್ತಿಯಾಗಿ) ಯೋಗಿಗಳ ವಿಷಯವಾಗಿಯೇ ವ್ಯಾಖ್ಯಾನ ಮಾಡಲಾಗಿದೆ. 'ಚಾತಕ'ಪದವನ್ನು ಮುಖ್ಯವಾಗಿ ಪ್ರಪನ್ನರ ವಿಷಯದಲ್ಲಿಯೇ ಪ್ರಯೋಗಿಸುವುದು ರೂಢಿಯಾಗಿರುವುದರಿಂದ, ಅದನ್ನು ಅನುಸರಿಸಿ, ಈ ಪದ್ಯದ ಪೂರ್ವಾರ್ಧವನ್ನು ಯೋಗಿಗಳ ವಿಷಯವಾಗಿಯೂ, ಉತ್ತರಾರ್ಧವನ್ನು ಪ್ರಪನ್ನರ ವಿಷಯವಾಗಿಯೂ ವ್ಯಾಖ್ಯಾನ ಮಾಡಬಹುದು. ಆಗ ಇತಿ ಎಂಬ ಪದಕ್ಕೆ 'ಹೀಗಿರುವುದರಿಂದ' ಎಂದರ್ಥ. ಯೋಗಿಗಳಿಗೂ ಕೂಡ ದಯಾದೇವಿಯೊಡನೆ ಕೂಡಿರುವ ಪರಮಪುರುಷನನ್ನು ವಿಷಯಿಕರಿಸುವುದರಿಂದಲೇ ಅವರ ಧ್ಯಾನವು ಅಮೃತಧಾರೆಯಂತೆ ಅತ್ಯಂತ ಪ್ರಿಯವಾದುದಾಗಿ ಸಫಲವಾಗುವುದೆಂಬ ವಿಷಯವನ್ನು ತಿಳಿದೇ ಚಾತಕದಂತಿರುವ ಪ್ರಪನ್ನರೂ ಕೂಡ ತಮ್ಮ ಕರ್ಮ - ಜ್ಞಾನಗಳನ್ನು ಅಡಗಿಸಿಕೊಂಡು ಅಂದರೆ, ಬೇರೆ ದೇವತೆಯಲ್ಲಿಯಾಗಲಿ, ಬೇರೆ ಫಲದಲ್ಲಿಯಾಗಲಿ ಸಲ್ಲಿಸದೆ ದಯೆಯೊಡನೆ ಕೂಡಿರುವ ಆ ಪರಮಪುರುಷನನ್ನೇ ಧ್ಯಾನಿಸುವರೆಂದು ತಾತ್ಪರ್ಯ. ಹೀಗೆ ವ್ಯಾಖ್ಯಾನ ಮಾಡುವುದರಿಂದ ಪ್ರಪನ್ನರೂ ಕೂಡ ಪರಮಪುರುಷನನ್ನೇ ಸ್ವಯಂಪುರುಷಾರ್ಥವಾಗಿ ಧ್ಯಾನಿಸಬಹುದೆಂಬ ಶಾಸ್ತ್ರಾರ್ಥವು ವ್ಯಕ್ತ ವಾಗುವುದು.

ಪದ್ಧತಿಯಂತೆ ಮುಂದಿನ ದಶಕದಲ್ಲಿ ಶ್ರೀನಿವಾಸನನ್ನು ಕಾಲಮೇಘದಂತೆ ವರ್ಣಿಸುವರೆಂಬುದನ್ನು ಈ ಪದ್ಯದಲ್ಲಿರುವ ವಿಮುಕ್ತಿಬಲಾಹಕಂ ಎಂಬ ಪದದಿಂದ ಸೂಚಿಸಿ ಈ ದಶಕವನ್ನು ಮುಗಿಸುತ್ತಾರೆ.

( ಎಂಟನೆಯ ದಶಕವು ಮುಗಿದುದು)

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ವೈಶಾಖ - ಜ್ಯೇಷ್ಠ ಮಾಸ ಸಂಚಿಕೆ

ಸಂಪುಟ : 02 ಮೇ - 2023 ಸಂಚಿಕೆ : 10



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ವೈಶಾಖ ಮಾಸದ ಕೂರ್ಮ ಜಯಂತಿ | -ಶ್ರೀಮತಿ ಗಿರಿಜಾ ಎಸ್. ದೇಶಪಾಂಡೆ | 07 |
| ಮೋತಕಪಲ್ಲಿ ಶ್ರೀ ಬಲಭೀಮಸೇನ | - ಮನೋಹರ ಜೋಶಿ ಕಲಬುರಗಿ | 09 |
| ಹನುಮನ ನೋಡಿದಿರಾ | -ಹನುಮಂತ ಮ. ದೇಶಕುಲಕರ್ಣಿ | 13 |
| "ನೀನೇ ಕರ್ತಾ ಎನ್ನಕರ್ತ ನಾ ನಿನ್ನ ಭೃತ್ಯಹಿತ" | - ಡಾ॥ ಸುಭಾಸ ಕಾಖಂಡಕಿ | 15 |
| ಆಯುರ್ವೇದದ ಆರೋಗ್ಯ ಸೂತ್ರ | - ಡಾ॥ ಸಂಧ್ಯಾ | 16 |
| ಶ್ರೀ ನೃಸಿಂಹ ಜಯಂತಿ | - ಶ್ರೀಮತಿ. ಪಾರಿಜಾತ ಬಿ.ಎಸ್. | 18 |
| ಸಂಪಿಗೆಯ ಶ್ರೀನಿವಾಸ ದೇವಾಲಯ | -ಕೆಂಗೇರಿ ಚಕ್ರಪಾಣಿ | 20 |
| ಲಕ್ಷ್ಮೀ ಹೃದಯ | - ಡಾ॥ ಎ. ಕುಮುದ | 21 |
| ಸೌಬಲೇಯಿ | - ಡಾ॥ ವಾಣಿಶ್ರೀ ಬಿ.ಎಮ್ | 22 |
| ಉಷಸ್ತಿಯ ಕಥೆ | - ಪ್ರೊ॥ ಪದ್ಮನಾಭರಾವ್ | 23 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 24 |
| ಪ್ರೇಮ ದರ್ಶನದ ಆಚಾರ್ಯ ನಾರದ | -ಕಲ್ಯಾಣಿ ಮೂರ್ತಿ ರಾಮನಾಥಪುರ | 31 |
| ಪುಸ್ತಕ ವಿಮರ್ಶೆ ಶ್ರೀ ಶಂಕರ ಚರಿತಾಮೃತಮ್ | - ಬೇಲೂರು ರಾಮಮೂರ್ತಿ | |
| ಹಾಗೂ ಸುಭಾಷಿತ ಮಂಜರಿ | - ಕಮಲಮ್ಮರಾಜು | 33 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 34 |
| ಮಹಾಸಾಧಕ ಯತಿ ಶ್ರೀವಿಜಯೇಂದ್ರ ತೀರ್ಥರು | - ಓಂ ಪ್ರಕಾಶ್ ಭಟ್ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 38 |
| ತಿರುಚ್ಚೇರೈ | -ಸೂರ್ಯವಂಶಿ | 40 |
| ಕೊತ್ತಂಬರಿಯ ಔಷಧೀಯ ಗುಣಗಳು | -ಡಿ.ಎಸ್. ಬದ್ರಿನಾಥ್ | 42 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 44 |
| ಸಂಸ್ಕೃತ ಕಲಿಯೋಣ | - ಕೆ. ಸೂರ್ಯನಾರಾಯಣ | 45 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | -ಶ್ರೀಮತಿ. ಎನ್. ಪಾರ್ವತಿ | 46 |
| ನೀತಿ ಕಥೆ - ಉಪಕಾರ ಪ್ರವೃತ್ತಿ ನಮ್ಮದಾಗಲಿ | -ಎ. ಆರ್. ರಘುರಾಮ್ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಕೂರ್ಮವತಾರ | - ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ - ಶ್ರೀ ಗೋವಿಂದಸ್ವಾಮಿಯವರು, ತಿರುಪತಿ

ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು

**ಗೌರವ ಸಂಪಾದಕರು**

ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**

ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಅಭಯಕಾರಕ ನೃಸಿಂಹ ಮಂತ್ರ

“ನಾರದನು ಜಪಿಸುವಂತಹಾ ನಾರಾಯಣ ಮಂತ್ರ, ಪ್ರಹ್ಲಾದನು ಸ್ಮರಿಸುವಂತಹಾ ನಾರಸಿಂಹಮಂತ್ರ” ಎನ್ನುತ್ತಾ ಅನ್ನಮಯ್ಯ ಈ ಮಂತ್ರದ ಬಗೆಗೆ ಕೀರ್ತಿಸಿದ್ದಾರೆ. ನರಸಿಂಹಸ್ವಾಮಿ ಕೇವಲ ಅವತಾರಮೂರ್ತಿಯೇ ಅಲ್ಲ. ಮಂತ್ರಮೂರ್ತಿಯೂ ಆಗಿದ್ದಾನೆ. ವೇದಾಂತಗಳಂತೆ ಭಾಸವಾಗುವ ಉಪನಿಷತ್ತಿನಲ್ಲಿ ನರಸಿಂಹತತ್ವವು ವರ್ಣಿಸಲ್ಪಟ್ಟಿದೆ. ಆ ಸ್ವಾಮಿಯ ನಾಮಮಂತ್ರದಲ್ಲಿ ತನ್ನ ಭಕ್ತರಿಗೆ ಅಭಯವನ್ನು ನೀಡುವ ಅಂತರಾರ್ಥವು ಇದರಲ್ಲಿ ಅಡಗಿದೆ. ಆ ಮಂತ್ರ

ಉಗ್ರ ವೀರಂ ಮಹಾವಿಷ್ಣುಂ, ಜ್ವಲಂತಂ ಸರ್ವೋತೋಮುಖಂ
ನೃಸಿಂಹಂ ಭೀಷಣಂ ಭದ್ರಂ ಮೃತ್ಯುಮೃತ್ಯುಂ ನಮಾಮ್ಯಹಂ !

ಮೇಲಿನ ಮಂತ್ರದಲ್ಲಿನ ಒಂದೊಂದು ನಾಮದಲ್ಲೂ ಸ್ವಾಮಿಯ ಒಂದೊಂದು ತತ್ತ್ವವು ಅಡಗಿದೆ. “ಸ್ವಾಮಿಯು ಉಗ್ರಮೂರ್ತಿ”. ನರಸಿಂಹನ ಹೂಂಕಾರವನ್ನು ಕೇಳಿದ ಕೂಡಲೇ ಅಂತರ್ಗತ, ಬಹಿರ್ಗತ ಶತ್ರುನಾಶನವು ನಡೆಯುತ್ತದೆ. ಸಕಲ ಕಾರ್ಯ ಕಾರಣಗಳಿಗೆ ಮೂಲವಾಗಿರುವ ಶಕ್ತಿಯನ್ನೇ “ವೀರ” ಎನ್ನುತ್ತಾರೆ. ಸ್ವಾಮಿಯು ವೀರಮೂರ್ತಿಯಾಗಿದ್ದಾನಾದ್ದರಿಂದ ಸಕಲ ಕಾರ್ಯಕಾರಣ ಸ್ವರೂಪನೂ ಆಗಿದ್ದಾನೆ. ಎಲ್ಲಾ ಲೋಕಗಳಲ್ಲೂ ಎಲ್ಲೆಡೆಯಲ್ಲೂ ಇರುವ ನರಸಿಂಹತತ್ತ್ವಕ್ಕೆ ಮಹಾವಿಷ್ಣುನಾಮವೇ ಪ್ರತೀಕವೇ ಆಗಿದೆ. ಸಕಲ ಜೀವರಾಶಿಗಳೆಲ್ಲದರಲ್ಲೂ ತಾನೇ ವ್ಯಕ್ತವಾಗಿ ಅವ್ಯಕ್ತವಾಗಿ ಪರಮಾತ್ಮ ಭಾಸವಾಗುತ್ತಿದ್ದಾನೆ. ಸಕಲ ಲೋಕಗಳಲ್ಲೂ ಸರ್ವಾತ್ಮಕದಲ್ಲಿ ತನ್ನ ತೇಜಸ್ಸನ್ನು ಪ್ರಕಾಶಿಸುವಂತೆ ಮಾಡುವುದರ ಮೂಲಕ ಪ್ರಕಾಶಕ್ಕೆ ಕಾರಣವಾದ ತತ್ತ್ವವೇ “ಜ್ವಲಂತ” ಎಂಬ ಶಬ್ದಕ್ಕೆ ಅರ್ಥವನ್ನು ನೀಡುತ್ತದೆ.

ಇಂದ್ರಿಯದ ಸಹಾಯವಿಲ್ಲದೇ ಸಕಲ ವಿಶ್ವವನ್ನು ನೋಡಬಲ್ಲ ಪರಮಾತ್ಮ ತತ್ತ್ವವೇ ಸರ್ವೋತೋಮುಖತ್ವವಾಗಿದೆ. ಸಕಲ ಜೀವರಾಶಿಗಳಲ್ಲಿ ಸಿಂಹವು ಬಹಳ ಶ್ರೇಷ್ಠವಾಗಿದೆ. ಸಿಂಹಾಕೃತಿಯೇ ಪ್ರಧಾನವಾಗಿ ಭಗವಂತನು ನರಸಿಂಹನಾಗಿ ಆವಿರ್ಭವಿಸಿದ. ನೃಸಿಂಹನ ಶಾಸನ ಶಕ್ತಿ ಪ್ರತೀಕ ಭೀಷಣತ್ವವಾಗಿದೆ. ಅತ್ಯಂತ ಭಯಂಕರವಾದ ರೂಪವಾಗಿದೆ. ಭಯವನ್ನುಂಟು ಮಾಡುವ ಭೀಷಣನಾದ ಪರಮಾತ್ಮ ಆ ಭಯವನ್ನು ಕಳೆದು ಅಭಯವನ್ನೂ ನೀಡುತ್ತಾನೆ. ಇದೇ ಭದ್ರತ್ವವಾಗಿದೆ. ಸ್ಮರಣೆಮಾತ್ರದಿಂದ ಅಪಮೃತ್ಯುವನ್ನು ದೂರ ಮಾಡುವಂತಹವನು. ಮೃತ್ಯುವಿಗೇ ಮೃತ್ಯುವಾದವನು ನೃಸಿಂಹಸ್ವಾಮಿ ಮಾತ್ರಾ! ಮೃತ್ಯುವನ್ನು ಉಂಟುಮಾಡುವುದು ಅದನ್ನು ತೊಲಗಿಸುವುದು ಈ ಸ್ವಾಮಿಯ ಅನುಗ್ರಹವೇ ಆಗಿದೆ. ಅಂತಹಾ ನೃಸಿಂಹನಿಗೆ ನಮಸ್ಕಾರಗಳು.


ಆ ನಿಟ್ಟಿನಲ್ಲಿ ತರಿಗೊಂಡವೆಂಗಮಾಂಬ ಎಂಬ ಮಹಾಭಕ್ತೆ ನೃಸಿಂಹಸ್ವಾಮಿಯ ಮೇಲಿನ ತನ್ನ ಅಪಾರ ಭಕ್ತಿಯನ್ನು ಸಂಕೀರ್ತನೆಯ ರೂಪದಲ್ಲಿ ಸಾರುತ್ತಿದ್ದಾಳೆ. ವಿಷ್ಣುವಿನ ದಶಾವತಾರಗಳಲ್ಲಿ ಒಂದಾದ ನೃಸಿಂಹಾವತಾರದ ವರ್ಣನೆಯೂ ಇದೆ.

ಫೆಳ ಫೆಳ ನುಕ್ಕು ಕಂಬಮುನ ಚಿಟ್ಟುಂಗೆ ಬುಟ್ಟಿ, ಹಿರಣ್ಯ ಕಶ್ಯಪುನ್
ಚೆಳುವುಗ ಗರ್ಭಗೋಳಮುನು ಜಿಂಚಿ, ಸಮಂಚಿತ ರಕ್ತಧಾರಲನ್
ಗಳಗಳಂದ್ರಾವಿ. ಡಿಂಭಕುನಿಂ ಗಾಚಿನ ದೇವುಂಡವಂಚುಂ ಜಾಲಂಗಾಂ
ಗೊಲಚಿತಿನಯ್ಯ ! ನಿನ್ನುಂ ದರಿಗೊಂಡ ನೃಸಿಂಹಾ! ದಯಾಪಯೋನಿಧಿ!

ದಯಾ ಸಮುದ್ರನಾದ ಶ್ರೀ ತರಿಗೊಂಡ ಲಕ್ಷ್ಮೀನರಸಿಂಹದೇವಾ! ಉಕ್ಕುಕಂಬವನ್ನು ಫಳಫಳ ಎಂಬ ಧ್ವನಿಯಿಂದ ಸೀಳಿಕೊಂಡು ಅವತರಿಸಿದ ನರಸಿಂಹರೂಪಾ ! ಹಿರಣ್ಯಕಶಿಪುವನ್ನು ಕೊಂದು ಅವನ ಉದರವನ್ನು ಸೀಳಿ ರಕ್ತವನ್ನು ಗಳಗಳಧ್ವನಿಯೊಂದಿಗೆ ಪಾನ ಮಾಡಿ ಪರಮಬಾಲಭಕ್ತನಾದ ಪ್ರಹ್ಲಾದನನ್ನು ಪರಿರಕ್ಷಿಸಿದ ದೇವದೇವಾ ನಿನಗೆ ನನ್ನ ಪ್ರಣಾಮಗಳು.ಪ್ರಸ್ತುತ ಸಮಾಜದಲ್ಲಿ ಯಾರನ್ನು ಮಾತನಾಡಿಸಿದರೂ ಅವರ ಬಾಯಿಯಲ್ಲಿ ಯಾವುದೋ ಒಂದಕ್ಕೆ ಭಯ ಭಯ ಎಂಬ ಪದಗಳೇ ಕೇಳಿ ಬರುತ್ತದೆ. ನಮ್ಮ ಮನಸ್ಸಿನಲ್ಲಿ ಎರಡೇ ಭಾವನೆಗಳಿರುತ್ತವೆ ಅದು “ಇಷ್ಟ” ಮತ್ತೊಂದು “ಕಷ್ಟ” ಅಷ್ಟೇ ! “ಇಷ್ಟ” ಎಂಬ ಪದವನ್ನು ಸಂಭ್ರಮದಿಂದ ಸ್ವೀಕರಿಸುವ ನಾವು “ಕಷ್ಟ” ಎಂಬ ಪದವನ್ನು ಅಷ್ಟು ಸುಲಭವಾಗಿ ಸ್ವೀಕರಿಸುವುದಿಲ್ಲ.

ಆ “ಕಷ್ಟ”ವನ್ನು ತೆಗೆದುಕೊಳ್ಳುವಾಗಲೇ ಭಯವು ನಮ್ಮನ್ನು ಆವಹಿಸಿರುತ್ತವೆ. ಆದರೆ ಆ ಕಷ್ಟದಲ್ಲಿನ ಭಯವನ್ನು ದೂರಮಾಡುವುದೇ ನೃಸಿಂಹ ಮಂತ್ರರಾಜ. ಈ ಮಂತ್ರಜಪವೇ ನಮ್ಮೆಲ್ಲಾ ಭಯವನ್ನು ತೊಲಗಿಸುವ ಮಹಾಮಂತ್ರ ! ಆದ್ದರಿಂದ ಈ ಮಂತ್ರವನ್ನು ಪಠಿಸಿ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗೋಣ.

**ಗೋವಿಂದಾ ! ಗೋವಿಂದಾ !! ಗೋವಿಂದಾ !!!**



# ವೈಶಾಖ ಮಾಸದ ಕೂರ್ಮ ಜಯಂತಿ

- ಗಿರಿಜಾ ಎಸ್.ದೇಶಪಾಂಡೆ
97393 88300

ಹಿಂದೂ ಧರ್ಮದ ಚಾಂದ್ರಮಾನ ಪಂಚಾಂಗದ ಎರಡನೇಯ ಮಾಸವೇ ವೈಶಾಖ ಮಾಸ. ಇದನ್ನು ವೈಸಾಕ ಎಂದೂ ಕರೆಯುತ್ತಾರೆ. ಏಕೆಂದರೆ ಶ್ರೀಹರಿಗೆ ಪ್ರಿಯಮಾಸ ಇದಾಗಿದೆ. ಇದನ್ನು ಮಾಧವ ಮಾಸ ವೆಂತಲೂ ಕರೆಯುತ್ತಾರೆ. ಈ ಮಾಸದಲ್ಲಿ ಬೇಸಿಗೆಯ ಬಿಸಿಲು ಅತ್ಯಧಿಕ ವಾಗಿರುತ್ತದೆ. ಈ ಮಾಸವು ಜಯಂತಿಗಳ ಆಚರಣೆಯ ಮಾಸವೂ ಆಗಿದೆ. ಕೂರ್ಮಜಯಂತಿ ಈ ಮಾಸದಲ್ಲಿ ಆಚರಿಸುವ ರೀತಿಯಲ್ಲಿ ವಿಶಿಷ್ಟಾದ್ವೈತ ಮತ ಸ್ಥಾಪಕರಾದ ರಾಮಾನುಜಾಚಾರ್ಯರ ಜಯಂತಿ, ಅದ್ವೈತಮತ ಪ್ರತಿಪಾದಕರಾದ ಶಂಕರಾಚಾರ್ಯರ ಜಯಂತಿ, ಯೋಗ ತಂತ್ರಮಾರ್ಗದಲ್ಲಿ ಭಕ್ತರನ್ನು ಕಾಪಾಡುವ ನರಸಿಂಹ ಜಯಂತಿ. ಈ ಮಾಸದಲ್ಲೇ ಆಚರಿಸಲಾಗುವುದು ಅದಲ್ಲದೇ ಶುದ್ಧ ಸಪ್ತಮಿ ಗಂಗಾವತಾರ ದಿನ ಗಂಗಾನದಿಯ ಸ್ನಾನ ವಿಶೇಷ ಫಲ ನೀಡುವುದು. ದಶಮಿಯಂದು ವಾಯುಪುತ್ರನ ಜಯಂತಿ ಬರುವುದರಿಂದ ವೈಶಾಖ ಮಾಸವನ್ನು ಜಯಂತಿಗಳ ಮಾಸವೆಂದು ಕರೆಯುತ್ತಾರೆ.

ಈ ಮಾಸವು ಪ್ರಧಾನವಾಗಿ ಬಿಸಿಲಿನ ತಾಪವನ್ನುಂಟು ಮಾಡುವ ಮಾಸವಾಗಿದೆ. ಪ್ರಾತಃ ಸ್ನಾನ, ದೇವರಿಗೆ ಗಂಧಲೇಪನ, ಶೀತಲ ಜಲದಾನ ಮಾಡುವುದರಿಂದ ಮಧುಸೂದನ ಪ್ರೀತನಾಗುವನು ಎಲ್ಲ ಮಾಸಗಳಲ್ಲಿ ಶ್ರೇಷ್ಠ ಮಾಸ ಇದಾಗಿದೆ. ಧರ್ಮಕಾರ್ಯಮಾಡಲು, ವಿಷ್ಣುವಿನ ಪ್ರೀತಿ ಸಂಪಾದಿಸಲು ಲೋಕದಲ್ಲಿ ಈ ಮಾಸಕ್ಕೆ ಸದೃಶವಾದ ಬೇರೊಂದು ಮಾಸ ವಿಲ್ಲ.

**"ವೈಶಾಖದ ಪುಣ್ಯ ಸ್ನಾನದ ಮಹತ್ವ"** - ಈ ಮಾಸದಲ್ಲಿ ಶ್ರೇಷ್ಠ ನದಿಗಳ ಸ್ನಾನಕ್ಕಿಂತ ಜಲದಾನ, ಜಲಸಂಗ್ರಹಣೆಗೆ ಮಹತ್ವವಿದೆ. ಮನೆಗೆ ಬಂದ ಅತಿಥಿಗಳಿಗೆ ನೀರು, ಪಾನಕ, ಮಜ್ಜಿಗೆ ಅಂತಹ ಪದಾರ್ಥಕೊಟ್ಟು ಉಪಚರಿಸುವುದು ಶ್ರೇಷ್ಟವಾಗಿದೆ.

ಈ ಮಾಸದಲ್ಲಿ ಆಚರಿಸುವ ಕೂರ್ಮಜಯಂತಿ ಜಲಾಚರ ರೂಪವಾದ ಆಮೆ ರೂಪದಲ್ಲಿ ಅವತರಿಸಿದ ಶ್ರೀಹರಿ ಅವತಾರವಾಗಿದ್ದು ಅದಕ್ಕೆ ಪುರಾಣದ ಹಿನ್ನೆಲೆ ಇರುವುದು ತಿಳಿಯುತ್ತದೆ.

**"ಪೌರಾಣಿಕ ಹಿನ್ನೆಲೆ"** ದೇವದಾನವರು ಅಮೃತಕ್ಕಾಗಿ ಸಮುದ್ರ ಮಂಥನ ಸಂದರ್ಭದಲ್ಲಿ ವಾಸುಕಿಯನ್ನು ಹಗ್ಗಮಾಡಿ ಮಂದರಪರ್ವತ ಕಡಗೋಲಾಗಿಸಿ ದೈತ್ಯ ಚಕ್ರವರ್ತಿ ಬಲಿಯ ನೇತೃತ್ವದಲ್ಲಿ ದಾನವರೂ ಇಂದ್ರನ ನೇತೃತ್ವದಲ್ಲಿ ದೇವತೆಗಳೂ ಸಮುದ್ರ ಕಡೆಯುತ್ತಾರೆ. ಆದರೆ ಮಂದರ ಪರ್ವತವು ಬಹಳ ಭಾರವಿದ್ದುದರಿಂದ ಸಮುದ್ರದಲ್ಲಿ ಕುಸಿಯಲು ಪ್ರಾರಂಭಿಸುತ್ತದೆ. ಆಗ ಶ್ರೀಮಾನ್ ವಿಷ್ಣುವು ಆಮೆಯ ರೂಪದಲ್ಲಿ ಅವತರಿಸಿ ಮಂದರ ಪರ್ವತ ತನ್ನ ಬೆನ್ನ ಮೇಲೆ ಇಟ್ಟುಕೊಂಡು ಅದು ಕುಸಿಯದಂತೆ ನೋಡಿಕೊಳ್ಳುತ್ತಾನೆ. ಈ ರೀತಿಯಲ್ಲಿ ಪರಮಾತ್ಮನು ಮೊದಲು ನರಸಿಂಹ ಅವತಾರ ತಾಳಿದಂತೆ ಕೂರ್ಮಾವತಾರ ತಾಳಿ ದೇವತೆಗಳಿಗೆ ರಾಕ್ಷಸರಿಗೆ ಸಹಾಯ ಮಾಡುತ್ತಾನೆ. ಆ ಕೂರ್ಮಾವತಾರದ ಪ್ರಯುಕ್ತವೇ ಕೂರ್ಮಾವತಾರಿಯಾದ ವಿಷ್ಣುವನ್ನು ಪೂಜಿಸಿ ಧ್ಯಾನಿಸುವುದೇ ಕೂರ್ಮಜಯಂತಿಯಾಗಿ ಆಚರಿಸಲ್ಪಡುತ್ತದೆ. ಕೂರ್ಮಾವತಾರ ಅವಿರ್ಭವಿಸಿದ ಮಹಾವಿಷ್ಣು ತನ್ನದೇ ಆದ ಅವತಾರದಲ್ಲಿ ಉದ್ಘೋಷಿಸಿದ ಮಹಾಮಂತ್ರಗಳೇ **"ಕೂರ್ಮಪುರಾಣ"** ಇದನ್ನು ಪ್ರಪ್ರಥಮವಾಗಿ

ಕೂರ್ಮಾವತಾರಿ ಮಹಾವಿಷ್ಣುವು ನಾರದರಿಗೆ ಬೋಧಿಸಿದನು, ನಂತರ ನಾರದರು ಇದನ್ನು ನೈಮಿಷಾರಣ್ಯ ವಾಸಿಗಳಿಗೆ ಬೋಧಿಸಿದರು. ಇದರಲ್ಲಿ ಮುಖ್ಯವಾಗಿ ''ಧರ್ಮೋ ಹತೋಹಂತಿ ಧರ್ಮೋರಕ್ಷತಿ ರಕ್ಷಿತಃ'' ಎಂಬ ಮಹಾವಾಕ್ಯ ಹೇಳಲಾಗಿದೆ.

ಭಗವಂತನ ಕೂರ್ಮಾವತಾರದ ದೇವಾಲಯಗಳು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕೂರ್ಮಾಯಿ ಮತ್ತು ಕೂರ್ಮಂನಲ್ಲಿವೆ. ಕರ್ನಾಟಕದ ಚಿತ್ರದುರ್ಗಜಿಲ್ಲೆಯ ಹೊಸಕೋಟೆ ತಾಲೂಕಿನ ಗವಿ ರಂಗಾಪುರದಲ್ಲಿದೆ.

**“ಶ್ರೀಕೂರ್ಮಂ ದೇವಾಲಯ”** ಆಂಧ್ರಪ್ರದೇಶ ಶ್ರೀಕಾಕುಲಂ ಜಿಲ್ಲೆಯ ಗಾರ ಮಂಡಲದಲ್ಲಿರುವ ಶ್ರೀಕೂರ್ಮಂ ಎಂಬ ಗ್ರಾಮದಲ್ಲಿ ಶ್ರೀವಿಷ್ಣುವಿನ ಕೂರ್ಮಾವತಾರದ ಬಲು ಪ್ರಸಿದ್ಧ ಹಾಗೂ ಸಾಕಷ್ಟು ಪುರಾತನವಾದ ಅದ್ಭುತ ದೇವಾಲಯವಿದೆ. ಇಲ್ಲಿ ದೊರೆತಿರುವ ಶಾಸನಗಳ ಪ್ರಕಾರ ಇದರ ಕಾಲ ೧೨ ನೇಯ ಶತಮಾನ ಶ್ರೀರಾಮಾನುಜಾಚಾರ್ಯರು ಪೂರಿಯ ಜಗನ್ನಾಥದಿಂದ ಪ್ರಭಾವಿತರಾಗಿ ಇಲ್ಲಿ ಕಾರ್ಯಕ್ಷೇತ್ರವನ್ನು ಮತ್ತೆ ಪ್ರವರ್ಧಮಾನಕ್ಕೆ ಕರೆತಂದರು. ನಂತರ ಈ ಕ್ಷೇತ್ರವು ವಿಜಯನಗರ ಅರಸರ ಸುಪರ್ದಿಗೆ ಸೇರಿತು. ಈ ದೇವಾಲಯದಲ್ಲಿ ಕೂರ್ಮನಾಥನನ್ನಾಗಿ ಪೂಜಿಸಲಾಗುತ್ತದೆ. ಈ ಸಾಲಿಗ್ರಾಮ ಮೂಲ ಸ್ಥಾನವೆಂದು ಪರಿಗಣಿಸಲಾಗಿದೆ. ಕೂರ್ಮೈದೇವಾಲಯ ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಪಲಮನೇರು ಮಂಡಲದಲ್ಲಿರುವ ಕೂರ್ಮಾಯಿ ಗ್ರಾಮವೂ ಸಹ ಕೂರ್ಮನಾಥನ ದೇವಾಲಯವಿರುವ ಧಾರ್ಮಿಕ ದೇವಸ್ಥಾನವಾಗಿದೆ. ಇಲ್ಲಿರುವ ವಿಷ್ಣುವನ್ನು ಕೂರ್ಮವರದ ರಾಜಸ್ವಾಮಿಯೆಂದು ಪೂಜಿಸಲಾಗುತ್ತದೆ.

'ಗವಿರಂಗನಾಥಸ್ವಾಮಿ ದೇವಾಸ್ಥಾನ' ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಬಳಿ ಇರುವ ಗವಿರಂಗಾಪುರ ಒಂದು ಗ್ರಾಮ. ಗವಿಯಲ್ಲಿ ನೆಲೆಸಿರುವ ರಂಗನಾಥಸ್ವಾಮಿ ಕೂರ್ಮಾವತಾರದಲ್ಲಿರುವುದು ವಿಶೇಷ ಹಾಗಾಗಿ ಇದೊಂದು ಪ್ರಸಿದ್ಧ ಕೂರ್ಮಾವತಾರಿ ವಿಷ್ಣುವಿನ ದೇವಸ್ಥಾನವಾಗಿದೆ.

ಈ ವರ್ಷ ಮೇ 5 ರಂದು ವಿಷ್ಣುವಿನ ಅವತಾರವಾದ ಕೂರ್ಮ ಜಯಂತಿಯನ್ನು ಆಚರಿಸಿ ಭಗವಂತನ ಕೃಪೆಗೆ ಪಾತ್ರರಾಗೋಣ.

## ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ
## ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




**27.01.2023 ರಂದು ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ. ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ, ಅಂಗಪ್ರದಕ್ಷಿಣೆ, ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು ಓ.ಟಿ.ಪಿ. ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು, ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.**






# ಮೋತಕಪಲ್ಲಿ ಶ್ರೀ ಬಲಭೀಮಸೇನ

ಮನೋಹರ ಜೋಶಿ ಕಲಬುರಗಿ
98869 19689

**ವಾ**ಯುದೇವರು ತಮ್ಮ ಮೂಲ ರೂಪದಿಂದ ತ್ರೇತಾಯುಗದಲ್ಲಿ ಹನುಮಂತರಾಗಿ ಜನಿಸಿದರು. ದ್ವಾಪರಯುಗದಲ್ಲಿ ಭೀಮಸೇನರಾಗಿ ಹಾಗೂ ಕಲಿಯುಗದಲ್ಲಿ ಮಧ್ವರಾಗಿ ಭಗವಂತನ ವಿವಿಧ ರೂಪಗಳು ಆರಾಧಿಸಿದರು. ಹನುಮಂತ ದೇವರ ರೂಪದಿಂದ ಭರತ ಭೂಮಿಯ ಅನೇಕ ಸ್ಥಳಗಳಲ್ಲಿ ಪವಮಾನರಾಗಿ ನೆಲಸಿದರು. ಅವುಗಳೆಲ್ಲವೂ ಪಾವನ ಕ್ಷೇತ್ರಗಳಾಗಿ ಬೆಳಗಿದರು. ಅಂತಹ ಪುಣ್ಯ ಕ್ಷೇತ್ರಗಳಲ್ಲಿ ಕಲಬುರಗಿ ಜಿಲ್ಲೆಯ ಮೋತಕಪಲ್ಲಿ ಕ್ಷೇತ್ರವು ಕೂಡ ಪ್ರಮುಖವಾದ ಭಾರತೀಶನ ಸ್ಥಳ. ಇಲ್ಲಿ ವಾಯುದೇವರು ಹನುಮ - ಭೀಮ ರೂಪಗಳಿಂದ ನೆಲಸಿ ಭಕ್ತರನ್ನು ಅನುಗ್ರಹಿಸುತ್ತಿರುವರು. ಉತ್ತರ ಕರ್ನಾಟಕದ ತೆಲಂಗಾಣ ಗಡಿ ಭಾಗದಲ್ಲಿರುವ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಮೋತಕಪಲ್ಲಿಯು ಆಂಜನೇಯ ಸ್ವಾಮಿಯ ಜಾಗ್ರತವಾದ ಸ್ಥಳವಾಗಿದೆ. ತೆಲಂಗಾಣ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಿಂದ ದೇಶದ ನಾನಾ ಮೂಲೆಗಳಿಂದ ಭಕುತ ಸಾಗರವು ಸೇರುವುದು.

### ಮೋತಕಪುರ ಕ್ಷೇತ್ರ:

'ಮೋತಕಪುರ' ಎಂದು ಕೂಡ ಗುರುತಿಸುವ "ಮೋತಕಪಲ್ಲಿ " ಪುರಾಣ ಪ್ರಸಿದ್ಧ ಕ್ಷೇತ್ರ. ಈ ಸ್ಥಳ ಮಹಿಮೆಯ ಕುರಿತಾಗಿ ಸ್ಕಂದ ಪುರಾಣದಲ್ಲಿ ಉಲ್ಲೇಖಿತವಾಗಿದೆ. ವಾಯುರೂಪದ ದ್ವಿತೀಯ ಅವತಾರ ಭೀಮಸೇನನ ನೆಲೆಯೂರು ನಾರದ ಮಹಾಋಷಿಗಳು ತಪಗೈದ ತಾಣ ಅನೇಕ ಋಷಿ-ಮುನಿಗಳು ತಪಸ್ಸು ಆಚರಿಸಿದ ಪಾವನ ಭೂಮಿ. ಭೂವೈಕುಂಠ ತಿರುಪತಿಗೆ ಈ ಕ್ಷೇತ್ರವು ಪೂರ್ವ ಮಹಾದ್ವಾರ. ಸ್ವಯಂ ಉದ್ಭವ ಮೂರ್ತಿ ಬಲಭೀಮಸೇನನಿಗೆ ತಿರುಪತಿಯ ತಿಮ್ಮಪ್ಪನಿಗೆ ಸಲ್ಲುವ ಸೇವೆಗಳಂತೆ ಇಲ್ಲಿಯೂ ಸಲ್ಲಿಸಲಾಗುತ್ತದೆ. ಈ ಕ್ಷೇತ್ರದಲ್ಲಿ **"ಜೈ ಹನುಮಾನ, ಜೈಶ್ರೀರಾಂ"** ಘೋಷಣೆ ಜೊತೆಗೆ ಗೋವಿಂದಾ ಗೋವಿಂದಾ ಎಂದು ಭಕ್ತರು ಹೇಳುವುದು ರೂಢಿಯಲ್ಲಿದೆ.

**ಕ್ಷೇತ್ರ ಮಹಿಮೆ:**

ಕಿಂ ಪುರುಷಃಖಂಡದಿಂದ ವಾಯುದೇವರು ಹನುಮನ ರೂಪದಿಂದ ಕಲಿಯುಗದ ದೈವ ಶ್ರೀನಿವಾಸನ ಕಲ್ಯಾಣೋತ್ಸವಕ್ಕೆ ಈ ಕ್ಷೇತ್ರದ ಮೂಲಕ ತಿರುಪತಿಗೆ ಪ್ರಯಾಣಿಸುತ್ತಿದ್ದರು. ಈ ಪ್ರಾಂತ್ಯದಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದ ಋಷಿ ಮುನಿಗಳ ಭಕ್ತಿಗೆ ಮೆಚ್ಚಿ ದರ್ಶನ ನೀಡಿದರು. ಮುಂದೆ ಈ ಸ್ಥಳದಲ್ಲಿ ನೆಲಸಿ ಅನುಗ್ರಹಿಸಲು ಋಷಿ ಮುನಿಗಳು ಬೇಡಿಕೊಂಡಾಗ ಸಮ್ಮತಿಸಿದರು.ಕಾಲ ಕ್ರಮೇಣ ಇಲ್ಲಿಯ ಮಾಂಡಲೀಕ ರಾಜನ ಸ್ವಪ್ನದಲ್ಲಿ "ನಿನ್ನ ಕ್ಷೇತ್ರದಲ್ಲಿ ಮುತ್ತಗದ ಗಿಡದ ಬುಡದಲ್ಲಿರುವ ದೊಡ್ಡ ಕಲ್ಲು ಬಂಡೆಯಲ್ಲಿ ಹುದಗಿದ್ದೇನೆ ಶೋಧನ ಮಾಡಿ ಆಲಯ ನಿರ್ಮಿಸು" ಎಂದು ಸ್ವಪ್ನದಲ್ಲಿ ಹೇಳಿದಂತಾಯಿತು. ಸ್ವಪ್ನ ಸೂಚನೆಯಂತೆ ಬಂಡೆಗಳನ್ನು ಪತ್ತೆ ಹಚ್ಚಿ ಛೇದಿಸಿದಾಗ ಬಂಡೆ ಒಳಗಡೆ ಈಗೀನ ಗರ್ಭಗೃಹದಲ್ಲಿರುವ ಸುಂದರ ಮುಖ್ಯಪ್ರಾಣ ವಿಗ್ರಹ ದೊರೆಯಿತು. ಭವ್ಯ ದೇವಾಲಯ ನಿರ್ಮಿಸಿ ವಿಗ್ರಹವು ಪ್ರತಿಷ್ಠಾಪಿಸಲಾಯಿತು. ಈ ದೇವಾಲಯವು ವಿಕ್ರಮಾದಿತ್ಯನ ಕಾಲದಲ್ಲಾಗಿದೆ ಎಂದು ಇತಿಹಾಸವಿದೆ ವಿಗ್ರಹ ಮುತ್ತುಗದ ಎಲೆ ಗಿಡದ ಬುಡದಲ್ಲಿ ದೊರೆತಿರುವುದರಿಂದ ಈ ಕ್ಷೇತ್ರಕ್ಕೆ ಮೋತುಕಪುರ, ಮೋತಂಪಲ್ಲಿ ಎಂದು ಹೆಸರು ಬಂದಿತು. ಕಾಲ ಕ್ರಮೇಣ ಆಡು ಭಾಷೆಯಲ್ಲಿ ಮೋತಕಪಲ್ಲಿ ಆಗಿರಬಹುದೆಂದು ಐತಿಹ್ಯವಿದೆ.

ನೂರಾರು ವರುಷಗಳು ಉರಳಿದಂತೆ ಕಲಿ ಪ್ರಭಾವದಿಂದ ಕಳ್ಳರ ಗುಂಪೊಂದು ದೇವರ ವಿಗ್ರಹದ ಕೆಳಗೆ ಗುಪ್ತ ನಿಧಿ ಇರಬಹುದೆಂದು ಶಂಕಿಸಿ ಮಧ್ಯರಾತ್ರಿಯಲ್ಲಿ ವಿಗ್ರಹ ಛಿನ್ನ ಮಾಡಿ ಅಗೆದರು. ಕೊನೆಗೂ ನಿಧಿ ಇಲ್ಲದಿರುವುದನ್ನು ಮನಗೊಂಡು ಹತಾಶರಾಗಿ ಯಾರಿಗೂ ತಿಳಿಯಬಾರದೆಂದು ವಿಗ್ರಹದ ಎಲ್ಲ ಅವಶೇಷಗಳು ಪುಷ್ಕರಣಿಯಲ್ಲಿ ವಿಸರ್ಜಿಸಿದರು. ಈ ಘಟನೆಯ ನಂತರ ಊರ ಹಿರಿಯರು, ಅರ್ಚಕರು ಸೇರಿ ಇನ್ನೊಂದು ಹನುಮಂತ ದೇವರ ಮೂರ್ತಿಯನ್ನು ಸುಮಾರು ೩ ಅಡಿ ಎತ್ತರದ ವಿಗ್ರಹ ತಯಾರಿಸಿ ಒಂದು ಶುಭದಿನದಲ್ಲಿ ಪ್ರತಿಷ್ಠಾಪಿಸಲು ನಿರ್ಧರಿಸಿದರು. ಪ್ರತಿಷ್ಠಾಪನೆ ಪೂರ್ವದಲ್ಲಿಯೇ ಆ ಮೂರ್ತಿ ಆರು ಅಡಿ ಎತ್ತರದವರೆಗೆ ಬೆಳೆದು ಗರ್ಭಗೃಹದ ದ್ವಾರದ ಮೂಲಕ ತೆಗೆದುಕೊಂಡು ಹೋಗಲಾಗದೆ, ಮೊದಲಿನ ಮೂಲ ಸ್ಥಳದಲ್ಲಿ ಪ್ರತಿಷ್ಠಾಪಿಸಲು ಸಾಧ್ಯವಾಗದೆ ಹೋಯಿತು.ಈ ವಿಗ್ರಹವು



ಈಗಲೂ ದೇವಾಲಯದ ಆವರಣ ಮಂಟಪದಲ್ಲಿ ಇದ್ದು ಇಂದಿಗೂ ನೋಡಬಹುದಾಗಿದೆ.

ಈ ಘಟನೆಯಿಂದ ಚಿಂತ್ರಾಕಾಂತರಾಗಿದ್ದ ಅರ್ಚಕರಿಗೆ ಮತ್ತೆ ಸ್ವಪ್ನದಲ್ಲಿ ದರುಶನವಿತ್ತು ನನ್ನ ಅವಯವಗಳು ಪುಷ್ಕರಣಿಯಲ್ಲಿ ಜಲವಾಸವಾಗಿವೆ. ಅವುಗಳನ್ನು ಹೊರತೆಗೆದು ಪುನಃ ಜೋಡಿಸಿ, 41 ದಿನಗಳ ಪರ್ಯಂತ ಗರ್ಭಗುಡಿ ಬಾಗಿಲು ಮುಚ್ಚಿ, ಹಾಲು, ಅನ್ನ,ನೈವೇದ್ಯ ಮಾತ್ರ ಮಾಡಬೇಕೆಂದು ಕನಸಿನಲ್ಲಿ ಆಜ್ಞೆ ಮಾಡಿದ. ಸ್ವಪ್ನ ಸೂಚನೆಯಂತೆ ವಿಗ್ರಹದ ಅವಶೇಷಗಳು ದೇವಾಲಯದ ಪುಷ್ಕರಣಿಯಿಂದ ಹೊರತೆಗೆದರು. ಅವುಗಳೆಲ್ಲಾ ಗರ್ಭಗುಡಿಯಲ್ಲಿ ಇಟ್ಟು ದ್ವಾರ ಮುಚ್ಚಲಾಯಿತು. ಆದರೆ ಒಂದು ದಿನ ಬಾಕಿ ಇರುವಾಗಲೇ 40 ನೇ ದಿನಕ್ಕೆ ಗರ್ಭಗುಡಿಯ ದ್ವಾರ ತೆಗೆದು ನೋಡಿದಾಗ ವಿಗ್ರಹವು ಸಂಪೂರ್ಣವಾಗಿ ಕೂಡಿ ಕೊಂಡಿತ್ತಾದರೂ ಎದೆ ಮತ್ತು ಹಣೆಯ ಭಾಗದಲ್ಲಿ ರಕ್ತ ಸ್ರಾವ ಕಾಣಿಸಿಕೊಂಡಿತು. ತಮ್ಮ ತಪ್ಪಿನ ಪಶ್ಚಾತ್ತಾಪ ಪಡುತ್ತಿದ್ದ ಪುರ ಜನರಿಗೆ ನನ್ನ ಎದೆಯಲ್ಲಿ ನರಸಿಂಹ ಸಾಲಿಗ್ರಾಮ ಹಣೆಯಲ್ಲಿ ವಾಸುದೇವ ಸಾಲಿಗ್ರಾಮ ಇಟ್ಟು ಪೂಜಿಸಿದರೆ ರಕ್ತಸ್ರಾವ ನಿಲ್ಲುತ್ತದೆ. ಜೊತೆಗೆ ಛಿನ್ನವಾದ ದೋಷ ವಿರುವುದಿಲ್ಲ ಎಂದು ಆಂಜನೇಯನ ಆದೇಶವಾಗುತ್ತದೆ. ಇಂದಿಗೂ ಕೂಡ ವಿಗ್ರಹದ ಹಣೆಯ ಮತ್ತು ವಕ್ಷಸ್ಥಳದಲ್ಲಿ ಈ ಸಾಲಿಗ್ರಾಮಗಳು ನೋಡಬಹುದಾಗಿದೆ.

**ಬಲಭೀಮಸೇನನ ವೈಶಿಷ್ಟ್ಯ:**

**"ಭೀಮಸೇನ ಸಮೋ ನಾಸ್ತಿ"** ಯುಕ್ತಿಯಂತೆ ಭಕ್ತಿ, ಜ್ಞಾನ, ವೈರಾಗ್ಯ ಪಾಂಡಿತ್ಯ ಪಟುತ್ವದಲ್ಲಿ ಶೂರ ಹಾಗೂ ಬಲದಲ್ಲಿ ಭೀಮಸೇನರಿಗೆ ಸಮರಿಲ್ಲ. ಹನುಮ, ಭೀಮ ರೂಪಗಳಿಂದ ನೆಲಸಿ ಬೇಡಿದವರಿಗೆ ವರ ನೀಡುವ ಮೋತಕಪಲ್ಲಿ ಮುಖ್ಯ ಪ್ರಾಣನ ವಿಗ್ರಹವು ಕೈಯಲ್ಲಿ ಸೌಗಂಧಿಕಾ ಪುಷ್ಪ ಹಿಡಿದಿರುವುದರಿಂದ ಇಲ್ಲಿ ಹನುಮಂತನು ಬಲಭೀಮಸೇನನಾಗಿದ್ದಾನೆ. ಸಹಸ್ರಾರು ವರ್ಷಗಳ ಪುರಾತನ ಇತಿಹಾಸ ಹೊಂದಿರುವ ಈ ಬಲಭೀಮಸೇನನು

ನಾಡಿನ ಆರಾಧ್ಯ ದೈವ. ಅನೇಕ ಮನೆತನಗಳಿಗೆ ಕುಲಸ್ವಾಮಿ, ಬಲಭೀಮಸೇನ ದಿವ್ಯ ಸನ್ನಿಧಾನದಲ್ಲಿ ಪ್ರತಿ ಶುಕ್ರವಾರ ರಾತ್ರಿ ವಿಗ್ರಹಕ್ಕೆ ತೈಲಭ್ಯಂಗನ ಸೇವೆ ಶನಿವಾರದಂದು ಪಂಚಾಮೃತ ಅಭಿಷೇಕಾದಿಗಳು ಹಾಗೂ ಅಮಾವಾಸ್ಯೆ ಹುಣ್ಣಿಮೆ ದಿನಗಳಂದು ವಿಶೇಷ ಪೂಜಾ ಕೈಂಕರ್ಯಗಳು ಜರಗುತ್ತವೆ.

**ದೇವಾಲಯದ ರಚನೆ :**

ಬಲಭೀಮಸೇನನ ದೇವಸ್ಥಾನಕ್ಕೆ ಸಹಸ್ರಾರು ವರುಷಗಳ ಇತಿಹಾಸವಿದೆ. ದಕ್ಷಿಣಾಭಿಮುಖವಾಗಿದ್ದು ಸುಮಾರು ೧೦-೧೨ ನೇ ಶತಮಾನದ ಕಾಲದ್ದಾಗಿದೆ. ಈ ದೇವಾಲಯವು ಗರ್ಭಗೃಹ, ವಿಶಾಲವಾದ ಸಭಾಮಂಟಪ ಹಾಗೂ ಮುಖ ಮಂಟಪಗಳು ಹೊಂದಿದೆ. ಸಭಾ ಮಂಟಪಗಳಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯ ಕಂಬಗಳು ಕಾಣಬಹುದಾಗಿದೆ. ಈ ಎರಡು ಕಂಬಗಳ ಮೇಲೆ ಶಾಸನಗಳು ಕಂಡು ಬರುತ್ತವೆ. ಗರ್ಭಗೃಹದ ಮೇಲೆ ಭವ್ಯ ಶಿಖರ ವಿದ್ದು ಮಹಾದ್ವಾರದ ಮುಂದೆ ಮೂರು ಹಂತದ ಗೋಪುರವಿದೆ. ದೇವಾಲಯದ ಗರ್ಭಗೃಹದಲ್ಲಿ ಸ್ವಯಂ ಉದ್ಭವ ಆಂಜನೇಯ ವಿಗ್ರಹವಿದೆ.ದೇವಾಲಯದ ಹೊರಭಾಗದ ವಿಶಾಲವಾದ ಪ್ರಾಂಗಣದ ಒಂದು ತೀರದ ಮೂಲೆಯಲ್ಲಿ ಪವಿತ್ರ ಪುಷ್ಕರಣಿ ಹೊಂದಿದೆ.

**ಬಲಭೀಮನಿಗೆ ಬ್ರಹ್ಮರಥೋತ್ಸವ :**

ಸತತ 11 ದಿನಗಳವರೆಗೆ ನಡೆಯುವ ಬಲಭೀಮಸೇನನ ಜಾತ್ರೆಯು ಈ ಭಾಗದಲ್ಲಿ ಪ್ರಸಿದ್ಧವಾದುದ್ದು. ಮಾರ್ಗಶಿರ ಮಾಸದ ಶುದ್ಧ ದಶಮೀ ದಿನದಂದು ಧ್ವಜಾರೋಹಣ ನೆರವೇರುತ್ತದೆ. ಮಾರ್ಗಶಿರ ಮಾಸದ ಹೊಸ್ತೂಲ ಹುಣ್ಣಿಮೆಯ ಮಧ್ಯರಾತ್ರಿ ಜರಗುವ ಮಹಾರಥೋತ್ಸವ ಇಲ್ಲಿನ ವಿಶೇಷತೆ. ಭೀಮಸೇನ ಕೀಚಕನ ಮತ್ತು ದುಷ್ಟ ಶಕ್ತಿಗಳನ್ನು ಸಂಹಾರ ಮಾಡಿದುದರ ದ್ಯೋತಕವಾಗಿ ಇಲ್ಲಿ ಮಧ್ಯ ರಾತ್ರಿಯಲ್ಲಿ ರಥೋತ್ಸವ ಜರುಗುತ್ತದೆ.

**ತಲುಪುವ ಮಾರ್ಗ :**

ಜಿಲ್ಲಾ ಕೇಂದ್ರ ಕಲಬುರ್ಗಿ ಇಂದ ಮೋತಕಪಲ್ಲಿಗೆ ಹೋಗಿ ಬರಲು ಸಾರಿಗೆ ಸೌಲಭ್ಯವಿದೆ. ಸೇಡಂನಿಂದ ಗುರುಮಠಕಲ್ ಕಡೆ ಹೊರಡುವ ಬಹುತೇಕ ಎಲ್ಲಾ ಸಾರಿಗೆ ಬಸ್ಸುಗಳು ಮೋತಕಪಲ್ಲಿ ಮೂಲಕ ಹಾದು ಹೋಗುತ್ತವೆ. ಸೇಡಂ, ಗುರುಮಠಕಲ್‌ನಿಂದ ಉತ್ತಮ ಸಾರಿಗೆ ಸೌಲಭ್ಯವಿದ್ದು ಸೇಡಂ ತಾಲ್ಲೂಕು ಕೇಂದ್ರದಿಂದ 30 ಕಿ.ಮೀ. ಹಾಗೂ ಗುರುಮಠಕಲ್ ಪಟ್ಟಣದಿಂದ 11 ಕಿ.ಮೀಟರ್ ಅಂತರದಲ್ಲಿದೆ.



ತಿರುಮಲ ತಿರುಪತಿ ದೇವಸ್ಥಾನಗಳು

## ಜಮ್ಮಲಮಡುಗು

## ಶ್ರೀ ಭೂ ಸಮೇತ ಶ್ರೀ ನಾರಾಪುರ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2023 ಮೇ 4 ರಿಂದ 12 ರ ವರೆಗೆ**

**04-05-2023 ಗುರುವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**05-05-2023 ಶುಕ್ರವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**06-05-2023 ಶನಿವಾರ**
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ: ಸಿಂಹವಾಹನ

**07-05-2023 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಹನುಮದ್ವಾಹನ

**08-05-2023 ಸೋಮವಾರ**
ಹಗಲು: ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**09-05-2023 ಮಂಗಳವಾರ**
ಹಗಲು: ಸರ್ವಭೂಪಾಲವಾಹನ
ರಾತ್ರಿ: ಗಜವಾಹನ

**10-05-2023 ಬುಧವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**11-05-2023 ಗುರುವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**12-05-2023 ಶುಕ್ರವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

# ಹನುಮನ ನೋಡಿದಿರಾ

- ಹನುಮಂತ ಮ. ದೇಶಕುಲಕರ್ಣಿ
9480364915



ಶ್ರೀ ರಾಮಚಂದ್ರನ ಪರಮ ಭಕ್ತನಾದ ಹನುಮಂತನು ಅವತಾರ ಮಾಡಿದ ದಿನ. ಈ ದಿನ ಬಹಳ ಮಹತ್ವದ್ದು. ಹನುಮಂತನ ತಂದೆ ಕೇಸರಿ ಎಂಬ ಶ್ರೇಷ್ಠ ಕಪಿ, ತಾಯಿ ಅಂಜನಾದೇವಿ, ಒಳ್ಳೆಯ ಸಾಧ್ವಿ. ಅವಳು ಋಷಿಗಳ ಅನುಮತಿಯಿಂದ ಇವನನ್ನು ಪಡೆದಳು. ಆದ್ದರಿಂದ ಇವನಿಗೆ ಆಂಜನೇಯ ಎಂದು ಕರೆಯುವುದುಂಟು. ಆ ರಾಮದೂತನನ್ನು ನೆನೆಯುವ ದಿನವೇ ಹನುಮ ಜಯಂತಿ. ತ್ರೇತಾಯುಗದಲ್ಲಿ ರಾಮಭಕ್ತನಾಗಿ ಅವತಾರ ಮಾಡಿದ ಅವನ ಅನೇಕ ವಿಧವಾದ ಶಕ್ತಿಯನ್ನು ನಾವು ರಾಮಾಯಣದಲ್ಲಿ ತಿಳಿದುಕೊಳ್ಳಬಹುದು. ನಮ್ಮ ಜೀವನದಲ್ಲಿ ಎಲ್ಲ ಅವಸ್ಥೆ ಯಲ್ಲಿಯೂ ಅವನನ್ನು ಸ್ಮರಿಸುವುದು ಅವಶ್ಯಕ.


ಉತ್ತಮ ಬುದ್ಧಿವಂತನಾಗುವುದಕ್ಕೆ, ಶಾರೀರಿಕ ಬಲ ಮತ್ತು ಮಾನಸಿಕ ಬಲ ಇವೆರಡೂ ಬೇಕು. ನಾವು ಮಾಡುವ ಕಾರ್ಯಗಳಲ್ಲಿ ಯಶಸ್ಸು ದೊರಕುವುದಕ್ಕಾಗಿ ಮತ್ತು ಈಗಿನ ಒಂದು ದಿನದ ಪ್ರತಿ ಹಂತ ಹಂತದಲ್ಲೂ ನಮ್ಮಲ್ಲಿ ಧೈರ್ಯ ಕಡಿಮೆಯಾಗುತ್ತಲಿದೆ ಆ ಧೈರ್ಯ ಕುಂದದೆ ಇರುವುದಕ್ಕೆ, ಭಯರಹಿತವಾದ ಜೀವನವನ್ನು ಸಾಧಿಸುವುದಕ್ಕೆ, ನಮ್ಮ ನಮ್ಮ ಧರ್ಮವನ್ನು ಆಚರಿಸದೆ ಇರುವುದಕ್ಕೆ ಕಾರಣವಾದ ನಮ್ಮಲ್ಲಿರುವ ಆಲಸ್ಯತನವು - ಅದನ್ನು ದೂರ ಮಾಡುವುದು ಬೇಕು, ಅದರ ಸಂಪಾದನೆಗೂ ಆಂಜನೇಯನ ಸ್ಮರಣೆ, ಪ್ರಾರ್ಥನೆ ಇದು ಅತ್ಯಾವಶ್ಯಕ.

ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಂ ಅರೋಗತಾ
ಅಜಾಡ್ಯಂ ವಾಕ್ ಪಟು ತ್ವಂ ಚ ಹನುಮತ್ ಸ್ಮರಣಾತ್ ಭವೇತ್॥

ಈ ಶ್ಲೋಕವನ್ನು ಎಲ್ಲರೂ ಪ್ರತಿನಿತ್ಯ ಹೇಳಬೇಕು. ಅದರಲ್ಲಿಯೂ ಹನುಮ ಜಯಂತಿಯ ದಿನ ಮರೆಯುವ ಹಾಗಿಲ್ಲ ಕಿರಿಯರಿಂದ ಹಿಡಿದು ಮನೆಯ ಹಿರಿಯರಾದವರೆಲ್ಲರೂ ಮನೆ ಯಿಂದ ಹೊರಡುವ ಮುಂಚೆ ಈ ಸ್ತೋತ್ರವನ್ನು ಹೇಳಿ ಹೊರಡಬೇಕು. ಇದರಿಂದ ಕಾರ್ಯಸಿದ್ಧಿ ಬೇಗ ಆಗುವುದಲ್ಲದೇ ಯಾವುದೇ ಗ್ರಹಗಳ ಬಾಧೆ ಆಗುವುದಿಲ್ಲ.

**ಅಹಿರಾವಣ ವಧೆ:**

ರಾಮಾಯಣ ಕಾಲದಲ್ಲಿ ಅಹಿರಾವಣ ಎಂಬ ರಾಕ್ಷಸನು ರಾವಣನ ತಮ್ಮನಾಗಿದ್ದ ಮತ್ತು ಆತ ಪಾತಾಳಲೋಕದ ಅಧಿಪತಿಯಾಗಿದ್ದ. ರಾಮಲಕ್ಷ್ಮಣರು ಯುದ್ಧದಲ್ಲಿ ರಾವಣನ ಮಗನಾದ ಇಂದ್ರಜಿತ್‌ನನ್ನು ಕೊಲ್ಲುತ್ತಾರೆ. ಇದು ರಾವಣನಿಗೆ ಗೊತ್ತಾಗಿ ಆತ ರಾಮ ಲಕ್ಷ್ಮಣರನ್ನು ಕೊಲ್ಲಲು ಅಹಿರಾವಣನ ಸಹಾಯ ಯಾಚಿಸುತ್ತಾನೆ.ಇದು ರಾಮ ಭಕ್ತನಾದ ವಿಭೀಷಣನಿಗೆ ಹೇಗೋ ಗೊತ್ತಾಗಿ ಆತ ರಾಮನಿಗೆ ವಿಷಯ ತಿಳಿಸುತ್ತಾನೆ. ಆಗ ರಾಮ ತನ್ನನ್ನು ಮತ್ತು ಲಕ್ಷ್ಮಣ ಮಲಗಿದ್ದಾಗ ಕಾಯಲು ಹನುಮಂತನನ್ನು ನೇಮಿಸುತ್ತಾನೆ. ಹನುಮಂತ ಅಹಿರಾವಣನು ಕೋಣೆ ಒಳಗೆ ಪ್ರವೇಶಿಸಲು ಬಿಡುವುದಿಲ್ಲ.ಇದರಿಂದ ಹತಾಶನಾದ ಅಹಿರಾವಣ ವಿಭೀಷಣನ ಹಾಗೆ ವೇಷ ಬದಲಿಸಿಕೊಂಡು ಬರುತ್ತಾನೆ ಮತ್ತು ಕೋಣೆ ಒಳಗೆ ಪ್ರವೇಶಿಸಿ ರಾಮ-ಲಕ್ಷ್ಮಣರನ್ನು ಪಾತಾಳಲೋಕಕ್ಕೆ ಅಪಹರಿಸುತ್ತಾನೆ.ಇದರಿಂದ ಕ್ರೋಧನಾದ ಹನುಮಂತ ಪಾತಾಳಲೋಕಕ್ಕೆ ಪ್ರವೇಶಿಸುತ್ತಾನೆ. ಆಗ ಅಲ್ಲಿ ದ್ವಾರಪಾಲಕನಾಗಿ ಒಂದು ಮಂಗ ಕುಳಿತಿರುತ್ತದೆ. ಅಚ್ಚರಿಗೊಂಡ ಹನುಮಂತ ಅದಾರೆಂದು ಕೇಳಲು ತಾನು ಹನುಮಂತನ ಮಗ ಎಂದು ಹೇಳುತ್ತದೆ. ಹನುಮಂತನಾದರೋ ಬ್ರಹ್ಮಚಾರಿ ಆತನಿಗೆ ಕಳವಳವಾಗುತ್ತದೆ. ಆಗ ಮಂಗ ಹನುಮಂತ ಲಂಕೆಗೆ ಹೋಗಲು ಸಮುದ್ರೋಲ್ಲಂಘನ ಮಾಡು ತ್ತಿದ್ದಾಗ ಆತನ ಬೆವರ ಹನಿಯಿಂದ ತಾನು ಹುಟ್ಟಿದ್ದು ಎಂದು ತಿಳಿಸುತ್ತದೆ. ಸಾಕ್ಷಾತ್ ಹನುಮಂತನನ್ನೇ ಕಂಡು ಆತನನ್ನು ಒಳಗೆ ಬಿಡಲು ಒಪ್ಪುತ್ತದೆ ಮತ್ತು ಅಹಿರಾವಣನ ಪ್ರಾಣವು 5 ದಿಕ್ಕುಗಳಲ್ಲಿ ದುಂಬಿ ರೂಪದಲ್ಲಿ ಇರಿಸಲ್ಪಟ್ಟಿದೆ ಎಂದೂ ದುಂಬಿಗಳನ್ನು ಕೊಂದರೆ ಅಹಿರಾವಣನನ್ನು ಸಂಹರಿಸಬಹುದೆಂದು ಉಪಾಯ ಹೇಳುತ್ತದೆ. ಆಗ ಹನುಮಂತ ಪಂಚ



**ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಂ ಅರೋಗತಾ**
**ಅಜಾಡ್ಯಂ ವಾಕ್ ಪಟುತ್ವಂ ಚ ಹನುಮತ್ ಸ್ಮರಣಾತ್ ಭವೇತ್॥**
**ಈ ಶ್ಲೋಕವನ್ನು ಎಲ್ಲರೂ ಪ್ರತಿನಿತ್ಯ ಹೇಳಬೇಕು. ಅದರಲ್ಲಿಯೂ ಹನುಮ ಜಯಂತಿಯ ದಿನ ಮರೆಯುವ ಹಾಗಿಲ್ಲ. ಕಿರಿಯರಿಂದ ಹಿಡಿದು ಮನೆಯ ಹಿರಿಯರಾದವರೆಲ್ಲರೂ ಮನೆಯಿಂದ ಹೊರಡುವ ಮುಂಚೆ ಈ ಸ್ತೋತ್ರವನ್ನು ಹೇಳಿ ಹೊರಡಬೇಕು. ಇದರಿಂದ ಕಾರ್ಯಸಿದ್ಧಿ ಬೇಗ ಆಗುವುದಲ್ಲದೇ ಯಾವುದೇ ಗ್ರಹಗಳ ಬಾಧೆ ಆಗುವುದಿಲ್ಲ.**

ಮುಖಿ ಹನುಮಂತನಾಗಿ ಬದಲಾಗುತ್ತಾನೆ ಮತ್ತು ಆ ದುಂಬಿಗಳನ್ನು ಕೊಂದು ಅಹಿರಾವಣನನ್ನೂ ಕೊಲ್ಲುತ್ತಾನೆ ಮತ್ತು ರಾಮಲಕ್ಷ್ಮಣರನ್ನು ಮತ್ತೆ ಲಂಕೆಗೆ ಕರೆತರುತ್ತಾನೆ.

### ಶನಿವಾರ ನಾವೇಕೆ ಆಂಜನೇಯನನ್ನು ಆರಾಧಿಸಬೇಕು:

ತ್ರೇತಾಯುಗದಲ್ಲಿ ರಾವಣನು ಬ್ರಹ್ಮ ಮತ್ತು ಶಿವನ ವರ ಪ್ರಸಾದದಿಂದ ಎಲ್ಲಾ ಲೋಕಗಳನ್ನು ಗೆದ್ದಿದ್ದನು. ಅಲ್ಲದೆ ಆತ ನವಗ್ರಹಗಳನ್ನು ಜಯಿಸಿ, ತನ್ನ ಸಿಂಹಾಸನವನ್ನೇರುವ ಮೆಟ್ಟಿಲುಗಳಾಗಿ ಅವರನ್ನು ನೇಮಿಸಿಕೊಂಡನು. ಹೀಗೆ ಇದ್ದಾಗ ರಾವಣ ಪತ್ನಿ ಮಂಡೋದರೆ ರಾವಣನ ಮಗನಾದ ಮೇಘನಾದನಿಗೆ ಜನ್ಮ ನೀಡುವ ಕಾಲ ಬಂದಿತು. ಆಗ ಮಹಾ ಜ್ಯೋತಿಷ್ಯಜ್ಞನಾದ ರಾವಣನು ಎಲ್ಲಾ ಗ್ರಹಗಳನ್ನು ಆತನ ಜನ್ಮಕುಂಡಲಿಯ 11 ನೇ ಮನೆಯಲ್ಲಿ ಹೋಗಿ ನೆಲೆಸುವಂತೆ ಆದೇಶ ನೀಡಿದನು. ಇದರಿಂದ ತನ್ನ ಮಗ ಅಮರನಾಗುತ್ತಾನೆ ಎಂಬ ಆಸೆ ರಾವಣನದಾಗಿತ್ತು. ಆದರೆ ಇದು ದೇವತೆಗಳಲ್ಲಿ ಭಯವನ್ನುಂಟು ಮಾಡಿತು.

ಆಗ ಇದನ್ನು ಅರಿತ ಆ ಮಗು ಜನಿಸುವಾಗ ಶನಿ ಉಚ್ಛ ಸ್ಥಾನದಲ್ಲಿ ಕೂರುವ ಬದಲು ಮೇಘನಾದನ ಕುಂಡಲಿಯಲ್ಲಿ ನೀಚ ಸ್ಥಾನವಾಗಿ ಕುಳಿತು, 12 ನೆಯ ಮನೆಯವರೆಗೂ ಕಾಲು ಚಾಚಿ ಬಿಟ್ಟನು. ಇದು ರಾವಣನಿಗೆ ತಿಳಿಯಲು ಸಮಯವಾಗಲಿಲ್ಲ. ಏಕೆಂದರೆ ಶನಿಯ ಈ ನಡೆ ತನ್ನ ಮಗನ ಸಾವಿಗೆ ಕಾರಣವಾಗುತ್ತೆ ಎಂದು ಆತ ಗ್ರಹಿಸಿದನು. ಈ ಕಾರಣವಾಗಿ ಶನಿಯನ್ನು ಒಂದು ಕತ್ತಲ ಕೋಣೆಯಲ್ಲಿ ಕೂಡಿ ಹಾಕಿದನು. ಇದರಿಂದ ಶನಿಯ ಮುಖವನ್ನು ಯಾರು ನೋಡುವುದಿಲ್ಲ ಎಂಬುದು ಆತನ ಅನಿಸಿಕೆಯಾಗಿತ್ತು.

ಆದರೆ ಸೀತೆಯನ್ನು ಹುಡುಕುಲು ಬಂದ ಆಂಜನೇಯನು ಆ ಕತ್ತಲ ಕೋಣೆಯಲ್ಲಿ ಇಣುಕಿ ನೋಡಿ ಶನಿಯ ಕಣ್ಣಿಗೆ ಬಿದ್ದು ಬಿಟ್ಟನು. ಆದರೆ ಶನಿಯ ಕಣ್ಣಿಗೆ ಬಿದ್ದನಲ್ಲ ಎಂಬ ಅಳುಕು ಹನುಮಂತನಿಗೂ ಸಹ ಕಾಡಿತು. ನವಗ್ರಹಗಳಲ್ಲಿ ಶನಿಯನ್ನು ಹೊರತುಪಡಿಸಿ, ಎಲ್ಲರನ್ನು ಹನುಮಂತ ಬಿಡುಗಡೆಗೊಳಿಸಿದ.ಇದನ್ನು ಶನಿ ಕೇಳಿದಾಗ, ನಿನ್ನನ್ನು ಬಿಡಿಸಿದರೆ ನೀನು ನನ್ನ ತಲೆಯ ಮೇಲೆ ಕೂರುವೆ ಎಂದು ಹನುಮಂತ ಹೇಳಿದ. ಇದರಿಂದ ಶನಿಯು ಆತನಿಗೆ ಅಭಯವನ್ನು ನೀಡಿದ . ನಾನು ನಿನಗೆ ಸಹಾಯ ಮಾಡುವೆ ಎಂದು, ಆದರೂ ನೀನು ನನ್ನ ದೃಷ್ಟಿಗೆ ಬಿದ್ದಿದ್ದರಿಂದ,ನೀನು ಮನೆ, ಹೆಂಡತಿ ಮತ್ತು ಮಕ್ಕಳಿಂದ ದೂರವಾಗುವೆ ಎಂದು ಶನಿ ಹೇಳಿದನು.

ಹಾಗಾದರೆ ಬಾ ನಾನು ನಿನ್ನನ್ನು ಬಿಡಿಸುವೆ ನನಗೆ ಮನೆ, ಮಠ, ಹೆಂಡತಿ ಮತ್ತು ಮಕ್ಕಳು ಯಾರೂ ಇಲ್ಲ. ನನಗೆ ರಾಮನ ಅಡಿದಾವರೆ ಮತ್ತು ಆತನ ನಾಮ ಬಿಟ್ಟರೆ ಬೇರೆ ಸಂಪತ್ತಿಲ್ಲ ಎಂದು ಶನಿಯನ್ನು ಬಂಧಮುಕ್ತಗೊಳಿಸಿದನು. ಹೀಗೆ ಶನಿ ಕೃತಜ್ಞತಾಪೂರ್ವಕವಾಗಿ ಹನುಮಂತ

**ಹಿಂದೂ ಧರ್ಮದಲ್ಲಿ ಹನುಮನನ್ನು ಪೂಜಿಸುವಂತೆ ಬೇರೆ ಧರ್ಮದಲ್ಲಿ ಕೂಡ ಹನುಮನನ್ನು ಪೂಜಿಸುತ್ತಾರೆ. ಅಷ್ಟೇ ಅಲ್ಲದೇ, ಕೇವಲ ಭಾರತದಲ್ಲಿ ಮಾತ್ರವಲ್ಲದೇ, ಮಯನ್ಮಾರ್, ಬಾಲಿ, ಮಲೇಶಿಯಾ ಮತ್ತು ಥೈಲಾಂಡ್‌ನಲ್ಲಿರುವ ಅಸಂಖ್ಯಾತ ಜನರು ಹನುಮಂತನನ್ನು ಪೂಜಿಸುತ್ತಾರೆ ಎಂದೂ ಹೇಳಲಾಗುತ್ತದೆ. ಭಗವಾನ್ ಶ್ರೀ ಗಣೇಶನಂತೆಯೇ, ಸಕಲ ವಿಘ್ನಗಳನ್ನೂ ನಿವಾರಿಸಿ ಬಿಡುವ ಸಂಕಟಮೋಚನನೆಂಬ ಖ್ಯಾತಿಯೂ ಭಗವಾನ್ ಹನುಮಂತನಿಗೂ ಇದೆ.**

ನನ್ನು ಯಾರೂ ಪೂಜಿಸುವರೋ,ಅವರ ಮೇಲೆ ತನ್ನ ಪ್ರಭಾವವನ್ನು ಕಡಿಮೆ ಮಾಡುತ್ತೇನೆ ಎಂದು ಮಾತು ಕೊಟ್ಟನು.

ಆಂಜನೇಯ ಲಂಕಾದಹನವನ್ನು ಸರಿಯಾಗಿ ಮಾಡಲಾಗಲಿಲ್ಲವಂತೆ,ಆಗ ಹನುಮಂತನ ಸಹಾಯಕ್ಕೆ ಬಂದ ಶನಿ ಲಂಕೆಯನ್ನು ನೋಡಿದ್ದರಿಂದ ಸ್ವರ್ಣ ಲಂಕ, ಭಸ್ಮವಾಗಿ ಕಪ್ಪು ಲಂಕಾವಾಯಿತಂತೆ ಹಾಗೂ ಶನಿ ಮತ್ತು ಆಂಜನೇಯನ ನಡುವೆ ಯುದ್ಧ ನಡೆಯಿತು. ರಾಮಾಯಣ ಯುದ್ಧ ಮುಗಿದು, ಹನುಮಂತನು ಒಮ್ಮೆ ಗುಹೆಯಲ್ಲಿ ರಾಮಧ್ಯಾನ ಮಾಡುತ್ತ ಕುಳಿತಿದ್ದನು. ಆಗ ಶನಿ ಇದೇ ಸಮಯವೆಂದು ಆಂಜನೇಯನ ಹೆಗಲೇರಿದನು.ಇದರಿಂದ ರಾಮಧ್ಯಾನಕ್ಕೆ ಭಂಗ ಬಂದಿತು ಎಂದು ಆಂಜನೇಯನಿಗೆ ಸಿಟ್ಟು ಬಂದಿತು. ಆದರೂ ಅದನ್ನು ನಿಗ್ರಹಿಸಿಕೊಂಡು, ಆಂಜನೇಯ ಹೀಗೆ ಹೇಳಿದ.''ಹೇ ಶನಿದೇವ, ನಿಮ್ಮ ತಂದೆಯಾದ ಸೂರ್ಯದೇವನು ನನಗೆ ಅನೇಕ ವರ ನೀಡಿದ್ದಾನೆ. ಆತ ನನ್ನ ಗುರು, ಗುರುವಿನ ಮಗನನ್ನು ಶಿಕ್ಷಿಸುವ ಕೆಲಸ ನನಗೆ ನೀಡಬೇಡ. ಇಳಿದು ಹೋಗಿ ಬಿಡು'' ಎಂದು ಹೇಳಿದನು. ಅದಕ್ಕೆ ಶನಿಯು ''ಆಂಜನೇಯ,ಇದು ನನ್ನ ಸರದಿ, ಅದರ ಪ್ರಕಾರ ನಾನು ನಿನ್ನ ಹೆಗಲೇರಬೇಕು. ಇದು ವಿಧಿ ನಿಯಮ'' ಎಂದನು, ಮಾತಿಗೆ ಮಾತು ಬೆಳೆಯಿತು ಶನಿ ಸೋಲಲಿಲ್ಲ.

ಆಗ ಆಂಜನೇಯನು ಉಗ್ರ ಸ್ವರೂಪವನ್ನು ತಾಳಿ ತನ್ನ ದೇಹವನ್ನು ಬೆಳೆಸಿದನು. ಇದರಿಂದ ಹೆಗಲ ಮೇಲಿದ್ದ ಶನಿ ಗುಹೆಯ ಛಾವಣಿ ಮತ್ತು ಆಂಜನೇಯನ ದೇಹದ ನಡುವೆ ಸಿಲುಕಿ ಅಪ್ಪಚ್ಚಿಯಾಗಿ ಹೋದನು. ಆ ನೋವನ್ನು ತಾಳಲಾರದೆ ಶನಿ ಸೋತು ಆಂಜನೇಯನನ್ನು ಅಂಗಲಾಚಿದನು.ಆಗ ಆಂಜನೇಯನು ''ರಾಮ ನಾಮ ಜಪ ಮಾಡುವವರ ತಂಟೆಗೆ ಹೋಗುವುದಿಲ್ಲ ಎಂದು ಮಾತು ನೀಡಿದರೆ ಮಾತ್ರ ನಿನ್ನನ್ನು ಬಿಡುತ್ತೇನೆ'' ಎಂದನು.

ಇದಕ್ಕೆ ಶನಿಯು ಸಹ ಅಸ್ತು ಎಂದನು. ಏಷ್ಟಾದರು ಆಂಜನೇಯನನ್ನು ಸ್ಮರಿಸಿದರೆ ರಾಮನನ್ನು ಸ್ಮರಿಸಿದಂತೆ ಅಲ್ಲವೇ, ಹೀಗೆ ಹನುಮಂತನನ್ನು ನಾವು ಶನಿವಾರದಂದು ಪೂಜಿಸಲು ಆರಂಭಿಸಿದೆವು.

ಹನುಮಜನ್ಮೋತ್ಸವವನ್ನು ಉತ್ತರ ಕರ್ನಾಟಕದಲ್ಲಿ ಮತ್ತು ಉತ್ತರಭಾರತದಲ್ಲಿ ರಾಮನವಮಿ ಆಗಿ ಐದು ದಿವಸಕ್ಕೆ ದವನದ ಹುಣ್ಣಿಮೆಗೆ ಆಚರಿಸಿದರೆ, ದಕ್ಷಿಣ ಕರ್ನಾಟಕದಲ್ಲಿ ಹೊಸ್ತಿಲು ಹುಣ್ಣಿಮೆಗೆ ಆಚರಿಸುತ್ತಾರೆ. ಎರಡು ಆಚರಣೆಗಳು ಬೃಹತ್ ಆಗಿ ಆಚರಿಸಲ್ಪಡುತ್ತವೆ. ಮತ್ತೊಂದು ವಿಷಯ ನೆನಪಿರಲಿ ಹನುಮಂತ ಚಿರಂಜೀವಿ ಆಗಿದ್ದರಿಂದ ಆತನ ಜನ್ಮದಿನವನ್ನು ಜನ್ಮೋತ್ಸವ ಎನ್ನಬೇಕೇ ಹೊರತು ಜಯಂತಿ ಅಲ್ಲ.

ಹಿಂದೂ ಧರ್ಮದಲ್ಲಿ ಹನುಮನನ್ನು ಪೂಜಿಸುವಂತೆ ಬೇರೆ ಧರ್ಮದಲ್ಲಿ ಕೂಡ ಹನುಮನನ್ನು ಪೂಜಿಸುತ್ತಾರೆ. ಅಷ್ಟೇ ಅಲ್ಲದೇ, ಕೇವಲ ಭಾರತದಲ್ಲಿ ಮಾತ್ರವಲ್ಲದೇ, ಮಯನ್ಮಾರ್, ಬಾಲಿ, ಮಲೇಶಿಯಾ ಮತ್ತು ಥೈಲಾಂಡ್‌ನಲ್ಲಿರುವ ಅಸಂಖ್ಯಾತ ಜನರು ಹನುಮಂತನನ್ನು ಪೂಜಿಸುತ್ತಾರೆ ಎಂದೂ ಹೇಳಲಾಗುತ್ತದೆ. ಭಗವಾನ್ ಶ್ರೀ ಗಣೇಶನಂತೆಯೇ, ಸಕಲ ವಿಘ್ನಗಳನ್ನೂ ನಿವಾರಿಸಿ ಬಿಡುವ ಸಂಕಟಮೋಚನೆಂಬ ಖ್ಯಾತಿಯೂ ಭಗವಾನ್ ಹನುಮಂತನಿಗೂ ಇದೆ.



# ಜ್ಯೇಷ್ಠಾಭಿಷೇಕ

ಪ್ರತಿ ವರ್ಷ ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠಾ ನಕ್ಷತ್ರಕ್ಕೆ ಮುಗಿಯುವಂತೆ ಮೂರು ದಿನಗಳು ತಿರುಮಲೆ ಶ್ರೀ ಸ್ವಾಮಿಗೆ ಜ್ಯೇಷ್ಠಾಭಿಷೇಕ ಸಂಪಂಗಿ ಪ್ರದಕ್ಷಿಣೆದಲ್ಲಿರುವ ಕಲ್ಯಾಣ ಮಂಟಪದಲ್ಲಿ ನಡೆಯುತ್ತದೆ. ಇದನ್ನೇ "ಅಭಿದೇಯಕ ಅಭಿಷೇಕ" ಎನ್ನುತ್ತಾರೆ. ಹಿಂದಿನ ಕಾಲದಿಂದಲೂ ಅಭಿಷೇಕಗಳಿಂದ ಅತ್ಯಂತ ಪ್ರಾಚೀನವಾದ ಶ್ರೀಸ್ವಾಮಿ ಯವರ ಉತ್ಸವ ಮೂರ್ತಿಗಳು ಸವೆದು ಹೋಗದಂತೆ ರಕ್ಷಿಸುವುದರ ನಿಮಿತ್ತ ಏರ್ಪಡಿಸಿದ ಉತ್ಸವವೇ ಇದು. ಇದನ್ನು ಮೂರು ದಿನಗಳವರೆಗೆ ನಿರ್ವಹಿಸಲಾಗುತ್ತದೆ. ಮೊದಲನೆಯದಿನ ಶ್ರೀ ಮಲೆಯಪ್ಪ ಸ್ವಾಮಿಗೆ ಇರುವ ಚಿನ್ನದ ಕವಚವನ್ನು ತೆಗೆದು ಹಾಕಿ, ಹೋಮಗಳು, ಅಭಿಷೇಕಗಳು, ಪಂಚಾಮೃತ, ಸ್ನಪನ ತಿರುಮಂಜನಾದಿಗಳು ನಡೆದ ನಂತರ ಶ್ರೀ ಸ್ವಾಮಿಗೆ ವಜ್ರ ಕವಚವನ್ನು ಅಲಂಕರಿಸಿ ಪುರವೀಧಿಗಳಲ್ಲಿ ಮೆರವಣಿಗೆ ಹೋಗುತ್ತಾರೆ.ಯಥಾಕ್ರಮವಾಗಿ ಎರಡನೆಯ ದಿನ ಮುತ್ತಿನ ಕವಚ ಸಮರ್ಪಣೆ ಮಾಡಿ ಮೆರವಣಿಗೆ ಮಾಡುತ್ತಾರೆ. ಮೂರನೆಯ ದಿನ ಕೂಡ ತಿರುಮಂಜನಾವನ್ನು ಪೂರ್ತಿಮಾಡಿ, ಚಿನ್ನದ ಕವಚವನ್ನು ತೊಡಿಸುತ್ತಾರೆ. ಈ ಚಿನ್ನದ ಕವಚವನ್ನು ಮುಂದಿನ ವರ್ಷದ ಜ್ಯೇಷ್ಠಾಭಿಷೇಕದಲ್ಲಿಯೇ ತೆಗೆಯುವರು. ಅಲ್ಲಿಯ ತನಕ ವರ್ಷ ಪೂರ್ತಿಯಾಗಿ ಶ್ರೀಸ್ವಾಮಿಯವರು ಚಿನ್ನದ ಕವಚದಲ್ಲಿಯೇ ಇರುತ್ತಾರೆ.ಆರ್ಜಿತ ಸೇವೆಯಾಗಿ ನಿರ್ವಹಿಸುತ್ತಿರುವ ಈ ಉತ್ಸವದಲ್ಲಿ ಭಕ್ತರು ಪಾಲ್ಗೊಳ್ಳಬಹುದು. ಈ ಸೇವೆಯಲ್ಲಿ ಪಾಲ್ಗೊಂಡ ಭಕ್ತರನ್ನು ಕವಚವಾಗಿ ಸ್ವಾಮಿಯು ರಕ್ಷಿಸುತ್ತಾನೆ.



ಧಾರಾವಾಹಿ

## ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

## "ನೀನೇ ಕರ್ತಾ ಎನ್ನ ಕರ್ತ ನಾ ನಿನ್ನ ಭೃತ್ಯ ಹಿತ"

## ಆತ್ಮ ನಿವೇದನೆ ಕೀರ್ತನೆಯ ಒಳನೋಟ


– ಡಾ॥ ಸುಭಾಸ ಕಾಖಂಡಕಿ

79754 42458


ಈ ಕೀರ್ತನೆಯಲ್ಲಿ ಶ್ರೀ ಪ್ರಸನ್ನವೆಂಕಟ ದಾಸರು ಭಗವಂತನೊಬ್ಬನೇ ಸರ್ವ ಸ್ವತಂತ್ರ, ಶ್ರೀ ಹರಿಯೇ ಈಶನು,ಎಲ್ಲ ಜೀವಿಯು ಅವನ ದಾಸನು ಎಂದು ಒತ್ತಿ - ಒತ್ತಿ ಹೇಳಿ - "ಹೇ ! ಸರ್ವ ತಂತ್ರ ಸ್ವತಂತ್ರ ಕರ್ತೃನಾದ ಶ್ರೀನಿವಾಸನೇ! ಸನ್ಮಾರ್ಗದಲ್ಲಿ ನಡೆಸಿ ನನ್ನಿಂದ ಸತ್ಕರ್ಮ ಮಾಡಿಸಿ ಉದ್ಧರಿಸು ಸ್ವಾಮಿ'' ಎಂದು ಪರಿಪರಿಯಾಗಿ ಪ್ರಾರ್ಥಿಸಿದ್ದಾರೆ.

ನೀನೆ ಕರ್ತಾ ಎನ್ನ ಕರ್ತಾ ನಾ ನಿನ್ನ ಭೃತ್ಯ ಹಿತ ।
ಮಾನ ಹಾನಿ ನಿನ್ನದಯ್ಯ ಕೋನೇರಿ ತಿಮ್ಮನಮ್ಮಯ್ಯ ॥ಪ॥

ಹೇ ! ಸ್ವಾಮಿ ಪುಷ್ಕರಣಿ ತೀರ ನಿಲಯಾ ! ತಿಮ್ಮಯ್ಯಾ ! ನೀನೇ ಎಲ್ಲ ಜೀವಿಗಳ ನಿಜವಾದ ಕರ್ತನು, ನೀನೆ ನನ್ನ ನಿಜವಾದ ತಂದೇ, ನನ್ನೊಳಗಿದ್ದು ಕಾರ್ಯ ಮಾಡಿಸುವವನು ನೀನೇ, ನಾನು ನಿನ್ನ ಭೃತ್ಯನು, ನನ್ನ ಎಲ್ಲ ಸುಖದುಃಖಗಳು ನಿನ್ನವೇ! ನಿನ್ನ ಪ್ರೇರಣೆಯಂತೆ ಮಾಡಿದ ಎಲ್ಲ ಕರ್ಮಗಳು ಕರ್ಮಗಳ ಫಲವು ನಿನ್ನದೇ ಸ್ವಾಮಿ ಎಂಬ ಭಾವವನ್ನು ಪಲ್ಲವಿಯಲ್ಲಿ ವ್ಯಕ್ತ ಪಡಿಸಿದ್ದಾರೆ ದಾಸರು.

### ನುಡಿ - ೧ ರಲ್ಲಿ

ತನುಧನ ನೆಚ್ಚಿಕಿಲ್ಲಾ ಮಾನಿನಿ ತನ್ನ ವಳಲ್ಲ ।
ಸೂನು ಬಂಧುಗಳೆಲ್ಲ ಕ್ಷಣದವರಲ್ಲ ।
ನಾನಾ ಜನ್ಮದಲಿ ಎನ್ನ ಪ್ರಾಣಕಿತ್ತೈಯ್ಯ ಚೈತನ್ಯ ।
ದಾನವಾರತಿ ಕೃಷ್ಣಯ್ಯ ದೀನನ ಬಿಡದಿರಯ್ಯಾ ॥1॥

" ಈ ದೇಹ - ಧನ - ಸಂಪತ್ತು ಇವೆಲ್ಲವೂ ನಂಬಿಕೆ ಇಲ್ಲದಂಥ ವಸ್ತುಗಳು ಮಡದಿಯೂ ಶಾಶ್ವತಳಲ್ಲ, ಮಕ್ಕಳು ಬಂಧುಗಳ ಸಮಯ ಸಂದರ್ಭಕ್ಕೆ ಒದಗುವವರಲ್ಲ. ನನ್ನ ನಾನಾ ಜನ್ಮದಲ್ಲಿ ನನಗೆ ಸಾಧನೆಗೆ ನನ್ನ ಯೋಗ್ಯತೆಗೆ ತಕ್ಕಂಥೆ ಶಕ್ತಿಯನ್ನು ಕೊಟ್ಟೆ , ಹೇ ! ದಾನವರ ವೈರಿಯಾದ ಶ್ರೀ ಕೃಷ್ಣ ಪರಮಾತ್ಮನೇ ! ಈ ಬಡವನನ್ನು ಬಿಡದಿರು'' ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ ದಾಸರು.

### ನುಡಿ - ೨ ರಲ್ಲಿ

ಭಾವಾಂಧಕಾರದೊಳನುಭವಿಸಿ ಬೆಂಡಾಗುವೆನು
ವಿವರಿಸಿ ನಿತ್ಯ ಹಿತವ ಕಾಣೆನೋ ಹರಿಯೇ ।
ಜಾವವೊಂದರೊಳರ್ಧ ಭಾವಿಸ ಲೊಲ್ಲೆ ಶ್ರೀ ಪದ
ಆವದಾರಿಯಲಿ ನೋಡಲವಗುಣಾಂಕಿತ ಮೂಢ ॥ 2॥

ಹೇ ಸ್ವಾಮಿ - ಸಂಸಾರವೆಂಬ ಕತ್ತಲೆಯಲ್ಲಿ ಬಿದ್ದು ತೊಳಲಾಡಿ ಬೆಂಡಾಗಿರುವೆನು. ನಿತ್ಯ ಹಿತವನ್ನು ಕಾಣದಾಗಿರುವೆನು ಒಂದು ಕ್ಷಣವಾದರೂ ನಿನ್ನ ಸಂಪದ್ಭರಿತ ಪಾದವನ್ನು ಭಾವಿಸದೆ ಇರುವೆನು. ಯಾವ ಯಾವ ಮಾರ್ಗದಲ್ಲಿ ನೋಡಿದರೂ ದುರ್ಗುಣಗಳಿಂದ ಕೂಡಿದ ಮೂಢನಾಗಿರುವೆನು. ನಿನಗೆ ಶರಣಾಗತಿಯಾಗಿ ಬಂದಿರುವೆ ಉದ್ಧರಿಸು ಎಂದು ಪ್ರಾರ್ಥಿಸಿದ್ದಾರೆ ದಾಸರು.

ಇನ್ನು ಕೊನೆಯ ನುಡಿಯಲ್ಲಿ

ಸ್ವಾಮಿ ನಿನ್ನ ಮುದ್ರಾಂಕನ ಮಾಡಿನ್ನನುಮಾನ್ಯಾಕೆ
ಶ್ರೀಮಂತ ಭಾಗವತರ ಪ್ರೇಮಾನ್ವಿತರ
ಶ್ರೀ ಮಧ್ವರಾಯರ ಸಿಕ್ಷಾನೇಮರಾಚಾರಣಾಧ್ಯಕ್ಷ
ಸಾಮಿಪ್ಯ ಮುಕ್ತಿಯನೀಯಾ ನನ್ನ ಪ್ರಸನ್ವೇಂಕಟಯ್ಯ ॥3॥

"ಇನ್ನು ಅನುಮಾನವೇಕೆ ಸ್ವಾಮಿ ಶ್ರೀನಿವಾಸಾ ! ನಿನ್ನ ದಾಸನೆಂಬ ಮುದ್ರೆ ಹಾಕಿಸು, ಸಕಲ ಸಂಪನ್ನರೆನಿಸುವ ! ಭಾಗವತೋತ್ತಮರೂ, ವಾತ್ಸಲ್ಯ ಪೂರ್ಣರೂ ಆದ ಶ್ರೀಮಧ್ವಾಚಾರ್ಯರು ಹಾಕಿ ಕೊಟ್ಟ ಸಿಕ್ಷಾನಿಯಮಾದಿಗಳಿಗೆ ಅಧ್ಯಕ್ಷನಾಗಿರುವ ಒಡೆಯನಾಗಿರುವ ಹೇ ! ಪ್ರಸನ್ವೇಂಕಟೇಶನೇ ! ನಿನ್ನ ಸಾಮಿಪ್ಯ ಮುಕ್ತಿಯ ಕೊಟ್ಟು ಉದ್ಧರಿಸು '' ಎಂದು ಪರಿ ಪರಿಯಾಗಿ ಪ್ರಾರ್ಥಿಸಿದ್ದಾರೆ ದಾಸರು .

॥ಹರೇ ಶ್ರೀನಿವಾಸಾ ॥





# ದಿನಚರ್ಯೆ - ಆಯುರ್ವೇದದ ಆರೋಗ್ಯ ಸೂತ್ರ

ಡಾ|| ಸಂಧ್ಯಾ
94495 05577

ಬೆಂಗಳೂರಿನ ಪ್ರಖ್ಯಾತ ಸಂಸ್ಥೆಯಲ್ಲಿ ವಿಜ್ಞಾನಿಯಾದ ೨೬ ವರ್ಷದ ವಿವೇಕನ ದಿನ ಶುರುವಾಗುವುದೇ ಬೆಳಗ್ಗೆ ೧೦ ಗಂಟೆಗೆ. ಎದ್ದ ತಕ್ಷಣ ಕಣ್ಣು ಹುಡುಕುವುದು ದೇವರ ಪಟ್ಟವನ್ನಲ್ಲ, ಮೊಬೈಲನ್ನು ಕೈ ಎಳುವುದು ಮೊಬೈಲ್‌ಗಾಗಿಯೇ ಹೊರತು ಕರಾಗ್ರ ವಸತೆಗಾಗಿ ಅಲ್ಲ. ವರ್ಕ್‌ಫ್ರಮ್ ಹೋಮ್ ಇರುವ ಕಾರಣ ನಿಧಾನವಾಗಿರುವುದೇ ರೂಢಿಯಾಗಿರುವ ವಿವೇಕನು ಹಲ್ಲನ್ನು ಉಜ್ಜದೇ ಒಂದು ಕಪ್ ಬೆಡ್ ಕಾಫಿ ಕುಡಿದರೆ, ಯಾವಾಗಲೋ ತಿಂಡಿ ಮತ್ತೆ ಯಾವಾಗಲೋ ಊಟ, ಹಾಗೆಂದು ಕುರುಕಲು ಪಿಜಾ, ಚಾಕಲೇಟ್‌ಗಳಿಗೇನೂ ಕಮ್ಮಿ ಇಲ್ಲ.ಎರಡು ವರ್ಷದ ಹಿಂದೆ ಕೆಲಸಕ್ಕೆ ಸೇರಿದಾಗ ಶುರುವಾದ ಈ ದಿನದ ಕ್ರಮ ಈಗ ಬಿಡಲಾಗದ ಅಭ್ಯಾಸವಾಗಿದೆ. ಅಕಾಲಿಕವಾದ ಊಟ, ನಿದ್ದೆ, ಸ್ನಾನಗಳಿಂದ ವಿವೇಕನ ದೇಹ, ಮನಸ್ಸುಗಳು ಜಡವಾಗಿದೆ. “ಅಯ್ಯೋ ಎಳಬೇಕಾ”,“ಅಯ್ಯೋ ಕೆಲಸ ಮಾಡಬೇಕಾ” ಎನ್ನುತ್ತಲೇ ದಿನವನ್ನೆಲ್ಲಾ ಕಳಿಯುವಂತಾಗಿದೆ, ಇಷ್ಟೇ ಅಲ್ಲದೆ ಸದಾ ಎಲ್ಲೋ ಒಂದು ಭಾಗದಲ್ಲಿ ನೋವು, ಸದಾ ಸುಸ್ತು, ನಿದ್ದೆ ಸರಿಯಾಗಿ ಇಲ್ಲ, ದೇಹದ ದೈನಂದಿನ ಕ್ರಿಯೆಯಲ್ಲಿಯೂ ಏರು ಪೇರು.ದೇಹದ ತೂಕವಂತು ಕೇಳುವಂತೆಯೇ ಇಲ್ಲ. ಹೀಗೆ ಒಂದು ದಿನ ಮೈ ಕೈ ನೋವು ಎನ್ನುತ್ತಲೇ ಎದ್ದ ವಿವೇಕನಿಗೆ ತಕ್ಷಣವೇ ಸದಾ ಲವಲವಿಕೆಯಿಂದಿರುವ ಹಸನ್‌ಮುಖರಾದ ಆರೋಗ್ಯದಿಂದಿರುವ ತಮ್ಮ ಕುಟುಂಬ ವೈದ್ಯರಾದ ಆಯುರ್ವೇದಿಕ್ ಡಾಕ್ಟರ್ ನೆನಪಾದರು.ಈ ಸಿಟಿ ಜೀವನದಲ್ಲಿ ಒತ್ತಡವಿರುವ ಉದ್ಯೋಗವಿದ್ದರೂ ತಮ್ಮ ವೃತ್ತಿ ಜೀವನ ವೈಯಕ್ತಿಯ ಜೀವನ, ಸಾಮಾಜಿಕ ಜೀವನದಲ್ಲಿ ಸಮತೋಲನ, ಸಾಮರಸ್ಯವಿರುವ ವೈದ್ಯರಲ್ಲಿ ತನ್ನ ಪ್ರಶ್ನೆಗಳಿಗೆ ಉತ್ತರ ಸಿಕ್ಕೇ ಸಿಗುತ್ತದೆ ಎಂಬ ಖಾತರಿ ಯಿಂದ ವೈದ್ಯರನ್ನು ಭೇಟಿಯಾಗಲು ಹೊರಟೇಬಿಟ್ಟನು. ವೈದ್ಯರಿಗೆ ನಮಸ್ಕರಿಸಿ ತಾನು ಬಂದ ಉದ್ದೇಶವನ್ನು ತಿಳಿಸುತ್ತಾ.

**ವಿವೇಕ :**ಅಲ್ಲಾ ವೈದ್ಯರೇ ಈ ಟೆನ್ಷನ್ ಜೀವನದಲ್ಲಿ ಇಷ್ಟು ಸಮಾಧಾನವಾಗಿ ಆರೋಗ್ಯವಾಗಿ ನೀವು ಹೇಗೆ ಇರಲು ಸಾಧ್ಯ?

**ವೈದ್ಯ :** ಶಿಸ್ತು ಮತ್ತು ಕ್ರಮ ಬದ್ಧ ಜೀವನ ಶೈಲಿಯೊಂದಿಗೆ ನಮ್ಮ ಆಯುರ್ವೇದ ಶಾಸ್ತ್ರದಲ್ಲಿ ತಿಳಿಸಿರುವ ಸೂತ್ರಗಳ ಪಾಲನೆಯಿಂದಾಗಿ ನಾನು ಇಷ್ಟು ಆರೋಗ್ಯವಾಗಿದ್ದೇನೆ.

**ವಿವೇಕ:** ಆಯುರ್ವೇದ ಒಂದು ವೇದಾನಾ? ನಾನು ಇಷ್ಟು ದಿನ ವೇದ ಅಂದರೆ ಪೂಜೆ, ಹೋಮ ಹೀಗೆ ವೈದೀಕ ಕರ್ಮಗಳನ್ನು ಮಾತ್ರ ತಿಳಿಸುತ್ತದೆ ಅಂದುಕೊಂಡಿದ್ದೆ, ಇದರಲ್ಲಿ ನಮ್ಮ ಜೀವನ ಕ್ರಮ ಹೇಗಿರಬೇಕು ಅಂದೆಲ್ಲಾ ತಿಳಿಸುತ್ತದಾ! ನನಗೂ ಈ ಎಲ್ಲಾ ವಿಷಯಗಳನ್ನು ತಿಳಿಸಿ.

**ವೈದ್ಯ :** ಹೌದು ಆಯುರ್ವೇದ ಅಥರ್ವಣ ವೇದದ ಕೊನೆಯ ಭಾಗ ಎಂಬ ಉಲ್ಲೇಖವಿದೆ. ಆಯುರ್ವೇದ, ವೈದ್ಯ ಶಾಸ್ತ್ರವಾದರೂ ಅದು ಪ್ರಮುಖವಾಗಿ ‘ಜೀವನ ಶಾಸ್ತ್ರ’ ಇದರಲ್ಲಿ ಎರಡು ಅಣುಗಳು ಸೇರಿ ಆಗುವ ಜೀವೋತ್ಪತ್ತಿಯಿಂದ ಹಿಡಿದು, ಗರ್ಭದ ತಿಂಗಳು ತಿಂಗಳು ಬೆಳವಣಿಗೆ, ಶಿಶುವಿನ ಜನನ, ಜಾತ ಕರ್ಮ, ಜೀವಿಯ ಬೆಳವಣಿಗೆ, ಕಾಲಿಕವಾಗಿ, ಆಕಾಲಿಕವಾಗಿ ಬರುವ ರೋಗಗಳು, ಅದರ ಪರಿಹಾರ, ಜೀವಿಯ ಕಾಲಿಕ ಮತ್ತು ಅಕಾಲಿಕ ಮರಣ, ಅಷ್ಟೇ ಅಲ್ಲದೆ ಮನುಷ್ಯನ ಆರೋಗ್ಯಕ್ಕೆ ಮತ್ತು ರೋಗಕ್ಕೆ ಕಾರಣವಾದ ಆಹಾರ,ವಿಹಾರ (ಕೆಲಸ),ವಿಚಾರ ಎಲ್ಲವುಗಳ ಬಗ್ಗೆ ಸವಿಸ್ಥಾರವಾಗಿ ತಿಳಿಸಲಾಗಿದೆ. ರೋಗ ಉತ್ಪತ್ತಿಗೆ ಕಾರಣ ಅದರ ಪರಿಹಾರ ಅದಕ್ಕೆ ಬೇಕಾಗುವ ಪಥ್ಯಾಪಥ್ಯ. ಔಷಧ ದ್ರವ್ಯಗಳು ಅದರ ಗುಣ ಧರ್ಮ ಹೀಗೆ ಸಸ್ಯ,ಪ್ರಾಣಿ, ಪಕ್ಷಿ

ಎಲ್ಲಾ ಜೀವ ಸಂಕುಲದ ಬಗ್ಗೆಯೂ ಆಯುರ್ವೇದ ಶಾಸ್ತ್ರದಲ್ಲಿ ತಿಳಿಸಲಾಗಿದೆ.

**ವಿವೇಕ:** ಸುಮ್ಮನೇ ಯಾವ ವಿಚಾರವನ್ನೇ ಆಗಲಿ ವಿವೇಚಿಸದೆ ಅಂಧವಾಗಿ ಅನುಸರಿಸಲಾದೀತೆ, ಅದಕ್ಕೆಲ್ಲಾ ವೈಜ್ಞಾನಿಕವಾಗಿ ಬುನಾದಿ ಇದ್ದರೆ ಮಾತ್ರ ಅದನ್ನು ಅನುಸರಿಸಲು ಸಾಧ್ಯ.

**ವೈದ್ಯ:** ಸಾವಿರಾರು ವರ್ಷಗಳ ಹಿಂದೆ ನಮ್ಮ ಆಯುರ್ವೇದಾ ಚಾರ್ಯರಾದ ಚರಕ, ಸುಶ್ರುತ, ವಾಗ್ಭಟ ಮುಂತಾದ ಮಹರ್ಷಿಗಳು ತಮ್ಮ ಅನುಭವ ಮತ್ತು ಜ್ಞಾನದಿಂದ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇದರಲ್ಲಿ ತಿಳಿಸಿರುವ ವಿಷಯಗಳು ಆಗಿನ ಕಾಲಕಷ್ಟೇ ಅಲ್ಲದೆ, ಪ್ರಸ್ತುತ ಕಾಲಕ್ಕೂ ಮುಂಬರುವ ವರ್ಷಗಳಿಗೂ ಸೂಕ್ತವಾಗಿದೆ. ಇವುಗಳ ಹಿಂದೆ ಅಷ್ಟು ಬಲವಾದ ವಿಜ್ಞಾನವಿದೆ.

**ವಿವೇಕ:** ಅಯ್ಯಬ್ಬಾ। ನಾವು ಆರೋಗ್ಯವಾಗಿರುವುದಕ್ಕೆ ಗ್ರಂಥವನ್ನೆಲ್ಲಾ ಓದಬೇಕಾ!!

**ವೈದ್ಯ:** ವಿಷಯದ ಪ್ರಸ್ತಾಪನೆ ಸೂತ್ರದ ರೂಪದಲ್ಲಿದೆ. ಅದನ್ನು ತಿಳಿದರೆ ಸಾಕು.

"ಹಿತಾಹಿತಂ ಸುಖಂ ದುಖಮ್ ........... .......ಆಯುರ್ವೇದ ಉಚ್ಯತೆ// (ಚ.ಸಂ.ಸೂ ೧/೪)

**ವಿವೇಕ:** ವೈದ್ಯರೇ ಸಂಸ್ಕೃತದ ಈ ಶ್ಲೋಕವನ್ನು ಅರ್ಥ ಮಾಡಿಕೊಳ್ಳು ವುದು ಬಹಳ ಕಷ್ಟ , ಸ್ವಲ್ಪ ನಮ್ಮ ಆಡು ಭಾಷೆ ಕನ್ನಡದಲ್ಲಿ ಸರಳವಾಗಿ ಹೇಳಿದರೆ ತಲೆಗೆ ಹತ್ತುತ್ತದೆ.

**ವೈದ್ಯ :** ನೀನು ಹೇಳುವುದು ಸರಿ. ವಿಷಯಗಳನ್ನು ನಮ್ಮ ಭಾಷೆಯಲ್ಲಿ ತಿಳಿದಾಗ ಅದು ಚೆನ್ನಾಗಿ ಅರ್ಥವಾಗಿ, ಆ ಎಲ್ಲಾ ವಿಚಾರಗಳನ್ನು ನಾವು ಯಾವ ಬಲವಂತವೂ ಇಲ್ಲದೆ ಆಚರಣೆಗೆ ತರುತ್ತೇವೆ. ಆರೋಗ್ಯವಂತನ ಆರೋಗ್ಯವನ್ನು ಕಾಪಾಡುವುದು ಮತ್ತು ರೋಗಿಯ ರೋಗವನ್ನು ನಿವಾರಿಸುವುದೇ ಆಯುರ್ವೇದದ ಮೂಲ ಉದ್ದೇಶವಾಗಿದೆ.

**ವಿವೇಕ:** ಅದೇ ಇಂಗ್ಲೀಷಿನಲ್ಲಿ ಹೇಳುತ್ತಾರಲ್ಲ "ಪ್ರಿವೆಂಷನ್ ಈಸ್ ಬೆಟರ್ ದ್ಯಾನ್ ಕೂರ್ " ಅಂತ.

**ವೈದ್ಯ :** ಆರೋಗ್ಯವಂತನ ಆರೋಗ್ಯವನ್ನು ಕಾಪಾಡಿಕೊಳ್ಳಲು ಮೂರು ಮುಖ್ಯ ಸೂತ್ರಗಳನ್ನು ಆಯುರ್ವೇದ ಶಾಸ್ತ್ರ ತಿಳಿಸುತ್ತದೆ.

ದಿನಚರ್ಯೆ, ಋತುಚರ್ಯೆ ಮತ್ತು ಸದ್ ವೃತ್ತ ಎಂದು.

**ವಿವೇಕ :** ನನಗೆ ಗೊತ್ತಾಯಿತು ಬಿಡಿ, ದಿನಚರ್ಯೆ ಎಂದರೆ ನಾವು ದಿನ ದಲ್ಲಿ ಏನೆಲ್ಲಾ ಮಾಡುತ್ತೇವೆಯೋ ಅದು. ಎಲ್ಲರೂ ಬೆಳಗ್ಗೆ ಏಳುತ್ತೇವೆ, ತಿನ್ನುತ್ತೇವೆ, ಕೆಲಸ ಮಾಡುತ್ತೇವೆ, ಮಲಗುತ್ತೇವೆ ಅದರಲ್ಲೇನಿದೆ ವಿಶೇಷತೆ.

**ವೈದ್ಯ :** ಹಾ॥ ಹಾ॥ ಸ್ವಲ್ಪ ತಾಳ್ಮೆಯಿರಲಿ ಇಲ್ಲಿ ದಿನ ನಿತ್ಯವೂ.ಚರ್ಯೆ ಎಂದರೆ ನಮ್ಮ ಕ್ರಿಯೆಗಳು ಎಂದರ್ಥ.ಪ್ರತಿಯೊಂದು ಕೆಲಸಕ್ಕೂ ಒಂದು ಕ್ರಮ ವಿದೆ. ಒಂದು ಕ್ರಮದಲ್ಲಿ ಮಾಡಿದ ಕಾರ್ಯಗಳಿಗೆ ಅದಕ್ಕೆ ತಕ್ಕಂತೆ ಪ್ರಯೋಜನವೂ ಇದೆ. ಇದೆಲ್ಲವನ್ನೇ ದಿನಚರ್ಯೆ ತಿಳಿಸುತ್ತದೆ.

**ವೈದ್ಯ :** (ಗಡಿಯಾರ ನೋಡುತ್ತಾ) ನನ್ನ ಕ್ಲೀನಿಕ್‌ಗೆ ಹೊತ್ತಾಯಿತು. ನಾಳೆ ಇದೇ ಸಮಯಕ್ಕೆ ಬಾ,ದಿನ ಚರ್ಯೆಯ ಬಗ್ಗೆ ಸವಿಸ್ತಾರವಾಗಿ ತಿಳಿದುಕೊಳ್ಳು ವಂತೆ.

**ವಿವೇಕ:** ಖಂಡಿತಾ ಬರುತ್ತೇನೆ ಡಾಕ್ಟ್ರೇ !

(ಮುಂದುವರೆಯುತ್ತದೆ)





# ಶ್ರೀ ನೃಸಿಂಹ ಜಯಂತಿ

**ಶ್ರೀಮತಿ. ಪಾರಿಜಾತ ಬಿ.ಎಸ್.**
**90083 35689**



" ಏವಂ ಕಾಯೇನ ಮನಸಾ ವಚಸಾ ಚ ಮನೋಗತಮ್
ಪರಿಚರ್ಯಮಾಣೋ ಭಗವಾನ್ ಭಕ್ತಿ ಮತ್ಸರಿಚರ್ಯಯಾ"
"ಪುಂಸಾಮಮಾಯಿನಾಂ ಸಮ್ಯಗ್ಭಜತಾಂ ಭಾವವರ್ಧನಃ
ಶ್ರೇಯೋ ದಿಶತ್ಯಭಿಮತಂ ಯದ್ಧರ್ಮಾದಿಷು ದೇಹಿನಾಮ್".

ಯಾವ ವ್ಯಕ್ತಿಯು ದೇಹ ಮನಸ್ಸು ಮಾತುಗಳಿಂದ ಪ್ರಾಮಾಣಿಕವಾಗಿಯೂ ಗಂಭೀರವಾಗಿಯೂ ಭಗವಂತನ ಭಕ್ತಿ ಸೇವೆಯಲ್ಲಿ ನಿರತನಾಗಿರುತ್ತಾನೆಯೋ ಮತ್ತು ವಿದ್ಯುಕ್ತವಾದ ಭಕ್ತಿ ಚಟುವಟಿಕೆಗಳಲ್ಲಿ ಎಡೆಬಿಡದೆ ತೊಡಗಿರುತ್ತಾನೆಯೋ ಅವನ ಬಯಕೆಯನ್ನು ಭಗವಂತನು ಪೂರೈಸುತ್ತಾನೆ. ಆ ಭಕ್ತನು ಧರ್ಮ - ಅರ್ಥ- ಕಾಮ- ಮೋಕ್ಷಗಳನ್ನು ಬಯಸಿದರೂ ಆ ಫಲಗಳು ಅವನಿಗೆ ದೊರಕುತ್ತವೆ ಎಂಬುದು ಶ್ರೀಮಧ್ಭಾಗವತದ ೫೯-೬೦ ನೇಶ್ಲೋಕದ ಸಾರಾಂಶವಾಗಿದೆ.

ಅಂತೆಯೇ ಪ್ರತಿಯೊಬ್ಬ ವ್ಯಕ್ತಿಯೂ ಆ ಭಗವಂತನಲ್ಲಿ ಅಪಾರವಾದ ನಂಬಿಕೆಯನ್ನು ಭಕ್ತಿಯನ್ನು ಹೊಂದಿ ತಮ್ಮ ಕಷ್ಟಗಳನ್ನು ಪರಿಹರಿಸಿ, ಮನೋಭಿಷ್ಟಗಳನ್ನು ಈಡೇರಿಸಲೆಂದು ಬೇಡುತ್ತಾನೆ. ಅದಕ್ಕೆಂದೆ ಆ ಭಗವಂತನು ವಿವಿಧ ಅವತಾರಗಳನ್ನು ಹೊಂದಿ "ದುಷ್ಟ ಶಿಕ್ಷಣ ಶಿಷ್ಟ ರಕ್ಷಣ" ಕಾರ್ಯದಲ್ಲಿ ತೊಡಗಿದ್ದಾನೆ ಎಂಬುದು ಭಕ್ತರ ನಂಬಿಕೆ. ಭಗವಂತನ ದಶಾವತಾರಗಳಲ್ಲಿ ನರಸಿಂಹ ಅವತಾರವೂ ಒಂದು. 'ದುಷ್ಟ ಶಿಕ್ಷಣ ಶಿಷ್ಟ ರಕ್ಷಣ' ಕಾರ್ಯಕ್ಕಾಗಿ ಅನೇಕ ರೂಪಗಳಲ್ಲಿ ಅವತರಿಸಿದ ಶ್ರೀಮನ್ನಾರಾಯಣನು ಉಗ್ರನರಸಿಂಹನಾಗಿ ಹಿರಣ್ಯಕಶ್ಯಪುವನ್ನು ಸಂಹರಿಸಿ ಪ್ರಹ್ಲಾದನ ಮೂಲಕ ತಾನು ಈ ಸೃಷ್ಟಿಯಲ್ಲಿ ಸಕಲ ಜೀವ ರಾಶಿಗಳಲ್ಲೂ ನೆಲೆಸಿದ್ದೇನೆಂಬುದನ್ನು ಜಗತ್ತಿಗೆ ಸಾರಿದ್ದಾನೆ.

ಸಿಂಹವದನ, ನಖಾಸ್ತ್ರ, ಅಗ್ನಿಲೋಚನ, ಕರಾಲ, ಮೃಗೇಂದ್ರ,ಭೈರವದಂಬರ ಎಂದು ವಿವಿಧ ಹೆಸರುಗಳಿಂದ ಕರೆಯಲ್ಪಡುವ ನೃಸಿಂಹನು ಹುಟ್ಟಿದ ದಿನವನ್ನು "ನೃಸಿಂಹ ಜಯಂತಿ" ಯೆಂದು ಆಚರಿಸಲಾಗುತ್ತದೆ. ನೃಸಿಂಹ ಅಥವಾ ನರಸಿಂಹ ಎಂಬ ಶಬ್ದವು ನರ ಎಂದರೆ ಮನುಷ್ಯ, ಸಿಂಹ ಎಂಬ ಉಗ್ರ ಪ್ರಾಣಿ ಸೇರಿ ನರಸಿಂಹ ಎಂದೆನಿಸಿದೆ. ಮುಂದುವರೆದು ನರಸಿಂಗ್, ನೃಸಿಂಹ, ನರಸೊಂಗ, ನರಸಿಂಬ ಎಂದು ಕರೆಯಲ್ಪಟ್ಟಿದೆ.

### ಶ್ರೀನರಸಿಂಹನ ಅವತಾರ

ಶ್ರೀಪ್ರಹ್ಲಾದ ಪುರಾಣ ಹಾಗೂ ಭಾಗವತ ಪುರಾಣದಲ್ಲಿ ಶ್ರೀ ನರಸಿಂಹರ ಅವತಾರ ಕುರಿತು ಮಾಹಿತಿಯಿದೆ. ಹಿಂದೆ ವರಾಹ ಅವತಾರದಲ್ಲಿ ಶ್ರೀವಿಷ್ಣು ಅಸುರ ಹಿರಣ್ಯಾಕ್ಷನನ್ನು ಸಂಹರಿಸಿ, ಶಿಷ್ಟರಕ್ಷಣಾ ಕಾರ್ಯ ಕೈಗೊಂಡನು. ಇದರಿಂದ ಕುಪಿತನಾದ ಹಿರಣ್ಯಾಕ್ಷನ ಹಿರಿಯ ಸಹೋದರನಾದ ಹಿರಣ್ಯಕಶ್ಯಪು ವಿಷ್ಣುವನ್ನು ತನ್ನ ಶತ್ರುವಾಗಿ ಕಂಡನು. ಸೃಷ್ಟಿಕರ್ತನಾದ ಬ್ರಹ್ಮದೇವನನ್ನು ಕುರಿತು ಕಠಿಣ ತಪಸ್ಸನ್ನು ಕೈಗೊಂಡನು. ಆಕಾಶದಲ್ಲಾಗಲೀ, ಸ್ವರ್ಗದಲ್ಲಾಗಲೀ, ಪಾತಾಳದಲ್ಲಾಗಲೀ, ಭೂಮಿಯಲ್ಲಾಗಲೀ, ಹಗಲಲ್ಲಾಗಲೀ, ರಾತ್ರಿಯಾಗಲೀ, ಮನೆಯ ಹೊರಗಾಗಲೀ, ಒಳಗಾಗಲೀ, ದೇವನಿಂದಾಗಲೀ, ಅಸುರನಿಂದಾಗಲೀ, ಪ್ರಾಣಿಯಿಂದಾಗಲೀ, ಮನುಷ್ಯನಿಂದಾಗಲೀ ನನಗೆ ಸಾವು ಬರಬಾರದೆಂಬಂತೆ ಬ್ರಹ್ಮನಿಂದ ವರ ಪಡೆದನು ನಂತರ ಅತಿ ಶಕ್ತಿಶಾಲಿಯಾಗಿ , ತನಗೇ ಸಾವೇ ಇಲ್ಲವೆಂದು ಬಗೆದು ದೇವಾನುದೇವತೆಗಳನ್ನು ತನ್ನ ಹಿಡಿತದಲಿರಿಸಲು ಮುಂದಾದನು, ಶ್ರೀವಿಷ್ಣು ಭಕ್ತರನ್ನು ಹಿಂಸಿಸತೊಡಗಿದನು. ಇದರಿಂದ ಬಹಳವಾಗಿ ಕಷ್ಟದಲ್ಲಿ ಸಿಲುಕಿದ ದೇವಾನುದೇವತೆಗಳು ವಿಷ್ಣುವಿನ ಮೊರೆ ಹೋದರು. ಅಸುರ ಹಿರಣ್ಯಕಶ್ಯಪು ಸ್ವಾರ್ಥಿಯಾಗಿ ವಿಷ್ಣು ಭಕ್ತನಾದ ತನ್ನ ಮಗನನ್ನು

**ಮಹಾವಿಷ್ಣುವಿನ ವೈಕುಂಠ ದ್ವಾರದ ಪಾಲಕರಾದ ಜಯ ವಿಜಯರ ಶಾಪ ವಿಮೋಚನೆಗಾಗಿ ಹಾಗೂ ದುಷ್ಟ ಶಿಕ್ಷಣದ ಸಂದೇಶಕ್ಕಾಗಿ ಶ್ರೀಮನ್ನಾರಾಯಣನು ತನ್ನ ದಶಾವತಾರದಲ್ಲಿ ವರಾಹ ಹಾಗೂ ನೃಸಿಂಹನ ಅವತಾರವನ್ನು ತಾಳಿದನು.**



ಬಿಡಲಿಲ್ಲ ಅವನನ್ನು ಹಿಂಸೆಗೆ ಗುರಿಮಾಡಿ ಕೊಡಬಾರದ ಕಷ್ಟಗಳನ್ನು ನೀಡಿದನು. ನೀನು ಸದಾ ಸ್ಮರಿಸುವ ಆ ವಿಷ್ಣು ಎಲ್ಲಿರುವನು ತಿಳಿಸು ಎಂದು ಪೀಡಿಸಲು, ಶ್ರೀಪ್ರಹ್ಲಾದನು ಭಗವಂತನಾದ ಶ್ರೀಮನ್ನಾರಾಯಣನು ಸಕಲ ಚರಾಚರಗಳಲ್ಲಿಯೂ ಇರುವನೆಂದು ಉತ್ತರಿಸಿದನು. ಕೋಪಗೊಂಡು ಅಸುರನು ತನ್ನ ಎದುರಿಗಿದ್ದ ಕಂಬವೊಂದನ್ನು ತೋರಿಸಿ ಇಲ್ಲಿರುವನೇ ನಿನ್ನ ಹರಿ ಎನ್ನಲು, ಪ್ರಹ್ಲಾದನು "ಹೌದೆನ್ನಲು" ಕ್ರೋದಾಗ್ನಿಯೊಂದಿಗೆ ಅಸರನು ಕಂಬಕ್ಕೆ ತನ್ನ ಗಧೆಯಿಂದ ಹೊಡೆದನು. ಶಿಷ್ಠರಕ್ಷಣಾ ಕಾರ್ಯಕ್ಕಾಗಿ ಕಂಬ ವನ್ನು ಸೀಳಿಕೊಂಡು ನೃಸಿಂಹನು ಹೊರಬಂದನು.ಗೋಧೂಳಿ ಸಮಯ ದಲ್ಲಿ, ಅಸುರನನ್ನು ಹೊತ್ತು ಒಳಗೂ ಅಲ್ಲದೆ ಹೊರಗೂ ಅಲ್ಲದೆ ಹೊಸ್ತಿಲಲ್ಲಿ ತನ್ನ ತೊಡೆಯ ಮೇಲೆ ಆತನ ದೇಹವನ್ನು ತನ್ನ ಚೂಪಾದ ಉಗುರುಗಳಿಂದ ಸೀಳಿ ಕರುಳನ್ನು ಮಾಲೆಯಾಗಿ ಧರಿಸಿದನು. ಅತ್ಯಂತ ಉಗ್ರನಾಗಿ ಕೋಪಾಗ್ನಿ ಹೊರಸೂಸುವುದನ್ನು ಕಂಡ ಪ್ರಹ್ಲಾದನು ಸ್ವಾಮಿಯನ್ನು ತನ್ನ ನುಡಿಗಳಿಂದ ಸಮಾಧಾನ ಮಾಡಿದನು.ಹೀಗೆ ನರಸಿಂಹನು ಹಿರಣ್ಯಕಶ್ಯಪುವನ್ನು ಸಂಹರಿಸಿ, ಆತನ ಶಾಪವಿಮೋಚನೆ ಹಾಗೂ ದುಷ್ಠ ಶಿಕ್ಷಣದ ಸಂದೇಶವನ್ನು ಸಾರಲು ಅವತಾರ ತಾಳಿದನು. ಈ ಶುಭ ದಿನವನ್ನು "ಶ್ರೀ ನರಸಿಂಹ ಜಯಂತಿ"ಯೆಂದು ಆಚರಿಸಲಾಗುವುದು. ನೃಸಿಂಹನ ೭೪ ಅವತಾರಗಳಿವೆ ಅವುಗಳಲ್ಲಿ ೯ ಅವತಾರಗಳು ಪ್ರಮುಖವಾಗಿದೆ. ಈ ನವನೃಸಿಂಹರನ್ನು ಒಟ್ಟಾಗಿ ಕಾಣುವ ಪವಿತ್ರ ಕ್ಷೇತ್ರ ಆಂಧ್ರಪ್ರದೇಶದ ಅಹೋಬಲವಾಗಿದೆ. ಇಲ್ಲೇ ನೃಸಿಂಹನು ಹಿರಣ್ಯಕಶ್ಯಪನನ್ನು ಕೊಂದ ಕೋಪಾಗ್ನಿ ದೇವನಾಗಿ ಕಾಣಿಸಿಕೊಂಡನೆಂದು ನಂಬಲಾಗಿದೆ.

## ನೃಸಿಂಹ ಜಯಂತಿ

ಶ್ರೀ ನೃಸಿಂಹ ಜಯಂತಿಯನ್ನು ವೈಶಾಖ ಮಾಸ, ಶುಕ್ಲಪಕ್ಷದ ಚತುರ್ದಶಿಯಂದು ಆಚರಿಸಲಾಗುತ್ತದೆ. ಈ ವರ್ಷ ೨೦೨೩ ರ ಮೇ ತಿಂಗಳಿನ ೪ ರಂದು ದೇಶಾದ್ಯಂತ ಶ್ರೀ ನೃಸಿಂಹ ಜಯಂತಿಯನ್ನು ಭಕ್ತಿ ಯಿಂದ ಆಚರಿಸಲಾಗುತ್ತದೆ. ಅಲಂಕೃತ ಮಂಟಪದಲ್ಲಿ ಸ್ವಾಮಿಯನ್ನು ಕುಳ್ಳಿರಿಸಿ , ಹೂ ಪತ್ರೆಗಳಿಂದ ಪೂಜಿಸುವರು. ಅಲಂಕರಿಸಿ ಸಂಜೆ ಸಮಯ ದಲ್ಲಿ ಸ್ವಾಮಿಯನ್ನು ವಿವಿಧ ಹೂಗಳಿಂದ ಅರ್ಚಿಸುವರು, ಧೂಪ ದೀಪಗಳಿಂದ ಪೂಜಿಸುವರು. ಈ ದಿನ ಉಪವಾಸ ವ್ರತ ನಡೆಸಿ, ಸ್ವಾಮಿಗೆ ಸಿಹಿ ಪದಾರ್ಥಗಳನ್ನು ಹಣ್ಣು ಹಂಪಲುಗಳನ್ನು ನೈವೇದ್ಯ ಮಾಡಲಾಗು ತ್ತದೆ.

ಮಹಾವಿಷ್ಣುವಿನ ವೈಕುಂಠ ದ್ವಾರದ ಪಾಲಕರಾದ ಜಯ ವಿಜ ಯರ ಶಾಪ ವಿಮೋಚನೆಗಾಗಿ ಹಾಗೂ ದುಷ್ಟ ಶಿಕ್ಷಣದ ಸಂದೇಶಕ್ಕಾಗಿ ಶ್ರೀಮನ್ನಾರಾಯಣನು ತನ್ನ ದಶಾವತಾರದಲ್ಲಿ ವರಾಹ ಹಾಗೂ ನೃಸಿಂಹನ ಅವತಾರವನ್ನು ತಾಳಿದನು. ಈ ನೃಸಿಂಹ ರೂಪದಲ್ಲಿ ಭಗ ವಂತನು ಕಾಣಿಸಿಕೊಂಡ ಸಂಭ್ರಮವನ್ನು ಭಕ್ತಜನರು ನೃಸಿಂಹ ಜಯಂತಿ ಯೆಂದು, ವಿಶೇಷ ಆಚರಣೆ, ಸಂಪ್ರದಾಯದ ಹೆಸರಿನಲ್ಲಿ ವಿಜೃಂಭಿಸಿ, ಮಾನಸಿಕ ಆನಂದವನ್ನು ಮತ್ತು ಧನಾತ್ಮಕ ಶಕ್ತಿಯ ಗುರುತನ್ನು ಕಂಡು ಕೊಳ್ಳುವರು.



# ಸಂಪಿಗೆಯ ಶ್ರೀನಿವಾಸ ದೇವಾಲಯ

## ಕರ್ನಾಟಕದ ವೈಷ್ಣವ ದೇವಾಲಯಗಳು

**30**

-ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಒಂದು ಪುರಾಣ ಪ್ರಸಿದ್ಧ ಗ್ರಾಮ ಸಂಪಿಗೆ. ಇದು ಗುಬ್ಬಿ ತಾಲ್ಲೂಕು ನಿಟ್ಟೂರಿನಿಂದ, ನಿಟ್ಟೂರು ತುರುವೇಕೆರೆ ರಸ್ತೆಯಲ್ಲಿ 10 ಕಿ.ಮೀ. ದೂರದಲ್ಲಿದೆ.

ಸಂಪಿಗೆಯಲ್ಲಿ ದೊರೆಯುವ ಕ್ರಿ.ಶ. 1331 ರ ಶಾಸನದಲ್ಲಿ ಸಂಪಿಗೆಪುರ, ಚಂಪಕಾಪುರ ಎಂದು ಕರೆದಿರುವ ಸಂಪಿಗೆಯಲ್ಲಿ ಹೇರಳವಾಗಿ ಸಂಪಿಗೆ ಹೂಗಳು ಬೆಳೆಯುತ್ತಿದ್ದರಿಂದ ಸಂಪಿಗೆ ಎಂದು ಗ್ರಾಮಕ್ಕೆ ಹೆಸರು ಬಂದಿತೆಂದು ತಿಳಿದುಬಂದಿದೆ. ಸಂಪಿಗೆಯಲ್ಲಿ ಸುಪ್ರಸಿದ್ಧ ಶ್ರೀ ಶ್ರೀನಿವಾಸ ದೇವಾಲಯವಿದೆ. ಈ ಗ್ರಾಮದ ಊರ ಹೊರಗೆ ಇತ್ತೀಚೆಗೆ ನವೀಕೃತವಾದ ಸುಂದರವಾದ ಹೊಯ್ಸಳರ ಕಾಲದ ಮೂರ್ತಿಯನ್ನು ಹೊಂದಿರುವ ಚನ್ನಕೇಶವನ ದೇವಾಲಯವಿದೆ. ಈ ದೇವಾಲಯ ಬದಿಯಲ್ಲಿಯೇ ಹೊಯ್ಸಳರ ಕಾಲದ ಕಪಿಲ-ಸಿದ್ಧ ಮಲ್ಲಿಕಾರ್ಜುನ ದೇವಾಲಯವನ್ನು ಪುನಃ ನಿರ್ಮಿಸಲು ಕಳಚಿರುವರು.


ಪುರಾಣಗಳ ಕಾಲದಲ್ಲಿ ಸಂಪಿಗೆಯು ಹಂಸಧ್ವಜನ ಮಗನಾದ ಸುಧನ್ವನ ರಾಜಧಾನಿಯಾಗಿತ್ತು ಎಂದು ಸ್ಥಳ ಪುರಾಣದಿಂದ ತಿಳಿದು ಬರುತ್ತದೆ.

ಸಂಪಿಗೆ ಗ್ರಾಮದ ಊರ ನಡುವಿರುವ ಶ್ರೀನಿವಾಸ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಣ್ಣ ತೆರೆದ ಮುಖಮಂಟಪಗಳನ್ನೊಳಗೊಂಡ ರಚನೆಯಾಗಿದೆ. ದೇವಾಲಯಕ್ಕೆ ಪ್ರವೇಶದ್ವಾರವಿದ್ದು ಸುಂದರವಾದ ನೂತನ ರಾಜ ಗೋಪುರವಿದೆ. ಶ್ರೀನಿವಾಸ ಗುಡಿಯ ಹಿಂಬದಿಯಲ್ಲಿ ತಾಯಿ ಪದ್ಮಾವತಿದೇವಿಯ ಗುಡಿಯಿದೆ. ಶ್ರೀನಿವಾಸ ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು. ಒಳಗೆ ಭಕ್ತರು ಬಂದು ತಂಗಿ, ದೇವರ ಪೂಜಾ ಕೈಂಕರ್ಯವನ್ನು ಕೈಗೊಳ್ಳಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಗರ್ಭಗುಡಿಯಲ್ಲಿ ಚಕ್ರ-ಶಂಖ- ಗದಾ-ವರದ ಹಸ್ತನಾಗಿರುವ ವೆಂಕಟೇಶ್ವರನ ಸುಂದರವಾದ ಮೂರ್ತಿಯಿರುವುದು. ಕಿರೀಟಮಕುಟ ಧರಿಸಿರುವ ದೇವನ ಹಿಂದೆ ಪ್ರಭಾವಳಿಯಿದೆ. ಪ್ರಧಾನ ದೇವಾಲಯದ ಹಿಂದಿರುವ ಗುಡಿಯಲ್ಲಿ ಚತುರ್ಭುಜೆ ಪದ್ಮಾವತಿಯ ಅಸೀನ ಭಂಗಿಯ ಮೂರ್ತಿಯಿದೆ. ಈ ದೇವಿಯನ್ನು ಚಂಪಕಾಪುರಿ ಪದ್ಮಾವತಿ ಎಂದು ಕರೆಯುವರು. ದೇವಿಯು ಮೇಲಿನ ಕೈಗಳಲ್ಲಿ ಕಮಲವನ್ನು ಹಿಡಿದಿದ್ದು ಕೆಳಗಿನ ಕೈಗಳು ಅಭಯ-ವರದ ಹಸ್ತದಲ್ಲಿದೆ. ದೇವಾಲಯದ ಗರ್ಭಗುಡಿಯ ಮೇಲೆ ಇತ್ತೀಚಿನ ಶಿಖರವಿದೆ ಸಂಪಿಗೆ ಶ್ರೀನಿವಾಸ ದೇವರ ಸ್ಥಾಪನೆಯಾದ ಬಗ್ಗೆ ಇಲ್ಲಿಯ ಸ್ಥಳ ಪುರಾಣದಲ್ಲಿ ಮಾಹಿತಿ ಸಿಗುತ್ತದೆ.ಹಿಂದೆ ಸುಧನ್ವನಿಂದ ಪೂಜಿಸಲ್ಪಟ್ಟ ಶ್ರೀನಿವಾಸನ ಮೂರ್ತಿಯು ಒಂದು ಹುತ್ತದಲ್ಲಿ ಸೇರಿತ್ತು ಒಂದು ಹಸುವು ನಿತ್ಯವೂ ಬಂದು ಕ್ಷೀರಧಾರೆಯಿಂದ ಹುತ್ತವನ್ನು ನೆನೆಸುತ್ತಿತ್ತು ಹೀಗೆ ಕ್ಷೀರಾಭಿಷೇಕ ಮಾಡುತ್ತಿರುವುದನ್ನು ಕಂಡು ಜನರು ಚಕಿತರಾಗಿ ಹುತ್ತವನ್ನು ಅಗೆದು ನೋಡಲಾಗಿ, ಸ್ವಾಮಿಯ ದಿವ್ಯಮೂರ್ತಿ ಸಿಕ್ಕಿತು. ಅದೇ ಮೂರ್ತಿಯನ್ನು ಪ್ರತಿಷ್ಠಾಪಿಸಿ ಗುಡಿಯನ್ನು ಕಟ್ಟಿಸಿದರೆಂದು ಸ್ಥಳ ಪುರಾಣ ಹೇಳುತ್ತದೆ.

ಸಂಪಿಗೆ ಶ್ರೀನಿವಾಸ ದೇವನು ಸಾವಿರಾರು ಕುಟುಂಬಗಳಿಗೆ ಕುಲ ದೈವವಾಗಿ ನಿತ್ಯ ಪೂಜೆ, ಪಕ್ಷ ಪೂಜೆಗಳು ಬಹು ಸಾಂಗವಾಗಿ ನೆರವೇರುತ್ತವೆ. ದೇವಾಲಯವು ವಾಸ್ತುವಿನ ಲಕ್ಷಣದಿಂದ ವಿಜಯನಗರೋತ್ತರ ಕಾಲಕ್ಕೆ ಸೇರಿಸಬಹುದು.

ಸಂಪಿಗೆ ಶ್ರೀನಿವಾಸ ಸ್ವಾಮಿಯ ರಥೋತ್ಸವವು ಪ್ರತಿ ವರ್ಷ ವೈಶಾಖ ಶುದ್ಧ ದ್ವಾದಶಿ ಉಪರಿ ತ್ರಯೋದಶಿಯಲ್ಲಿ ಬರುವ ಚಿತ್ತಾ ನಕ್ಷತದಲ್ಲಿ ಬಹು ವೈಭವದಿಂದ ಜರುಗುವುದು. ಹನ್ನೊಂದು ದಿನಗಳ ಕಾಲ ಪಾಂಗಿತವಾಗಿ ನಡೆಯುವ ಉತ್ಸವದಲ್ಲಿ ಕ್ರಮವಾಗಿ ಅಂಕುರಾರ್ಪಣ, ಹಂಸವಾಹನೋತ್ಸವ, ದೊಡ್ಡ ಗರುಡೋತ್ಸವ, ಚಂದ್ರಮಂಡಲೋತ್ಸವ ಮುಂತಾದ ಉತ್ಸವಗಳು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನೆರವೇರುವುದು.

**ಹೀಗೆ ಬನ್ನಿ :** ತುರುವೇಕೆರೆ ತಾಲ್ಲೂಕು ಸಂಪಿಗೆಯು ನಿಟ್ಟೂರು-ತುರುವೇಕೆರೆ ರಸ್ತೆಯಲ್ಲಿ ನಿಟ್ಟೂರಿನಿಂದ ಸುಮಾರು ಹತ್ತು ಕಿ.ಮೀ. ದೂರವಿರುವುದು. ತುರುವೇಕೆರೆಯಿಂದಲೂ ಸಂಪಿಗೆಗೆ ಬರಬಹುದು.



# ಲಕ್ಷ್ಮೀ ಹೃದಯ

**ಡಾ|| ಎ. ಕುಮುದ**
97319 03752

ಅಸ್ಯ ಶ್ರೀಮಹಾಲಕ್ಷ್ಮೀಹೃದಯಸ್ತೋತ್ರ
ಮಹಾಮಂತ್ರಸ್ಯ ಭಾರ್ಗವ ಋಷಿಃ
ಅನುಷ್ಟುಬಾದಿನಾನಾಛಂದಾಂಸಿಂ ।
ಶ್ರೀ ಮಹಾಲಕ್ಷ್ಮೀರ್ದೇವತಾ॥
ಶ್ರೀ ಬೀಜಮ್ । ಹ್ರೀಂ ಶಕ್ತಿಃ ।
ಐಂ ಕೀಲಕಮ್ । ಮಮಾಭೀಷ್ಟಸಿದ್ಧರ್ಥೇ।
ಶ್ರೀಮಹಾಲಕ್ಷ್ಮೀಪ್ರಸಾದಸಿಧ್ಯರ್ಥಂ
ಜಪೇ ವಿನಿಯೋಗಃ ॥

ಲಕ್ಷ್ಮೀದೇವಿಗೆ ಸಂಬಂಧಪಟ್ಟ ಅನೇಕ ಸ್ತೋತ್ರ ಸಾಹಿತ್ಯಗಳಲ್ಲಿ 'ಲಕ್ಷ್ಮೀಹೃದಯವೂ' ಒಂದಾಗಿದೆ. ಇದು ಅಥರ್ವಣ ರಹಸ್ಯದಲ್ಲಿ ಪ್ರತಿಪಾದಿತವಾದ ಈ ಲಕ್ಷ್ಮೀ ಹೃದಯವು ಅತ್ಯಂತ ಶ್ರೇಷ್ಠವಾಗಿದೆ. ಈ ಲಕ್ಷ್ಮೀಹೃದಯವು ಸುಲಲಿತವಾಗಿಯೂ,ಮನೋಜ್ಞವಾಗಿಯೂ ಇದೆ.ಈ ಲಕ್ಷ್ಮೀ ಹೃದಯವು ಮೇಲ್ನೋಟಕ್ಕೆ ಲಕ್ಷ್ಮಿಯನ್ನೇ ಸ್ತೋತ್ರ ಮಾಡಿದಂತೆ ಕಂಡರೂ ಇದರಲ್ಲಿ ಭಗವನ್ಮಹಾತ್ಮೆಯೂ ಅಡಗಿದೆ. ಕೇವಲ ಲಕ್ಷ್ಮೀ ಹೃದಯವನ್ನು ಮಾತ್ರ ಪಾರಾಯಣ ಮಾಡದೆ ಜೊತೆಗೆ ನಾರಾಯಣ ಹೃದಯವನ್ನೂ ಪಾರಾಯಣ ಮಾಡುವುದರಿಂದ ಪುಣ್ಯ ಲಭಿಸುವುದೆಂಬ ಪ್ರತೀತಿಯಿದೆ.

ಲಕ್ಷ್ಮೀಹೃದಯವೆಂಬ ದೀರ್ಘಕೃತಿಯು ಗುರುಜಗನ್ನಾಥರೆಂಬ ಅಂಕಿತರಾದ ಸ್ವಾಮಿರಾಯರೆಂಬುವರಿಂದ ರಚಿತವಾಗಿದೆ.ಈ ಕೃತಿಯು ೧೦೮ ನುಡಿಗಳಿಂದ ಕೂಡಿದ್ದು ಭಾಮಿನಿಷಟ್ಪದಿಯಲ್ಲಿದೆ.

ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಂ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ಎಂಬುದು

ಗೀತೆಯ ಅಮೃತವಾಣಿ. ಭಗವಂತನು ಸ್ವತಃ ಲಕ್ಷ್ಮಿಯನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಂಡು ಈಶಕೋಟಿ ಪ್ರವಿಷ್ಟಳನ್ನಾಗಿ ನಿರ್ಣಯಿಸಿರುವನು.ಜಗನ್ಮಾತೆಯಾದ ಲಕ್ಷ್ಮಿಯ ಶರೀರವು ಅಪ್ರಾಕೃತವೂ, ಅವಿನಾಶಿಯೂ ಶಾಶ್ವತವೂ ಆದದ್ದು. ಭಗವಂತನು ಚೇತನಾಚೇತನಾತ್ಮಕವಾದ ಈ ಜಗತ್ತನ್ನು ಲಕ್ಷ್ಮಿಯ ಮೂಲಕ ಸೃಷ್ಟಿಗೆ ತರುವನು. ಆದ್ದರಿಂದಲೇ ಭಗವಂತನು ತಂದೆಯಾದರೆ ಲಕ್ಷ್ಮಿಯು ತಾಯಿಯಾಗಿರುವಳು.ಕರುಣಾಮಯನಾದ ಭಗವಂತನು ಲಕ್ಷ್ಮಿಯನ್ನು ಬಿಟ್ಟು ಒಂದರೆ ಕ್ಷಣವೂ ಇರುವುದಿಲ್ಲ. ಭಗವಂತನ ಅನುಗ್ರಹವಾಗ ಬೇಕಾದರೆ ಲಕ್ಷ್ಮಿಯ ಅನುಗ್ರಹವೂ ಅತ್ಯವಶ್ಯಕವೆಂಬುದು ದಾಸರ ನಂಬಿಕೆ. ಶ್ರೀ ವಿದ್ಯಾರಣ್ಯರೂ ಈ ಲಕ್ಷ್ಮೀ ಹೃದಯವನ್ನು ಜಪಿಸಿಯೇ ಸುವರ್ಣವೃಷ್ಟಿಯಾಗುವಂತೆ ಮಾಡಿದರೆಂದು ಇತಿಹಾಸದಿಂದ ತಿಳಿದು ಬಂದಿದೆ.

ವಂದೇ ಲಕ್ಷ್ಮೀಂ ಪರಶಿವಮಯೀಂ
ಶುದ್ಧಜಾಂಬೂನದಾಭಾಂ
ತೇಜೋರೂಪಾಂ ಕನಕವಸನಾಂ
ಸರ್ವ ಭೂಷೋಜ್ಜ್ವಲಾಂಗಿತಮ್
ಬೀಜಾಪೂರಂ ಕನಕಕಲಶಂ
ಹೇಮಪದ್ಮೇದಧಾನಾಂ
ಆದ್ಯಾಂ ಶಕ್ತಿಂ ಸಕಲ ಜನನೀಂ
ವಿಷ್ಣುವಾಮಾಂಕ ಸಂಸ್ಥಾನಮ್ ॥೧॥

**ಅನುವಾದ -**

ಶ್ರೀ ಮನೋಹರೇ ಲಕುಮಿ ತವ ಪದ
ತಾಮರಸ ಯುಗ ಭಜಿಪೆ ನಿತ್ಯದಿ
ಸೋಮಸೋದರಿ ಪರಮಮಂಗಳೆ ತಪ್ತಕಾಂಚನಳೆ
ಸೋಮ ಸೂರ್ಯ ಸುತೇಜೋರೂಪಳೆ
ಹೇಮ ಸನ್ನಿಭ ಪೀತ ವಸನಳೇ ॥
ಎಂದು ಲಕ್ಷ್ಮಿಯನ್ನು ಪ್ರಾರ್ಥಿಸಿದ್ದಾರೆ.




(- ಮುಂದುವರೆಯುತ್ತದೆ)

# ಸೌಬಲೇಯಿ

– ಡಾ || ವಾಣಿಶ್ರೀ ಬಿ. ಎಮ್.
94803 22475

ಪಂಚಮವೇದವೆಂದು ಹೆಸರಾದ ಮಹಾಭಾರತ ಮಹಾಕಾವ್ಯವು ಭಾರತೀಯರ ಮನೆ - ಮನೆಗಳಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ವೇದಾಧ್ಯಯನದಿಂದ ದೊರಕುವ ಪುಣ್ಯವು ರಾಮಾಯಣ, ಮಹಾಭಾರತಗಳ ಪಾರಾಯಣದಿಂದಲೂ ಉಂಟಾಗುವುದು. ಜಗತ್ತಿನಲ್ಲಿ ಧರ್ಮಕ್ಕೆ ಜಯ ಎಂದು ಸಾರುವ ಮಹಾಭಾರತಕ್ಕೆ 'ಜಯಾ' ಎಂಬ ಹೆಸರೂ ಇದೆ.ವೇದಾಧಿಕಾರವಿಲ್ಲದವರಿಗೆ ಪುಣ್ಯ ಸಂಪಾದನೆಯಾಗಲೆಂಬ ಉದ್ದೇಶದಿಂದ ಈ ಕಾವ್ಯವು ರಚಿತವಾಯಿತು. ಈ ಕಾವ್ಯದ ಗರ್ಭದಲ್ಲಿ ಹಲವಾರು ಪಾತ್ರಗಳು ವೈವಿಧ್ಯಮಯವಾಗಿ ಸೇರಿ ಹೋಗಿವೆ. ಇದರಲ್ಲಿನ ಎಲ್ಲ ಸ್ತ್ರಿ ಪಾತ್ರಗಳೂ ಒಂದಿಲ್ಲೊಂದು ರೀತಿಯಲ್ಲಿ ಕಷ್ಟ ಪರಂಪರೆಗೆ ಎದುರಾಗಿ ದುಃಖಿಸುವ ಪಾತ್ರವೇ ಆಗಿದೆ. ಈ ಲೇಖನದಲ್ಲಿ ಗಾಂಧಾರಿಯ ವಿಚಾರವನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ.

ಇಂದಿನ ಕಂದಹಾರ್ ಪ್ರದೇಶ ಗಾಂಧಾರದ ಅರಸ ಸುಬಲ.ಅವನ ಧರ್ಮಪತ್ನಿ ಸುಧರ್ಮ. ಇವರಿಬ್ಬರ ಮಗಳು ಗಾಂಧಾರಿ. ಅವಳನ್ನು ಸೌಬಲೆ, ಸೌಬಲೇಯಿ ಎಂದು ಕರೆಯುತ್ತಾರೆ. ಅವಳ ಅಣ್ಣ ಮಹಾಭಾರತದ ಬಹು ಮುಖ್ಯ ಪಾತ್ರಗಳಲ್ಲೊಂದಾದ ಶಕುನಿ.ಗಾಂಧಾರಿ ಸುಂದರಿ, ಸುಶೀಲೆ, ಸದ್ಗುಣಶೀಲೆ, ಧರ್ಮನಿಷ್ಠೆಯುಳ್ಳ ಸ್ತ್ರೀರತ್ನ. ಗಾಂಧಾರದ ರಾಜಪುತ್ರಿ.ಹಸ್ತಿನಾಪುರದಿಂದ ಧೃತರಾಷ್ಟ್ರನೊಡನೆ ವಿವಾಹದ ಪ್ರಸ್ತಾಪ ಬಂದಾಗ ಆತ ಕುರುಡ ಎಂಬ ಕಾರಣದಿಂದ ಸುಬಲ ಮೊದಲು ಒಪ್ಪಲಿಲ್ಲ.ನಂತರ ಕುರುವಂಶದ ಖ್ಯಾತಿ, ಪರಾಕ್ರಮ ನಡೆನುಡಿಗಳಿಂದ ಪ್ರಭಾವಿತನಾಗಿ ಸಮ್ಮತಿಸುತ್ತಾನೆ. ಇದನ್ನು ತಿಳಿದ ಗಾಂಧಾರಿಗೆ ಕೋಪ, ದುಃಖ ಮೊದಲಾದ ದುಷ್ಪರಿಣಾಮಗಳಾಗಲಿಲ್ಲ. ತಂದೆ ತನ್ನ ಹಿತ ಚಿಂತನೆಯಿಂದ ಈ ಸಂಬಂಧ ಒಪ್ಪಿದನೆಂದು ತಾನೂ ಸಂತೋಷದಿಂದ ಸಮ್ಮತಿಸುತ್ತಾಳೆ. ಧೃತರಾಷ್ಟ್ರ ಕುರುಡನೆಂದು ಅಸಹ್ಯ ಪಡಲಿಲ್ಲ. ಪತಿ ಗಿಲ್ಲದ ಜಗತ್ತಿನ ದರ್ಶನ ಭಾಗ್ಯ ತನಗೂ ಬೇಡ ಎಂದು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಳು. ಇದು ಅವಳ ತ್ಯಾಗದ ಪರಾಕಾಷ್ಠೆ ಯನ್ನು,ಪಾತಿವ್ರತ್ಯದ ಅಗಾಧತೆಯನ್ನು ತೋರಿಸುತ್ತದೆ. ವಿವಾಹದ ನಂತರ ಪತಿಯೇ ಪರದೈವ ಎಂದು ತಿಳಿದು ವಿನಯದಿಂದ, ಸೌಜನ್ಯದಿಂದ ನಡೆದುಕೊಂಡು ಇತರ ಸ್ತ್ರೀಯರಿಗೆ ಮಾದರಿಯಾಗುತ್ತಾಳೆ.



ಒಮ್ಮೆ ವ್ಯಾಸರು ಬಂದಾಗ ಅವರನ್ನು ಸತ್ಕರಿಸಿ, ಸೇವಿಸಿ ತನ್ನ ಪತಿಗೆ ಸಮಾನರಾದ ನೂರು ಮಕ್ಕಳು ಜನಿಸಲೆಂದು ಬೇಡುತ್ತಾಳೆ. ಆಕೆ ಮಹಾನ್ ಶಿವಭಕ್ತೆ, ಹಿಂದೆ ಶಿವನಿಂದ 100 ಮಕ್ಕಳ ವರ ಪಡೆದಾಕೆಯಾದ್ದರಿಂದ ವ್ಯಾಸರೂ ಆಶೀರ್ವದಿಸಿ ಅನುಗ್ರಹಿಸುತ್ತಾರೆ.

ಗಾಂಧಾರಿ ಎಂದಿಗೂ ಕುಂತಿಗೆ ಪಾಂಡವರಿಗೆ ಕೇಡು ಬಯಸಲಿಲ್ಲ. ಕುಂತಿ ಧರ್ಮಜನಿಗೆ ಜನ್ಮನೀಡಿದ ವಿಚಾರ ತಿಳಿದು ಪತಿವ್ರತೆಯೂ, ಪ್ರಾಜ್ಞೆಯೂ ಆಗಿದ್ದರೂ ಮಾತ್ಸರ್ಯವೆಂಬ ಶತೃವಿಗೆ ವಶಳಾಗುತ್ತಾಳೆ. ಗರ್ಭವನ್ನು ಘಾತಿಸಿ ಗರ್ಭಘಾತ ಮಾಡಿಕೊಳ್ಳುತ್ತಾಳೆ. ಅಲ್ಲಿಗೆ ಆ ಸಮಯಕ್ಕೆ ಬಂದ ವ್ಯಾಸರು ಗರ್ಭದಿಂದ ಹೊರ ಬಂದ ಪಿಂಡವನ್ನು 101 ಘೃತ ಭಾಂಡಗಳಲ್ಲಿ ಸಂರಕ್ಷಿಸಿ ನೂರು ಮಂದಿ ಕೌರವರು ಮತ್ತು ದುಶ್ಯಲೆ ಜನಿಸುತ್ತಾರೆ.

ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕುರುಡಾದರೂ ಮಗನ ಅವನ ಸಮೀಪವರ್ತಿಗಳ ದುಷ್ಟತೆ ಕಾಣದಿರಲಿಲ್ಲ. ಆಕೆ ಎಂದಿಗೂ ಮಗನನ್ನು ವಹಿಸಿಕೊಂಡು ಮಾತನಾಡಲಿಲ್ಲ. ಪುತ್ರ ವ್ಯಾಮೋಹಿ ಧೃತರಾಷ್ಟ್ರನನ್ನು ಖಂಡಿಸಿ ತಿದ್ದಲು ಪ್ರಯತ್ನಿಸುತ್ತಾಳೆ. ದುರ್ಯೋಧನ ಜನಿಸಿದಾಗ ಉಂಟಾದ ಉತ್ಪಾತಗಳನ್ನು ಕಂಡು ಮಹಾಮತಿ ವಿದುರ ಕುಲನಾಶಕನಾದ ಅವನನ್ನು ತ್ಯಜಿಸಬೇಕೆಂದಾಗ ಗಾಂಧಾರಿ ದೊರೆಗೆ ಬುದ್ಧಿ ಹೇಳುತ್ತಾಳೆ. ಕುಲಕ್ಕೆ ಮೃತ್ಯುವಾದ ಇವನನ್ನು ಕುಲದಿಂದ ಹೊರ ಹಾಕೋಣ ಎಂದು ದೃಢತೆಯಿಂದ ಹೇಳುತ್ತಾಳೆ. ಕೃಷ್ಣ ಸಂಧಾನ ಸಂದರ್ಭದಲ್ಲಿ ದುರ್ಯೋಧನಿಗೆ ಬುದ್ಧಿ ಹೇಳಲು ಗಾಂಧಾರಿಯನ್ನು ಸಭೆಗೆ ಕರೆಸಿದಾಗ ಅವಳು ಕುಲ ಸತ್ತರೆ ಸಾಯಲಿ ಮಗನನ್ನು ಬಿಡಲಾರೆ ಎಂದ ಧೃತರಾಷ್ಟ್ರನನ್ನು ಕುರಿತು,

ತ್ವಂ ಹ್ಯೇವಾತ್ರ ಭೃಶಂ ಗರ್ಹ್ಯೋ

ಎಂದು ಮೊದಲು ಧೃತರಾಷ್ಟ್ರನನ್ನೇ ನಿಂದಿಸಬೇಕು. ಅವನ ಕುರುಡು ಪುತ್ರ ವ್ಯಾಮೋಹ ಯುದ್ಧದ ಪರಿಸ್ಥಿತಿ ತಂದೊಡ್ಡಿ, ಇಡೀ ಕುಲವನ್ನು ನಾಶ ಮಾಡ ಹೊರಟಿದೆ ಎನ್ನುವ ಸ್ಪಷ್ಟಮಾತು, ದಿಟ್ಟತನ, ನೇರದೃಷ್ಟಿ ಅವಳದ್ದು,

ಯುದ್ಧಾನಂತರ ತನ್ನ ನೂರು ಮಂದಿ ಪುತ್ರರನ್ನು ಕಳೆದುಕೊಂಡ ಶೋಕ ಅವಳನ್ನು ಅಧೋಗತಿಗಿಳಿಸುತ್ತದೆ. ಧಾರ್ಮಿಕ ಪ್ರಜ್ಞೆಯುಳ್ಳ ಆಕೆ ಮಂದ ಪ್ರಜ್ಞೆಯಂತೆ ವರ್ತಿಸುತ್ತಾಳೆ. ಶೋಕ ಅವಳಲ್ಲಿನ ಧರ್ಮವನ್ನು ನಾಶಮಾಡುತ್ತದೆ. ಕುಲೀನ ಸ್ತ್ರೀ ಮತಿಹೀನಳಾಗಿ ಪಾಂಡವರಿಗೆ ಶಾಪ ನೀಡಲು ಹೋಗಿ ಕೊನೆಗೆ ಕೃಷ್ಣನಿಗೆ ಶಪಿಸುತ್ತಾಳೆ. ಸೊಸೆಯರ, ಮಗಳ ವೈಧವ್ಯ ಕಂಡು ಮರುಗುತ್ತಾಳೆ. ಪ್ರಜ್ಞಾವಂತಳಾದ ಸ್ತ್ರೀಯೊಬ್ಬಳು ಅವಿವೇಕಿಯಾಗುತ್ತಾಳೆ.

ಮನುಷ್ಯ ಎಂತಹ ಸನ್ನಿವೇಶದಲ್ಲೂ ಧರ್ಮ ಬಿಡಬಾರದೆಂದು ಗಾಂಧಾರಿ ತಿಳಿಸುವ ಪಾಠ. ಅವಳ ಬಾಹ್ಯ ಕಣ್ಣಿನ ಕತ್ತಲೆ ಆಂತರಿಕ ಕತ್ತಲೆಗೂ ಕಾರಣವಾಯಿತು. ಕುಂತಿ ಧೃತರಾಷ್ಟ್ರ ಮೊದಲಾದವರೊಡನೆ ಗಾಂಧಾರಿಯು ವಾನಪ್ರಸ್ಥಕ್ಕೆ ಹೋಗಿ ಅಲ್ಲಿ ಕಾಳ್ಗಿಚ್ಚಿನಲ್ಲಿ ದೇಹತ್ಯಾಗ ಮಾಡುತ್ತಾಳೆ. ಐಶ್ವರ್ಯ - ಪದವಿ ಬರಲಿ ಬಾರದಿರಲಿ, ಬಂಧು-ಬಾಂಧವರ ವಿಯೋಗವಾಗಲಿ, ಸಿರಿತನವಿರಲಿ, ಬಡತನವಿರಲಿ ಎಂತಹ ಪರಿಸ್ಥಿತಿಯಲ್ಲೂ ಮಾನವ ಬುದ್ಧಿಹೀನನಾಗಿ ಮೌಲ್ಯಗೆಟ್ಟು ಕುರುಡನಾಗಬಾರದು. ಇದು ಅವಳ ಜೀವನದ ನೀತಿ ಪಾಠವಾಗಿದೆ.

(ಇದು ಛಾಂದ್ಯೋಗ್ಯೋಪನಿಷತ್ತಿನ ಕಥೆ)

# ಉಷಸ್ತಿಯ ಕಥೆ

ಪ್ರೊ : ಪದ್ಮನಾಭರಾವ್
9916173302



ಒಮ್ಮೆ ಕುರು ಪ್ರಾಂತದಲ್ಲಿ ತೀವ್ರ ಬರಗಾಲ ಒದಗಿತು. ಮಳೆ ಬರುವ ಯಾವ ಸೂಚನೆಯೂ ಇರಲಿಲ್ಲ. ದಿನಕಳೆದಂತೆ. ನೆಲ ಬಿರುಕು ಬಿಟ್ಟಿತು. ಜನರ ನೀರಿನ ಪರದಾಟ ಹೆಚ್ಚಾಯಿತು. ಈ ಬರಗಾಲಕ್ಕೆ ಕಾರಣ ಬೆಳೆಗಳು ನಾಶವಾದದ್ದು, ಸಿಡಿಲು, ಬಿರುಗಾಳಿಯಿಂದ ಪೈರು ಮೊಳೆಯ ಲಿಲ್ಲ. ಅಲಿಕಲ್ಲು ಬಿದ್ದ ಪರಿಣಾಮವಾಗಿ ಮೊಳೆತ ಬೆಳೆಯೂ ನಾಶವಾಗಿ ಹೋಯಿತು. ಆ ದೇಶದಲ್ಲಿ ಪ್ರದ್ರಾವಣಕ ಎನ್ನುವ ಹಳ್ಳಿ. ಅಲ್ಲಿ ಒಬ್ಬ ಉಷಸ್ತಿ ಎಂಬ ವಿದ್ವಾಂಸ ಮತ್ತು ಜ್ಞಾನಿಯಿದ್ದ. ಅವನಿಗೆ ಮದುವೆಯಾಗಿತ್ತು. ಚಿಕ್ಕ ವಯಸ್ಸಿನ ಪತ್ನಿಯಿದ್ದಳು. ಆಕೆಯ ಪ್ರಾರ್ಥನೆಯಂತೆ ಉಷಸ್ತಿ ಆಹಾರ ಧಾನ್ಯ ಏನಾದರೂ ಸಿಗುವುದೋ ಎಂದು ಹುಡುಕುತ್ತಾ ಹೊರಟ.

ಅವನ ದಾರಿಯಲ್ಲಿ ಒಂದು ಗ್ರಾಮವಿತ್ತು . ಅಲ್ಲಿನ ಗ್ರಾಮಾಧಿ ಪತಿಯು ಪಾತ್ರೆಯೊಂದರಲ್ಲಿ ಏನನ್ನೋ ತಿನ್ನುತ್ತಿದ್ದ. ಅದರಲ್ಲಿ ಇದ್ದುದು ಕೆಟ್ಟು ಹೋದ ಉದ್ದಿನ ಕಾಳು ಮಾತ್ರ, ಉಷಸ್ತಿಯು ಆತನ ಬಳಿ ಹೋಗಿ ನನಗೆ ನೀವು ತಿನ್ನುತ್ತಿರುವ ಕಾಳನ್ನಾದರೂ ನೀಡಿ ಎಂದು ಕೇಳಿದಾಗ ಆತ ನುಡಿದ ಸ್ವಾಮೀ ತಾವು ವಿದ್ಯಾವಂತರೂ , ಸುಸಂಸ್ಕೃತರಂತೆ ಕಾಣುತ್ತೀರಿ. ಇದು ಎಂಜಲಾದ ಕಾಳುಗಳೂ, ಇದನ್ನು ನನ್ನ ಗ್ರಾಮದ ಅತಿಥಿಯಾಗಿರುವ ಹಸಿದ ತಮಗೆ ಹೇಗೆ ನೀಡಲಿ? ಎಂದು ತನ್ನ ಅಸಹಾಯಕತೆಯನ್ನು ತಿಳಿಸಿದ.

ಉಷಸ್ತಿಯು ಅಯ್ಯಾ ! ಹಸಿದವನಿಗೆ ಯಾವ ನಿಯಮವೂ ಇಲ್ಲ ವಷ್ಟೆ, ಅದನ್ನೇ ಸ್ವಲ್ಪ ಕೊಡು ಎಂದು ಕೇಳಿದನು. ಆಗ ಅವನು ಕೊಟ್ಟ ಸ್ವಲ್ಪ ಉದ್ದಿನ ಕಾಳನ್ನು ತಿಂದು, ನೀರು ಕುಡಿಯಲು ಬಯಸಿದ ಗ್ರಾಮಾ ಧಿಪತಿ ಇದು ನಾನು ಕುಡಿದ ನೀರು, ಹೇಗೆ ಕೊಡಲಿ? ಎಂದಾಗ ಕಾಳನ್ನು ಹಸಿದಾಗ ತಿಂದೆ ನೀರು ಇಲ್ಲಿಯೆ ಸಿಕ್ಕೀತು ಎಂದು ಆ ನೀರನ್ನು ಕುಡಿಯದೆ ಹೊರಟ. ಆಪತ್ತಿನ ಸಮಯದಲ್ಲಿ ಏನಾದರೂ ತಿಂದು ಹಸಿವು ನೀಗಿಸಿ ಕೊಳ್ಳಬಹುದು. ಆದರೆ ನೀರನ್ನು ಇಲ್ಲಿ ಹುಡುಕಿದರಾಯಿತು ಎನ್ನುತ್ತಾ ಸ್ವಲ್ಪ ಕಾಳನ್ನು ತನ್ನ ಹೆಂಡತಿಗಾಗಿ ಮನೆಗೆ ಒಯ್ದನು.

ಆಗ ಉಷಸ್ತಿಗೆ ಪಕ್ಕದ ಪ್ರಾಂತದ ಒಬ್ಬ ರಾಜನು ಮಳೆ ಬರಲೆಂದು ಯಜ್ಞವನ್ನು ನಡೆಸಲಿದ್ದಾನೆ ಎಂದು ತಿಳಿದು, ಅಲ್ಲಿ ತನಗೆ ಏನಾದರೂ ದಾನ, ದಕ್ಷಿಣೆ ದೊರೆತೀತು ಎಂದು ಪಕ್ಕದ ಪ್ರಾಂತವನ್ನು ತಲುಪಿದನು. ಅಲ್ಲಿಗೆ ಹೊರಡುವ ಮುಂಚೆ ತನ್ನ ಪತ್ನಿಗೆ,ತಿನ್ನಲು ಏನಾದರೂ ಇದೆಯೇ? ಎಂದು ಕೇಳಿದಾಗ, ಉಳಿದ ಕಾಳುಗಳನ್ನು ಆತನಿಗೆ ನೀಡಿದಳು. ಆ ಕಾಳನ್ನು ತಿಂದು ರಾಜನ ಯಾಗಶಾಲೆಗೆ ಉಷಸ್ತಿಯು ಹೊರಟನು ಕರೆಯದೆ ಇದ್ದರೂ ಯಜ್ಞಕ್ಕೆ ಹೋದರೆ ತಪ್ಪಿಲ್ಲ ಎನ್ನುವಂತೆ ಅವನು ಯಾಗ ಶಾಲೆಯನ್ನು ತಲಪಿ ಅಲ್ಲಿನ ಯಾಜ್ಞಕರ ಜೊತೆಯಲ್ಲಿ ಕುಳಿತ. ಆ ಯಾಗ ಶಾಲೆಯಲ್ಲಿನ ವಿದ್ವಾಂಸರಿಗೆ ಯಾವ ದೇವತೆಯನ್ನು ಯಾವ ರೀತಿ ಆಹ್ವಾನಿ ಸಬೇಕು ಎಂದು ತಿಳಿದಿರಲಿಲ್ಲ. ಆ ಪ್ರಾಂತದ ದೊರೆ, ಸ್ವಾಮಿ ! ತಮಗೆ ಈ ಯಜ್ಞದ ವಿಧಿತಿಳಿದಿದೆ ಎನಿಸುತ್ತಿದೆ, ದಯವಿಟ್ಟು ಅನುಗ್ರಹಿಸಿರಿ ಎಂದು ಪ್ರಾರ್ಥನೆ ಮಾಡಿದನು.

ಆ ದೊರೆಯು ಸ್ವಾಮಿ ! ನಿಮ್ಮ ಬಗ್ಗೆ ಕೇಳಿ ತಿಳಿದಿದ್ದೇನೆ, ನೀವು ಊರಿನಲ್ಲಿ ಇಲ್ಲದ ಕಾರಣ ಇವ ರನ್ನು ಆಹ್ವಾನಿಸಿದೆ ಎಂದು ತಿಳಿಸಿದಾಗ ಉಷಸ್ತಿಯು ಇರಲಿ,ನಾನು ಅವರಿಗೆ ಯಜ್ಞ ಮುಂದುವರೆಸಲು ಅನುಮತಿ ನೀಡುತ್ತಿದ್ದೇನೆ. ಕಾರ್ಯ ನಿಲ್ಲದೆ ಸಾಗಲಿ ಎಂದನು. ಆದರೆ ಅವರಿಗೆ ಎಷ್ಟು ಸಂಭಾವನೆ, ದಾನ ಕೊಡುತ್ತೀಯೋ ಅಷ್ಟೆ ನನಗೂ ಕೊಡಬೇಕಾಗುತ್ತದೆ, ಎಂದು ತಮ್ಮ ಬೇಡಿಕೆಯನ್ನು ತಿಳಿಸುತ್ತಾರೆ ರಾಜನು ಒಪ್ಪುತ್ತಾನೆ, ಆಗ ಉಷಸ್ತಿಯು ಈ ಯಾಗದ ಪ್ರಧಾನ ದೇವತೆ ಪ್ರಾಣನೆಂದೂ ಆತನನ್ನು ಪ್ರಾರ್ಥಿಸಿ ಮುಂದುವರೆಸಬೇಕೆಂದು ಸೂಚಿಸುತ್ತಾನೆ. ಯಜ್ಞವು ಸಾಂಗವಾಗಿ ಸಾಗುತ್ತದೆ. ಯಾರು ವೇದಭಾಗವನ್ನು ಅರ್ಥ ತಿಳಿಯದೆ ಪಠಿಸುತ್ತಾನೋ ಅದು ವ್ಯರ್ಥ ವಾಗುವುದು. ಅವನು ಭಾರ ಹೊತ್ತು ಕಂಬದ ಹಾಗೆ ಜಡ ವಸ್ತುವಿನಂತೆ ಅರ್ಥವನ್ನು ತಿಳಿದು ಪಠಿಸಬೇಕು ಎಂದು ಉಷಸ್ತಿಯು ವಿವರಿಸಿ ಆ ವೈದಿಕ ಮಂತ್ರಗಳ ಅರ್ಥವನ್ನು ವಿವರಿಸಿ, ಆ ಯಾಗವನ್ನು ಮುಂದು ವರೆಸಿದನು.

ಈ ಯಜ್ಞದ ಫಲವಾಗಿ ನಿಯ ಮಿತವಾಗಿ ಮಳೆ ಬಂದು ಕೆರೆ, ಕೊಳ, ಬಾವಿ, ನದಿಗಳು ತುಂಬಿದವು. ಜನರ ನೀರಿನ ಹಾಹಾ ಕಾರ ತಪ್ಪಿ ಬರಗಾಲ ಮುಗಿದು ಸುಭಿಕ್ಷೆ ಯಾಯಿತು. ಈ ಕಾರಣ ಮಂತ್ರಗಳ ಪಠಣವನ್ನು ಅರ್ಥ ತಿಳಿದು ಭಕ್ತಿ - ವಿಶ್ವಾಸ ದಿಂದ ಪಠಿಸಬೇಕೆ ಹೊರತು ಸುಮ್ಮನೆ ಹಾಡ ಬಾರದು ಎಂದು ಉಷಸ್ತಿಯು ಅವರಿಗೆ ತಿಳಿಸಿ ಅಲ್ಲಿಂದ ಹೊರಟನು, ಮತ್ತೆ ಆ ರಾಜ್ಯದಲ್ಲಿ ಬರಗಾಲದ ಪೀಡೆ ತಪ್ಪಿತ್ತು. ಇಲ್ಲಿನ ಸಂದೇಶ ವೈದಿಕ ಮಂತ್ರಗಳ ಅರ್ಥವನ್ನು ಬಲ್ಲವರಿಂದ ತಿಳಿದು ಪಠಿಸಬೇಕು.



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಸಾಳುವರ ಕಾಲದ ತಿರುಮಲೆ

ಎರಡನೇ ದೇವರಾಯನ ಕಾಲದಲ್ಲಿಯೇ ಸಾಳುವರು ಪ್ರಭಾವಶಾಲಿಗಳಾಗಿ ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಶಕ ವರ್ಷ 1368 ರ ಕ್ಷಯನಾಮಸಂವತ್ಸರದಲ್ಲಿ (10-10-1446) ಎರ್ರ ಕಂಪಯರಾಯನ ಮಗ ಸಾಳುವ ಪೆರಿಮಲ್ಲಯದೇವ ಮಹಾರಾಜನು (ತಿ.ತಿ.13) ಶಾಸನದಲ್ಲಿ ಕಂಡು ಬರುತ್ತಾನೆ.

ಶಕವರ್ಷ 1364 ರ ದುಂದುಭಿ ಸಂವತ್ಸರದಲ್ಲಿ ಮುದ್ದಿಯ ನಾಯಕನ ಮಗ ತೆಪ್ಪದನಾಗಯ್ಯ ನಾಯಕರು ದೇವರಿಗೆ 3000 ಹೊನ್ನಿನ ಕಾಣಿಕೆ ನೀಡಿದನೆಂದು ತಿಳಿದು ಬರುತ್ತದೆ.(ತಿ.ತಿ.100)ಈತ ಪ್ರಾಯಶಃ ಚಂದ್ರಗಿರಿಯಲ್ಲಿ ನೆಲೆಯಾದ ಎರಡನೇ ದೇವರಾಯನ ಸೇನಾಪತಿಗಳಲ್ಲಿ ಒಬ್ಬ ನಾಗಿದ್ದಿರಬೇಕು.

ಶಕವರ್ಷ 1352ರ ಸಾಧಾರಣ ಸಂವತ್ಸರದಲ್ಲಿ (1-7-1430) ಒಂದು ಚಿನ್ನದ ಪಟ್ಟವನ್ನು ಶ್ರೀಗಿರಿಯ ದೇವರಿಗೆ ನೀಡಿದ- ಎಂಬ ಸಂಗತಿಯು ನಯನಗಳು-(2)ಬಾಣಗಳು (5) ರಾಮ-(3)ಚಂದ್ರ-(1)ವರ್ಷದಲ್ಲಿ ಎಂದರೆ -2531 (ಶಕ 1352)ರಲ್ಲಿ ಹೇಳಲಾಗಿದೆ. ಈತ ಎರಡನೇ ದೇವರಾಯನ (ಗಜವೇಂಟೆಗಾರ) ತಮ್ಮನಾದ ಪ್ರತಾಪ ದೇವರಾಯ-ಶ್ರೀಗಿರಿ ಭೂಪಾಲನೇ ಆಗಿದ್ದು ಈತ ಶಕವರ್ಷ 1346 ರಲ್ಲಿ ಆರ್ಕಾಟು ಜಿಲ್ಲೆಯ ಮರಕತ ನಗರ ಪ್ರಾಂತದ ಆಡಳಿತಗಾರನಾಗಿರಬೇಕು. (ಆ.ಸ.ವರದಿ - 1907-8 ಪುಟ-248)

ಮಲ್ಲಿಕಾರ್ಜುನನ ಬಗ್ಗೆ ಒಂದೇ ಒಂದು ದಿನಾಂಕ ದೊರೆಯುತ್ತದೆ. ಅದು ಶಕ ವರ್ಷ 1371ರ ಶುಕ್ಲ ವರ್ಷದ್ದಾಗಿ (4-3-1450) ಇದು ಅವನ ಆಳ್ವಿಕೆಯ ಎರಡನೇ ವರ್ಷದ್ದು. ಚಂದ್ರಗಿರಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ನಿಯೋಗಿ ರಾಜಮಾಲಿಕ್ಕಂ ಚೆನ್ನಪ್ಪ ಒಡೆಯರ್‌ಗೆ ತಿರುಪತಿಯ ಶ್ರೀವೈಷ್ಣವರಿಬ್ಬರು ಮನೆ ಹಾಗೂ ಮನೆಯ ಮುಂದಿನ ಸ್ಥಳವನ್ನು ಮಾರಿದ ವಿವರವನ್ನು ನೀಡುತ್ತದೆ. ಬಹುಶಃ ಈ ಚಿನ್ನಪ್ಪ ಒಡೆಯರು ವಿಶೇಷ ದಿನಗಳಲ್ಲಿ ರಾಜನಿಗೆ ಹಾಗೂ ಮನ್ನೆಯರಿಗೆ ಹೂವನ್ನು ನೀಡುವ ಹೂವಾಡಿಗನಾಗಿರಬೇಕು.

ತಿರುಪತಿ ಚಂದ್ರಗಿರಿಗಳು ಹತ್ತು ಮೈಲಿ ಮಾತ್ರವೇ ದೂರವಿದ್ದು,ಈ ಶಾಸನದಲ್ಲಿರುವಂತೆ ತಿರುವೆಂಕಟ ಕೋಟೆಯಲ್ಲಿ, ತಿರುಪತಿ-ತಿರುಕ್ಕುಡವೂರು ಎಂತಲೂ,ಚಂದ್ರಗಿರಿ-ವೈಕುಂಠವಲನಾಡು ಎಂತಲೂ ಎರಡು ಉಪ ವಿಭಾಗಗಳಾಗಿದ್ದವು.

ಸಾಳುವ ವಂಶದವರಿಂದಾದ ಶಾಸನಗಳಿಂದ ಆಲಯದ ಬಗ್ಗೆ ಕೆಳಗಿನಂತೆ ವಿವರಗಳು ತಿಳಿದುಬರುತ್ತವೆ-(ಮೊದಲು ಬರುವುದು ಶಾಸನ ಸಂಖ್ಯೆ)

ತಿ.ತಿ.3- ಒಂದು ಗ್ರಾಮದ ಸ್ವರ್ಣದಾಯ ತೆರಿಗೆಯ ದೇಣಿಗೆಯಿಂದ ಸಾಳುವ ನರಸಿಂಹನ ಹೆಸರಿನಲ್ಲಿ ಒಂದು ಸಂಧಿಯನ್ನುಂಟು ಮಾಡಲಾಯಿತು.(ನೈವೇದ್ಯದ ಏರ್ಪಾಡು)

ತಿ.ತಿ.361- ಪ್ರತಿ ಶನಿವಾರವೂ ಒಂದು ದೀಪವನ್ನು ಹಚ್ಚಲು ಕ್ರಿ.ಶ.1461 ರಲ್ಲಿ ದಾನಿಗಳೊಬ್ಬರು ಏರ್ಪಾಡು ಮಾಡಿದರು.

ತಿ.ತಿ.157- ಕ್ರಿ.ಶ.1464 ರ ಒಂದು ಶಾಸನದಲ್ಲಿ ತಿರುಪವಿತ್ರ ತಿರುನಾಳ್ ಅಥವಾ ಪವಿತ್ರೋತ್ಸವ ಹೆಸರಿಸಲ್ಪಟ್ಟಿದೆ.

ತಿ.ತಿ.66- ಕ್ರಿ.ಶ.1468ರ ಶಾಸನದಲ್ಲಿ ಸಾಳುವ ನರಸಿಂಹನು ತಿರುಮಲೆಯಲ್ಲಿ ಒಂದು ಗೋಪುರವನ್ನು ಕಟ್ಟಿಸಿದನೆಂದೂ,ಅದರ ಬಳಿಯ ಸತ್ರದಲ್ಲಿ ಯಾತ್ರಿಕರಿಗೆ ಅನ್ನದಾನದ ವ್ಯವಸ್ಥೆಯನ್ನುಂಟು ಮಾಡಿದನೆಂದೂ ಹೇಳಲಾಗಿದೆ.

ತಿ.ತಿ.70- ಅದರ ನಂತರದ ವರ್ಷದ ಈ ಶಾಸನದಲ್ಲಿ ದಿನವೂ ತೋಮಾಲಸೇವೆಯ ಆರಂಭದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ನಿವೇದನೆಗೆಂದು ದಧ್ಯೋದನ ಸಂಧಿಯನ್ನು ಏರ್ಪಡಿಸಿದ್ದಾಗಿಯೂ,ಪಂಗುಣಿ ಅಮಾವಾಸ್ಯೆ ಹಾಗೂ ವಸಂತ ಪೂರ್ಣಿಮೆಗಳಲ್ಲಿ ನೃಸಿಂಹದೇವರಿಗೆ ತಿರುಮಂಜನ ಮಾಡುವ ಪದ್ಧತಿಯನ್ನು ಆರಂಭಿಸಲಾಯಿತು ಎಂದಿದೆ.

ತಿ.ತಿ.197. ಈ ಶಾಸನದಂತೆ ಪುರಟ್ಟಾಶಿ ತಿರುನಾಳಿನ ಉತ್ಸವದ ಹತ್ತು ದಿನಗಳಲ್ಲಿಯೂ ನರಸಿಂಗರಾಯ ಕೋನೇರಿಯ ದಡದಲ್ಲಿ ಸತ್ರವನ್ನು ನಡೆಸುತ್ತಿದ್ದರೆಂದು ತಿಳಿದುಬರುತ್ತದೆ.

ತಿ.ತಿ.197. ಈ ಶಾಸನವು ಸಾಳುವ ನರಸಿಂಹನಿಂದ ಏರ್ಪಾಡಾದ ಡೋಲೋತ್ಸವ ಅಥವಾ ಅನ್ನಾ ಊಂಜಲ್ ತಿರುನಾಳ್ ಬಗ್ಗೆ ಹೇಳುತ್ತದೆ. ಇದರ ಕಾಲ ಕ್ರಿ.ಶ.1473.

ತಿ.ತಿ.200 ಕ್ರಿ.ಶ.1476 ರ ದಾಖಲೆಯಿದು. ಮಲೈಕುನಿಯ ನಿನ್ರ ಪೆರಿಮಾಳರು ಪಂಗುಣಿ ಹಾಗೂ ಪುರಟ್ಟಾಶಿ ಉತ್ಸವಗಳಲ್ಲಿ ರಥವನ್ನೇರಲು ವರಾಹಸ್ವಾಮಿ ಆಲಯದ ಮಂಟಪಕ್ಕೆ ಬರುತ್ತಿದರೆಂದೂ,ಕನುಪ್ಪಡಿಯ ವೇಳೆಗೆ ಅರಿಶಿನದಿಂದ ಲೇಪಿತಳಾದ ತಾಯಾರಿಗೆ ತಿರುಮಂಜನ ನಡೆಯುತ್ತಿದ್ದಿತೆಂದೂ ತಿಳಿಸುತ್ತದೆ.

ತಿ.ತಿ.50. ಕ್ರಿ.ಶ.1477 ರ ಈ ದಾಖಲೆಯಿಂದ ಅಲಮೇಲುಮಂಗೈ ಸಂಧಿ ಎಂಬ ಹೊಸ ನೈವೇದ್ಯ ಸಂಧಿ ಏರ್ಪಟ್ಟಿತೆಂದು ತಿಳಿದುಬರುತ್ತದೆ.

ತಿ.ತಿ.522.ಈ ಜೀರ್ಣಶೀರ್ಣವಾದ ದಾಖಲೆ ಪಾಪನಾಶನಂ ಉತ್ಸವದ ಬಗ್ಗೆ ಹೇಳುತ್ತದೆ.

ತಿ.ತಿ.248. ಕ್ರಿ.ಶ.1482 ರಲ್ಲಿ ನರಸಿಂಹರಾಯನು ಉತ್ಥಾನದ್ವಾದಶಿಯಂದು ಒಂದು ಗ್ರಾಮವನ್ನು ದೇಣಿಗೆ ನೀಡಿದನೆಂದು ದಾಖಲಿಸುತ್ತದೆ. ಇದರ ಆದಾಯವನ್ನು ತಿರುಮಲೆ ತಿರುಪತಿಗಳಲ್ಲೂ ತಿರುಮಲೆಯ ನರಸಿಂಹರಾಯ ಮಂಟಪದಲ್ಲಿಯೂ ಗೋಪುರಗಳನ್ನು ನಿರ್ಮಿಸಲು ಬಳಸಬೇಕೆಂದು ಕಟ್ಟಳೆ ಮಾಡಿದ.

ತಿ.ತಿ.193. ಮಾರ್ಗಳಿ ತಿಂಗಳ ಧನುರ್ಮಾಸ ಉತ್ಸವದ ತಿರುಪ್ಪಳ್ಳಿಯೆಳುಚ್ಚಿಯನ್ನು ಕ್ರಿ.ಶ.1486 ರ ಈ ಶಾಸನ ವಿವರಿಸುತ್ತದೆ.

ತಿ.ತಿ. 564. ಈ ಶಾಸನವು ಉತ್ಥಾನದ್ವಾದಶಿಯಂದು ಹಾಗೂ ಶ್ರೀಜಯಂತಿಯಂದು ಪುರವೀಧಿಗಳಲ್ಲಿ ಮೆರವಣಿಗೆ ಹೊರಟದ್ದನ್ನು ಹೇಳುತ್ತದೆ.

ತಿ.ತಿ.250. ಕ್ರಿ.ಶ.1491 ರ ಈ ಶಾಸನವು ಯುಗಾದಿ, ದೀಪಾವಳಿಗಳಂದು ಶ್ರೀವೆಂಕಟೇಶ್ವರಸ್ವಾಮಿಯನ್ನು ಸೂರ್ಯ, ಚಂದ್ರರಂತೆ ಕಂಡು ಬರುವ ಹಾರಗಳಿಂದ ಅಲಂಕರಿಸುತ್ತಿದ್ದುದನ್ನು ತಿಳಿಸುತ್ತದೆ.

ತಿ.ತಿ.253 ಕ್ರಿ.ಶ.1491ರಲ್ಲಿನ ಈ ಶಾಸನವು ಮಾರ್ಗಳಿ ಮಾಸದಲ್ಲಿ ನಡೆಯುತ್ತಿದ್ದ ತಿರುವಧ್ಯಯನದ ಹಿಂದಿನ ದಿನ ಆಕಾಶಗಂಗೆಗೆ ಹೋಗುವ ದಾರಿಯನ್ನು ದುರಸ್ತಿ ಮಾಡುತ್ತಿದ್ದ ಅಂಶವನ್ನು ತಿಳಿಸುತ್ತದೆ.

ತಿ.ತಿ.283. ಇದೇ ವರ್ಷದ ಈ ದಾಖಲೆ ಮಲೈಕುನಿಯ ನಿನ್ರ ಪೆರುಮಾಳರು ತಾಯಾರರೊಡನೆ ಎಂಟನೆಯ ಉತ್ಸವ ದಿನಗಳಲ್ಲಿ ಕುದುರೆಯ ಮೇಲೆ ಮೆರವಣಿಗೆ ಹೊರಡುವರೆಂದು ತಿಳಿಸುತ್ತದೆ.

ತಿ.ತಿ.280. ಎರಡು ವರ್ಷಗಳ ನಂತರದ ಈ ಶಾಸನವು ಶ್ರೀ ಜಯಂತಿ, ಶ್ರೀರಾಮನವಮಿ, ವಸಂತ ಪಂಚಮಿ ಹಬ್ಬಗಳನ್ನು ವಿವರಿಸುತ್ತದೆ.

ತಿ.ತಿ.615.ಅದೇ ವರ್ಷದಲ್ಲಿ ಆನಂದಾಂಪಿಳ್ಳೈ ಮಂಟಪವನ್ನು ಕೊಮ್ಮರಾಜ ಪೆರಿಯ ತಿಮ್ಮರಾಜನ ಪತ್ನಿ ನರಸಮ್ಮನು ಪುನರ್ನಿರ್ಮಾಣಗೊಳಿಸಿದ ದಾಖಲೆಯಿದು.

ತಿ.ತಿ.337. ಕ್ರಿ.ಶ.1493 ರ ದಾಖಲೆ. ಇಲ್ಲಿ ಮಾರ್ಗಳಿ ತಿಂಗಳಿನಲ್ಲಿ ನಡೆಯುತ್ತಿದ್ದ ತಿರುವಧ್ಯಯನ ಉತ್ಸವ ವಿವರಿತ.

ತಿ.ತಿ.307. ಇದೇ ವರ್ಷದ ಈ ದಾಖಲೆಯಲ್ಲಿ ತಿರುಕ್ಕೊಡಿ ತಿರುನಾಳ್‌ನಲ್ಲಿ ರಥೋತ್ಸವ ನಡೆಯುತ್ತಿದ್ದಿತೆಂದು ತಿಳಿಸಲಾಗಿದೆ.

ತಿ.ತಿ.313. ಕ್ರಿ.ಶ.1494 ರ ದಾಖಲೆ. ಇಲ್ಲಿ ಅಲ್ಪಸಿ ತಿರುನಾಳ್ ಉತ್ಸವ ನಡೆಯುತ್ತಿದ್ದ ಪದ್ಧತಿಯಿದ್ದಿತೆಂದು ವಿವರಣೆಯಿದೆ.

ತಿ.ತಿ.617. ಆಡಿ ಆಯನಂ ಉತ್ಸವವನ್ನು ಹೆಸರಿಸುವ ಈ ದಾಖಲೆಯು ಚಾತುರ್ಮಾಸದಲ್ಲಿನ ಉತ್ಥಾನ ಏಕಾದಶೀ ದಿನದಂದು ಸ್ವಾಮಿಯು ಕೈಶಿಕ ಪುರಾಣವನ್ನು ಕೇಳುತ್ತಿದ್ದರೆಂದು ವಿವರಿಸುವುದು.

ತಿ.ತಿ.628. ಕ್ರಿ.ಶ. 1495 ರ ಈ ಶಾಸನವು ಆಲಯದ ಆಭರಣಕೋಶದಲ್ಲಿನ ಆಭರಣಗಳನ್ನು ವಂಶಪಾರಂಪರ್ಯವಾದ ಹೊಣೆಯಲ್ಲಿಡಬೇಕೆಂದೂ, ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಆಭರಣಗಳಿಗೆ ಆಗ ಬೇಕಿದ್ದ ಅಗತ್ಯವಾದ ರಿಪೇರಿ ಕೆಲಸಗಳನ್ನೂ ಮಾಡಿಸಬೇಕೆಂದು ನರಸಿಂಹರಾಯನು ಆಜ್ಞೆ ನೀಡಿದ್ದನ್ನು ವಿವರಿಸುತ್ತದೆ.

ತಿ.ತಿ.626.ಮಾರನೇ ವರ್ಷದ ಈ ದಾಖಲೆಯು ನವಲೂಟು ಮಂಟಪಕ್ಕೆ ಮೆರವಣಿಗೆ ಹೊರಟದ್ದನ್ನು ವಿವರಿಸಿ, ಆಲಯ ಸೇವಾಕರ್ತರಾದ ತಿರುಪ್ಪಣಿ ಪಿಳ್ಳೈ, ಲಚ್ಚಿನಾಯಕರು, ಪ್ರಬಂಧ ವಾಚಕರು, ಕಂಗಾಣಿಪ್ಪಾನ್ ವಾಹನ ಹೊರುವವರು, ಅಧಿಕಾರಿ, ಪಚ್ಚಡಿಕಾರಿ, ದೀಪ ಹಿಡಿಯುವವರು, ಬಿನ್ನಹಗಾರರು, ಕಟ್ಟಿಗೆ ತರುವವರು, ಪರಾಕುಭಟರು, ನಾಟ್ಯಾಚಾರ್ಯ, ಕಾಲಕರ್ತ, ನರ್ತಕರು, ವಾದ್ಯಗಾರರು, ಮೇಳಗಾರರು, ಕುಂಬಾರರು, ಗಾಯಕರು, ಶಿಲ್ಪಿಗಳು, ಸಂರಕ್ಷಕರುಗಳನ್ನು ಹೆಸರಿಸುತ್ತದೆ.

ತಿ.ತಿ.336. ಇದು 1496 ರ ದಾಖಲೆಯಾಗಿದ್ದು ಶ್ರೀ ವೆಂಕಟೇಶ್ವರಸ್ವಾಮಿಗೆ ಹಾಗೂ ಅಲಮೇಲುಮಂಗೈ ತಾಯಾರಿಗೆ ಪುನುಗುಕಾಪ್ಪುವನ್ನು ಒಂದು ಬಿಟ್ಟೊಂದು ಶುಕ್ರವಾರ (ಹದಿನೈದು ದಿನಕ್ಕೆ ಒಮ್ಮೆ) ಹಚ್ಚುವ ಪುನಗು ಕಾಪ್ಪು ಮುರ್ರೆಯನ್ನು ವಿವರಿಸುತ್ತದೆ.

ತಿ.ತಿ.271. ಕ್ರಿ.ಶ.1504ರ ಈ ಶಾಸನವು ಚಂಪಕ ಚುರ್ರುವಿನಲ್ಲಿನ ರಾಯರ್ ಮಂಟಪವನ್ನು ಕುರಿತು ಹೇಳುತ್ತದೆ. (ಸಂಪಂಗಿ ಪ್ರದಕ್ಷಿಣೆಯ ಸಾಳುವ ನರಸಿಂಹ ಮಂಟಪ)

### ತುಳುವ ದೊರೆಗಳ ಕಾಲದಲ್ಲಿ ತಿರುಮಲೆ

ತುಳುವ ದೊರೆಗಳ ಆಳ್ವಿಕೆಯ ಕಾಲದಲ್ಲಿ ತಿರುಮಲೆಯ ಆಲಯ ರಾಜಮಾನ್ಯತೆಯನ್ನು ಪಡೆಯಿತು. ಈ ವಂಶದ ಅತಿ ಪ್ರಸಿದ್ಧ ರಾಜರು-ಶ್ರೀಕೃಷ್ಣದೇವರಾಯ ಹಾಗೂ ಅಚ್ಯುತ ರಾಯರು ತಿರುಮಲೆಯ ದೇವರ ವಿನಮ್ರ ಭಕ್ತರಾಗಿ ಹಲವು ಹನ್ನೊಂದು ಕಾಣಿಕೆ, ದೇಣಿಗೆಗಳನ್ನು ನೀಡಿದ್ದಾರೆ.

(- ಮುಂದುವರೆಯುತ್ತದೆ)



## ರಸಪ್ರಶ್ನೆಗಳು

**ಸಪ್ತಗಿರಿ ಕ್ವಿಜ್ ಮಾರ್ಚ್ 2023**

**8 ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಚೈತ್ರ
2. ಬುದ್ಧಿ
3. ಬೇವು ಬೆಲ್ಲ
4. 80
5. ಗಿಣ್ಣು
6. ಶ್ರೀಮಹಾವಿಷ್ಣು
7. ಹಿರಣ್ಯಕಶ್ಯಪು
8. ಫಾಲ್ಗುಣ ಶುಕ್ಲಹುಣ್ಣಿಮೆ
9. ಎರಡು
10. ಹಲಸಿನ ಮರ
11. ಇಂದಿರೇಶ
12. ಭೂವರಾಹ
13. ಜಿಂಕೆ
14. ಸೋಮಕಾಸುರ
15. ಮತ್ಸ್ಯಾವತಾರ

**ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟವರು**

**ಎಸ್. ಕೆ. ಕೃಪಾಲ್ ಕೋಲಾರ**

**17-03-2023 ರಂದು ನಡೆದ ತಮಿಳುನಾಡಿನ ಚೆನ್ನೈನಲ್ಲಿರುವ ಜಿ.ಎನ್.ಶೆಟ್ಟಿ ರಸ್ತೆಯಲ್ಲಿರುವ ಶ್ರೀ ಪದ್ಮಾವತಿ ದೇವಿ ಆಲಯದ ಮಹಾಕುಂಭಾಭಿಷೇಕ ಕಾರ್ಯಕ್ರಮದ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿಶಾಖ ಶಾರದಾ ಪೀಠಾಧಿಪತಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು**





















**ತಿರುಪತಿ**
**ಶ್ರೀ ಗೋವಿಂದರಾಜಸ್ವಾಮಿಯವರ**
**ಬ್ರಹ್ಮೋತ್ಸವಗಳು**
**2023 ಮೇ 26 ರಿಂದ ಜೂನ್ 03 ರ ವರೆಗೆ**

**26-05-2023 ಶುಕ್ರವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**27-05-2023 ಶನಿವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**28-05-2023 ಭಾನುವಾರ**
ಹಗಲು : ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**29-05-2023 ಸೋಮವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**30-05-2023 ಮಂಗಳವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**31-05-2023 ಬುಧವಾರ**
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**01-06-2023 ಗುರುವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**02-06-2023 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**03-06-2023 ಶನಿವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



**ನಾಗುಲಾಪುರಂ**
**ಶ್ರೀ ವೇದವಲ್ಲಿ ಸಮೇತ**
**ಶ್ರೀ ವೇದನಾರಾಯಣಸ್ವಾಮಿಯವರ**
**ಬ್ರಹ್ಮೋತ್ಸವಗಳು**
**2023 ಮೇ 4 ರಿಂದ 12 ರ ವರೆಗೆ**

**04-05-2023 ಗುರುವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**05-05-2023 ಶುಕ್ರವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**06-05-2023 ಶನಿವಾರ**
ಹಗಲು : ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**07-05-2023 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**08-05-2023 ಸೋಮವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**09-05-2023 ಮಂಗಳವಾರ**
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**10-05-2023 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**11-05-2023 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**12-05-2023 ಶುಕ್ರವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



**ಕಾರ್ವೇಟಿನಗರಂ**
**ಶ್ರೀ ವೇಣುಗೋಪಾಲಸ್ವಾಮಿಯವರ**
**ಬ್ರಹ್ಮೋತ್ಸವಗಳು**
**2023 ಮೇ 13 ರಿಂದ 21 ರ ವರಗೆ**

**13-05-2023 ಶನಿವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**14-05-2023 ಭಾನುವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**15-05-2023 ಸೋಮವಾರ**
ಹಗಲು : ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**16-05-2023 ಮಂಗಳವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**17-05-2023 ಬುಧವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**18-05-2023 ಗುರುವಾರ**
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**19-05-2023 ಶುಕ್ರವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**20-05-2023 ಶನಿವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**21-05-2023 ಭಾನುವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ




**ಅಪ್ಪಲಾಯಗುಂಟ**
**ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿಯವರ**
**ಹೃಷೀಕೇಶ್, ಶ್ರೀ ವೆಂಕಟೇಶ್ವರಸ್ವಾಮಿಯವರ**
**ಮತ್ತು ನಾರಾಯಣವನಂ,**
**ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ**
**ಬ್ರಹ್ಮೋತ್ಸವಗಳು**

**2023 ಮೇ 31 ರಿಂದ ಜೂನ್ 08 ರ ವರೆಗೆ**

**31-05-2023 ಬುಧವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**01-06-2023 ಗುರುವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**02-06-2023 ಶುಕ್ರವಾರ**
ಹಗಲು : ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**03-06-2023 ಶನಿವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**04-06-2023 ಭಾನುವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**05-06-2023 ಸೋಮವಾರ**
ಹಗಲು: ಹನುಮದ್ವಾಹನ
ರಾತ್ರಿ: ಗಜವಾಹನ

**06-06-2023 ಮಂಗಳವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**07-06-2023 ಬುಧವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**08-06-2023 ಗುರುವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ




ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ 03-03-2023 ರಿಂದ 07-03-2023 ರ ವರೆಗೆ ನಡೆದ ತೆಪ್ಪೋತ್ಸವದ ದೃಶ್ಯಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ರವರು





ತಿರುಮಲೆ ರಂಗನಾಯಕ ಮಂಟಪದಲ್ಲಿ ಶ್ರೀ ಸೀತಾರಾಮಲಕ್ಷ್ಮಣ ಸಮೇತ ಹನುಮಂತನಿಗೆ 30-03-2023 ರಂದು ವೈಭವವಾಗಿ ನಡೆದ ಸ್ನಪನ ತಿರುಮಂಜನ ಕಾರ್ಯಕ್ರಮ. ಅಂದು ರಾತ್ರಿ ಹನುಮಂತವಾಹನ ಸೇವೆಯಲ್ಲಿ ಸ್ವಾಮಿಯವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ದಂಪತಿಗಳು ಪಾಲ್ಗೊಂಡರು.



ತಿರುಪತಿ ವೇದ ವಿಶ್ವವಿದ್ಯಾಲಯದಲ್ಲಿ 31-03-2023 ರಂದು ನಡೆದ ಶ್ರೀ ಸುದರ್ಶನ ಹೋಮ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ.ವೈ.ವಿ.ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್., ರವರು ಪಾಲ್ಗೊಂಡರು.




ತಿರುಮಲೆ ಶ್ರೀವೆಂಕಟೇಶ್ವರ ಸ್ವಾಮಿಯವರ ದರ್ಶನಕ್ಕಾಗಿ 04-03-2023 ರಂದು ಆಗಮಿಸಿದ ವಿಶಾಖ ಶಾರದಾ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಮತ್ತು ಉತ್ತರಾಧಿಕಾರಿ ಶ್ರೀ ಶ್ರೀ ಶ್ರೀ ಸ್ವಾತ್ಮಾನಂದೇಂದ್ರ ಸರಸ್ವತಿ ಸ್ವಾಮಿಯವರನ್ನು ಸ್ವಾಗತಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ರವರು.




ತಿರುಪತಿ ಮಹತಿ ಕಳಾಮಂದಿರದಲ್ಲಿ ತಿ.ತಿ.ದೇ., ನೇತೃತ್ವದಲ್ಲಿ 08-03-2023 ರಂದು ನಡೆದ ಮಹಿಳಾದಿನೋತ್ಸವ ಕಾರ್ಯಕ್ರಮ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಮಾತಾ ರಮ್ಯಾನಂದ ಭಾರತಿ ಸ್ವಾಮಿ ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

# ಪ್ರೇಮ ದರ್ಶನದ ಆಚಾರ್ಯ ನಾರದ



- ಕಲ್ಯಾಣಿ ಮೂರ್ತಿ ರಾಮನಾಥಪುರ

ಅಹೋ ನಾರದ ಧನ್ಯೋ೭ಸ್ಮಿ ವಿರಕ್ತಾ ನಾಂ ಶಿರೋಮಣಿಃ।
ಸದಾ ಶ್ರೀಕೃಷ್ಣ ದಾಸಾನಾಮಗ್ರಣೀ ಯೋರ್ಗಭಾಸ್ಕರಃ ॥

ಸನಕಾದಿ ಮುನೀಶ್ವರರು ಹೇಳಿದ್ದು ನಾರದರೇ ! ತಾವು ಧನ್ಯರು. ನೀವು ವಿರಕ್ತರ ಶಿರೋಮಣಿ, ಶ್ರೀ ಕೃಷ್ಣದಾಸರ ಶಾಶ್ವತ ಮಾರ್ಗದರ್ಶಿಗಳು ಹಾಗೂ ಭಕ್ತಿಯೋಗದ ಭಾಸ್ಕರರು.

ದೇವರ್ಷಿ ನಾರದರ ಮಹತ್ತಿನ ಶ್ರೇಣಿಯೇನು? ಅವರ ಭಗವತ್ ಪ್ರೇಮದ ನಿದರ್ಶನವೆಂದರೆ - ಸಾಕ್ಷಾತ್ ಪ್ರೇಮ ಸ್ವರೂಪಿಯೂ, ಪ್ರೇಮದ ನಿದರ್ಶನವೆಂದರೆ- ಸಾಕ್ಷಾತ್ ಪ್ರೇಮ ಸ್ವರೂಪಿಯೂ ಪ್ರೇಮೈಕಗಮ್ಯಯೂ ಮತ್ತು ಪರಮ ಪ್ರೇಮಾಸ್ಪದ ಮನಮೋಹನ ಶ್ರೀ ಕೃಷ್ಣನೇ ಅವನನ್ನು ನಿರಂತರ ಸ್ತುತಿಸಿದ್ದಾನೆ, ವಂದಿಸಿದ್ದಾನೆ.

"ಅಹಂ ಹಿ ಸರ್ವದಾ ಸ್ತೌಮಿ ನಾರದಂ ದೇವದರ್ಶನಮ್"
ಉತ್ಸಂಜ್ಗದ್‌ಬ್ರಹ್ಮಣೋ ಜಾತೋ ಯಸ್ಯಾ ಹಂತಾ ನವಿದ್ಯತೇ।
ಅಗುಪ್ತಶ್ರುತಿ ಚಾರಿತ್ರಂ ನಾರದಂ ತಂ ನಮಾಮ್ಯಹಮ್॥
ಕಾಮಾದ್ವಾ ಯದಿ ವಾ ಲೋಭಾದ್ ವಾಚಂ ನೋ ನಾನ್ಯಥಾ ವದೇತ್।
ಉಪಾಸ್ಯಂ ಸರ್ವ ಜಂತೂನಾಂ ನಾರದಂ ತಂ ನಮಾಮ್ಯಹಮ್॥

- ನಾನು ದಿವ್ಯ ದೃಷ್ಟಿ ಸಂಪನ್ನರಾದ ನಾರದರನ್ನು ಸದಾ ಸ್ತುತಿಸುತ್ತೇನೆ. ಬ್ರಹ್ಮನ ಮಡಿಲಿನಿಂದ ಸೃಷ್ಟಿಯಾಗಿರುವ ಅವರಿಗೆ ಮನಸ್ಸಿನಲ್ಲಿ ಅಹಂಕಾರವಿಲ್ಲ. ಅವರ ಶಾಸ್ತ್ರ ಜ್ಞಾನವಾಗಲೀ, ಚರಿತ್ರೆಯಾಗಲೀ ಯಾರಿಂದಲೂ ರಹಸ್ಯವಾಗಿಲ್ಲ ಅಂತಹ ದೇವರ್ಷಿಯಾದ ನಾರದರಿಗೆ ನಾನು ನಮಸ್ಕರಿಸುತ್ತೇನೆ. ಕಾಮನೆಯಿಂದಾಗಲೀ ಅಥವಾ ಲೋಭದಿಂದಾಗಲೀ ಸುಳ್ಳು ಹೊರಡದ, ಎಲ್ಲ ಜೀವಿಗಳು ಪೂಜಿಸುವ ಆ ನಾರದ ಮಹಾಶಯರನ್ನು ನಾನು ನಮಸ್ಕರಿಸುತ್ತೇನೆ.

ಸ್ವತಃ ದೇವರ್ಷಿನಾರದರೇ ತಮ್ಮ ಬಗ್ಗೆ ಹೇಳಿ ಕೊಳ್ಳುತ್ತಾರೆ. ನಾನು ಆ ಪರಮಪಾವನ ಚರಣ, ಉದಾರಶ್ರವಣ ಪ್ರಭುವಿನ ಗುಣಗಳನ್ನು ಗಾನ ಮಾಡುವಾಗ ಪ್ರಭು ತಡ ಮಾಡದೆ ನಾನು ಕರೆದಂತೆಯೇ ತಕ್ಷಣ ಪ್ರಕಟಗೊಳ್ಳುತ್ತಾರೆ.

ಪ್ರಗಾಯಡ ಸ್ವ ವೀರ್ಯಾಣಿ ತೀರ್ಥಪಾದ ಪ್ರಿಯಶ್ರವಾಃ
ಆಹೂತ ಇವ ಮೇ ಶೀಘ್ರಂ ದರ್ಶನಂ ಯಾತಿ ಚೇತಸಿ ॥

ನಾರದರು ಪ್ರೇಮ ಪರಿವ್ರಾಜಕರು, ಅವರ ಕೆಲಸವೆಂದರೆ, ತಮ್ಮ ತಂಬೂರಿಯ ಮನೋಹರ ನಾದದೊಂದಿಗೆ ಭಗವಂತನ ಗುಣಗಳನ್ನು ಪ್ರೀತಿಪೂರ್ವಕ ಹಾಡುವುದು. ಅವರ ನಿತ್ಯ ಸರ್ವತ್ರ ತಿರುಗಾಟದ ಅವಿಕಲ ಧಾರ ಪ್ರವಾಹ ನಡೆಯುತ್ತಿರುತ್ತದೆ. ಇದೇ ಉದ್ದೇಶವನ್ನು ಪೂರ್ಣಗೊಳಿಸಲು ಅವರು ಅವತರಿಸುತ್ತಾರೆ. ಅವರು ಪ್ರೇಮ ಕೀರ್ತನದ ಆಚಾರ್ಯರಲ್ಲದೆ ಭಾಗವತಧರ್ಮದ ಪ್ರಮುಖ ಹನ್ನೆರಡು ಜನ ಆಚಾರ್ಯರುಗಳಲ್ಲಿ ಒಬ್ಬರು. ಅವರು ಮನೆಮನೆಗಳಿಗೆ ಹಾಗೂ ಜನಸಮೂಹಕ್ಕೆ ಪ್ರೇಮ ಭಕ್ತಿಯನ್ನು ಸ್ಥಾಪಿಸಲು ಪ್ರತಿಜ್ಞೆ ಮಾಡಿದರು. ಈ ಭಕ್ತಿಯ ಪ್ರಚಾರದಲ್ಲಿ ನಿರಂತರ ತೊಡಗಿದ್ದರು. ದೇವರ್ಷಿಗಳಾದ ಇವರು ಕೃಪಾಮೂರ್ತಿಯಾಗಿ ಜೀವಿಗಳಿಗೆ ಕೃಪೆ ತೋರಲು ಸದಾ ತ್ರಿಲೋಕ ಸಂಚಾರಿಗಳಾಗಿದ್ದರು. ಯಾವುದೇ ದೊರೆತರೂ



ಅದನ್ನು ಹೇಗಾದರೂ ಮಾಡಿ ಭಗವಂತನ ಶ್ರೀಚರಣಗಳಿಗೆ ಅರ್ಪಿಸುವುದೊಂದೇ ಅವರ ವ್ರತವಾಗಿತ್ತು. ಅವರು ನಿಜಕ್ಕೂ ಎಲ್ಲರಿಗೂ ಒಳ್ಳೆಯ ಹಿತೈಷಿಗಳಾಗಿದ್ದರು.ಇವರನ್ನು ಭಗವಂತನ ಮನಸ್ಸು ಎಂದೆನ್ನುತ್ತಾರೆ.

ಪ್ರಹ್ಲಾದ, ಧೃವ, ಅಂಬರೀಷ ಮುಂತಾದ ಮಹಾ ಭಕ್ತರನ್ನು ಇವರೇ ಭಕ್ತಿ ಮಾರ್ಗದತ್ತ ಹೊರಳಿಸಿದರು. ಶ್ರೀಮದ್ಭಾಗವತ ಹಾಗೂ ವಾಲ್ಮೀಕಿ ರಾಮಾಯಣದಂತಹ ಎರಡು ಅಮೂಲ್ಯ ಗ್ರಂಥಗಳೂ ಸಹ ಜಗತ್ತಿಗೆ ಇವರ ಕೃಪೆಯಿಂದಲೇ ದೊರತದ್ದು, ಶುಕದೇವರಂತಹ ಮಹಾಜ್ಞಾನಿಗಳಿಗೂ ಸಹ ಇವರೇ ಉಪದೇಶ ನೀಡಿದ್ದು. ಪೂರ್ವಜನ್ಮದಲ್ಲಿ ಇವರಿಗೆ ಭಗವಂತನಿಂದ ದೊರಕಿದ್ದ ಮೋಹಿನಿಯ ಕಾಂತಿಯ ದರ್ಶನವನ್ನು ಸಾರ್ಥಕಪಡಿಸಲು ಆ ಜನ್ಮಸ್ಮೃತಿಯ ಕೃತಾರ್ಥತೆ ಗೋಸ್ಕರ ಮತ್ತೆ ಈ ಜನ್ಮದಲ್ಲಿ ಭಗವಂತನ ನಿತ್ಯ ಕೈಂಕರ್ಯ ವೆಂಬಂತೆ ಅನುಗ್ರಹ ಹೊಂದಿದರು. ದೇವರ್ಷಿ ನಾರದರು ಭಗವಂತನಲ್ಲಿ ವಿಶೇಷ ಕೃಪಾಪಾತ್ರರೂ ಮತ್ತು ಲೀಲಾ ಸಹಚಾರರು.ಭಗವಂತನ ಅವತಾರವಾದಾಗಲೆಲ್ಲ ಅವನ ಪ್ರೇಮ ಲೀಲೆಗೆ ಇವರು ವೇದಿಕೆಯನ್ನು ಸಿದ್ಧಪಡಿಸುತ್ತಾರೆ. ಲೀಲೋಪಯೋಗಿ ಉಪಕರಣಗಳ ಸಂಗ್ರಹ ಮತ್ತು ಬೇರೆ ರೀತಿಯ ಸಹಾಯ ಮಾಡುತ್ತಾರೆ.ಇವರ ಮಂಗಳ ಪೂರ್ಣವಾದ ಬದುಕು ಜಗತ್ತಿನ ಮಂಗಳಕ್ಕಾಗಿಯೇ ವಿನಿಯೋಗವಾಗಿದೆ. ಶ್ರೀರಾಮ ಮತ್ತು ಶ್ರೀಕೃಷ್ಣರ ಲೀಲೆಗಳಲ್ಲಿ ಇವರ ಕೊಡುಗೆ, ಸಹ ಯೋಗ ವಿಶೇಷ ರೂಪದಲ್ಲಿದೆ.


ಒಮ್ಮೆ ನಾರದರು ಭಗವಂತನನ್ನು ಕೇಳಿದ್ದು - ದೇವೇಶ್ವರ ! ತಾವು ವಾಸಿಸುವುದೆಲ್ಲಿ? ಅದಕ್ಕೆ ಭಗವಂತನ ಉತ್ತರ-ನಾನು ವೈಕುಂಠದಲ್ಲಾಗಲೀ ಇಲ್ಲವೇ ಯೋಗಿಗಳ ಹೃದಯದಲ್ಲಾಗಲೀ ವಾಸಿಸುವುದಿಲ್ಲ.ನನ್ನ ಭಕ್ತರು ನನ್ನ ಗುಣಗಾನ ಮಾಡುವಲ್ಲಿ ನಾನಿರುತ್ತೇನೆ.

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇನವೈ।
ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ॥

ಅಲ್ಲಿಂದ ನಾರದರು ಭಗವಂತನ ಗುಣಗಾನ ಮಾಡತೊಡಗಿದರು. ಭಗವಂತ ಭಕ್ತನ ಪ್ರೀತಿಯ ವಶೀಭೂತ. ಪ್ರೀತಿಯ, ಅನುರಾಗದ, ಅನುರಕ್ತಿಯ ಮಾರ್ಗ ಸಹಜವೂ ಮತ್ತು  ಸುಲಭವೂ ಎಂದು ನಾರದರಿಗೆ ಅನುಭವವಾಯಿತು.ಇದನ್ನು ಅರುಹಲು ಅವರು 64 ಸೂತ್ರಗಳನ್ನು ಹೆಣೆದರು. ಇವೇ ಭಕ್ತಿ ಸೂತ್ರದ ಹೆಸರಿನಲ್ಲಿ ಪ್ರಸಿದ್ಧವಾಗಿವೆ. ಇವುಗಳಲ್ಲಿ ಪ್ರೀತಿಯ ಮಹಾಭಾವಸ್ಥಿತಿಯು ಬಹಳ ಅದ್ಭುತವಾಗಿ ವರ್ಣಿತವಾಗಿದೆ. ಇವು ಚಿಕ್ಕ ಚಿಕ್ಕ ಭಕ್ತಿ ಸೂತ್ರಗಳು. ಸಂಸ್ಕೃತ ಬಹಳ ಸುಲಭ. ಆದರೆ ಇವುಗಳ ಭಾವ ಬಹಳ ಗಂಭೀರ . ಇವೆಲ್ಲವೂ ನೆನಪಿನಲ್ಲಿಡಲು ಅರ್ಹವಾದುವು. ಪ್ರೇಮದ ಸ್ವರೂಪದ ವಿಷಯದಲ್ಲಿ ಅನಿರ್ವಚನೀಯಂ ಪ್ರೇಮಸ್ವರೂಪಮ್ ಎಂದು ಹೇಳಲ್ಪಟ್ಟಿದೆ. ಪ್ರೇಮವೆಂಬುದು ಗುಣರಹಿತವಾದುದು. ಕಾಮನಾರಹಿತವಾದುದು. ಪ್ರತಿಕ್ಷಣವೂ ಹೆಚ್ಚುತ್ತಿರುತ್ತದೆ. ವಿಚ್ಛೇದರಹಿತವಾದ ಇದು ಸೂಕ್ಷ್ಮಕ್ಕಿಂತಲೂ ಸೂಕ್ಷ್ಮತರವಾದುದು. ಅಲ್ಲದೆ ಅನುಭವರೂಪವಾದುದು. ಗುಣರಹಿತಂ ಕಾಮ ನಾರಹಿತಂ ಪ್ರತಿಕ್ಷಣವರ್ಧಮಾನಮವಿಚ್ಛಿನ್ನಂ ಸೂಕ್ಷ್ಮತರಮನುಭವರೂಪಮ್॥ ನಾರದರು ಪ್ರೇಮ ಭಕ್ತಿಯನ್ನು  ಹೊಂದಲು ಪ್ರಮುಖ ಸಾಧನಗಳಲ್ಲಿ ಭಗವತ್ಪ್ರೇಮಿ ಮಹಾಪುರುಷರು ಅಥವಾ ಅಲ್ಪಪ್ರಮಾಣದ ಭಾಗವತ್ ಕೃಪೆಯೋ ಮುಖ್ಯವೆಂದು ತಿಳಿದಿದ್ದಾರೆ. ಮುಖ್ಯತಸ್ತು ಮಹತ್ಕೃಪಯೈವ ಭಗವದ್ಕೃಪಾಲೇಶಾದ್ವಾ॥ ಮಹಾಪುರುಷರ ಸಹವಾಸ ಅಥವಾ ಸತ್ಸಂಗ ದೊರಕುವುದು ದುರ್ಲಭ, ಅಗಮ್ಯ ಮತ್ತು ಅಮೋಘವಾದುದು. ಅಲ್ಲದೆ ಇದು ಭಗವಂತನ ಕೃಪೆಯಿಂದಲೇ ದೊರಕುವಂತಹುದು ಎನ್ನುತ್ತಾರೆ. ''ಮಹಾಸತ್ಸಂಗಸ್ತು ದುರ್ಲಭೋಽಗಮ್ಯೋಽಮೋಘಶ್ಚ ಲಭ್ಯತೇಪಿ ತತ್ಕೃಪಯೈವ '' ಭಗವಂತ ಮತ್ತು ಅವನ ಭಕ್ತರಲ್ಲಿ ಭೇದದ ಅಭಾವವಿದೆ.  ತಸ್ಮಿಂಸ್ತಜ್ಜನೇ ಭೇದಾಭಾವಾತ್।

ಭಗವತ್ಪ್ರೇಮಿ ಭಕ್ತ ಸ್ವತಃ ತಾನು ತೊಯ್ದು ಹೋಗುವುದಲ್ಲದೆ, ಜಗತ್ತನ್ನೂ ಸಹ ತೊಯ್ಯಸುತ್ತಾನೆಂದು ನಾರದರು ಹೇಳುತ್ತಾರೆ. ಸತರತಿ ಸ ತರತಿ ಸ ಲೋಕಾಂಸ್ತಾರಯತಿ ಇಷ್ಟಲ್ಲದೆ ಭಕ್ತನಾದವನು ಪುಣ್ಯಕ್ಷೇತ್ರಗಳನ್ನು ಸುತೀರ್ಥಗಳಾಗಿ , ಕರ್ಮಗಳನ್ನು ಸುಕರ್ಮ  ಮತ್ತು ಶಾಸ್ತ್ರಗಳನ್ನು ಸತ್‌ಶಾಸ್ತ್ರಗಳನ್ನು ಮಾಡುತ್ತಾನೆ.

''ತೀರ್ಥಿಕುರ್ವಂತಿ ತೀರ್ಥಾನಿ ಸುಕರ್ಮೀಕುರ್ವಂತಿ ಕರ್ಮಾಣಿ ಸಚ್ಛಾಸ್ತ್ರೀಕುರ್ವಂತಿ ಶಾಸ್ತ್ರಾಣಿ॥'' ಇಂತಹ ಭಕ್ತರನ್ನು ಹೊಂದಿದ ಪಿತೃಗಳು ಆನಂದ ಹೊಂದುತ್ತಾರೆ. ದೇವತೆಗಳು ನೃತ್ಯ ಮಾಡುತ್ತಾರೆ. ಪೃಥ್ವಿ ಸನಾಥನವಾಗುತ್ತದೆ. ''ಮೋದಂತೇ ಪಿತರೋನೃತ್ಯಂತಿ ದೇವತಾಃ ಸನಾಥಾ ಚೇಯಂ ಭೂರ್ಭವಂತಿ ನಿಷ್ಕರ್ಷ''ರೂಪದಲ್ಲಿ ನಾರದರು ಹೇಳುವುದು - ''ಸರ್ವದಾ ಸರ್ವಭಾವೇನ ನಿಶ್ಚಿಂತಿತೈ ರ್ಭಗವಾನೇವ ಭಜನೀಯ'' ಹಾಗಾಗಿ ಎಲ್ಲ ಕಾಲಕ್ಕೂ, ಸರ್ವ  ಭಾವದಿಂದ ನಿಶ್ಚಿಂತರಾಗಿ ಕೇವಲ ಭಗವಂತನ ಭಜನೆ ಮಾಡಬೇಕು.




# ಶ್ರೀ ಶಂಕರ ಚರಿತಾಮೃತಮ್

ಆದಿ ಶಂಕರಾಚಾರ್ಯರು ನಮ್ಮ ಸನಾತನ ಧರ್ಮ ಪ್ರವರ್ತಕರು.ಅವರ ಜೀವನ ಚರಿತ್ರೆಯೇ ನಮ್ಮ ಸಂಪ್ರದಾಯಕ್ಕೆ ಒಂದು ಭದ್ರ ಬುನಾದಿ . ಆದಿ ಶಂಕರಾಚಾರ್ಯರ ಕುರಿತಾಗಿ ಅನೇಕ ಗ್ರಂಥಗಳು ಬಂದಿದ್ದರೂ ಬೇಲೂರು ರಾಮಮೂರ್ತಿಯವರು ಬರೆದಿರುವ ಶ್ರೀ ಶಂಕರ ಚರಿತಾಮೃತಮ್ ವಿಶೇಷವಾಗಿರುವುದು ಏಕೆಂದರೆ ಆದಿ ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ಪಂಡಿತರು ಪಾಮರರಾದಿಯಾಗಿ ಸಕಲರೂ ಸುಲಭವಾಗಿ ಓದಿ ಅರ್ಥ ಮಾಡಿಕೊಳ್ಳುವಂತಹ ಸರಳ ಚೌಪದಿಗಳಲ್ಲಿ ರಚನೆಯಾಗಿರುವುದು. ಈ ಗ್ರಂಥದ ವಿಶೇಷ ಏನೆಂದರೆ ಈ ಗ್ರಂಥವನ್ನು ಶೃಂಗೇರಿಯಲ್ಲಿ ನವರಾತ್ರಿಯ ವಿಜಯದಶಮಿ ದಿವಸ ಉಭಯ ಜಗದ್ಗುರುಗಳು ಲೋಕಾರ್ಪಣೆ ಮಾಡಿ ಲೇಖಕರನ್ನು ಆಶೀರ್ವಾದ ಮಾಡಿರುವುದು. ಸುಮಾರು ೨೦೦ ಪುಟಗಳಲ್ಲಿ ೧೭ ಅಧ್ಯಾಯಗಳಲ್ಲಿ ಚೌಪದಿಗಳಲ್ಲಿ ಇರುವ ಈ ಗ್ರಂಥ ಮನೆ ಮನೆಯಲ್ಲಿಯೂ ಇರಬೇಕಾದಂಥ ಗ್ರಂಥ.

ವಯಸು ಎಂಟಕೆ ನಾಲ್ಕು ವೇದಗಳು, ಹನ್ನೆರಡಕ್ಕೆ ಶಾಸ್ತ್ರಗಳು ಕರಗತ
ಜ್ಞಾನ ವಿಸ್ತರಣೆ ಕೂಡಿ ಹದಿನಾರಕ್ಕೆ ವೇದಗಳಿಗೆ ಭಾಷ್ಯಗಳ ರಚಿಸುತ
ದಾಟಲು ವಯಸು ಮೂವತ್ತೆರೆಡು ಬದುಕಿನ ಪಯಣವ ಮುಗಿಸುತ

ಅದ್ವೈತ ಸಿದ್ಧಾಂತಕ್ಕೆ ಬುನಾದಿ ಹಾಕಿದರು

ಈ ರೀತಿಯ ಚೌಪದಿಗಳಿಂದ ಸಿಂಗಾರಗೊಂಡಿರುವ ಶ್ರೀ ಶಂಕರ ಚರಿತಾಮೃತಮ್ ಒಂದು ಉತ್ಕೃಷ್ಟ ಗ್ರಂಥ. ಪ್ರತಿ ಮನೆಯಲ್ಲೂ ಇರಬೇಕಾದ ಗ್ರಂಥ.

**ಗ್ರಂಥ ಪರಿಚಯ**

**(ಆದಿ ಶಂಕರಾಚಾರ್ಯರ ಜೀವನ ವೃತ್ತಾಂತ ೧೨೦೦ ಸರಳ ಚೌಪದಿಗಳಲ್ಲಿ)**

**ಲೇಖಕರು :** ಬೇಲೂರು ರಾಮಮೂರ್ತಿ


**ಪ್ರಕಾಶಕರು :** ದಿವ್ಯಾಪ್ರಕಾಶನ, ಶೇಷಾದ್ರಿಪುರಂ ಬೆಂಗಳೂರು

**ಪುಟಗಳು:** 210

**ಬೆಲೆ ರೂ.:** 200 ರೂಪಾಯಿಗಳು

**ಗ್ರಂಥವನ್ನು ಕೊಳ್ಳಲು ಲೇಖಕರನ್ನು ಸಂಪರ್ಕಿಸಬಹುದು.**

**ಬೇಲೂರು ರಾಮಮೂರ್ತಿ**
ಸುಕೇಶವ, 96, 2 ನೇ ಅಡ್ಡ ರಸ್ತೆ
20 ನೇ ಮುಖ್ಯ ರಸ್ತೆ, ಬಿಟಿಎಂ 1 ನೇ ಹಂತ
ಬೆಂಗಳೂರು 560 068
ದೂರವಾಣಿ 080 - 26688488
ಸಂಚಾರಿ : 98860 61400




# ಸುಭಾಷಿತ ಮಂಜರಿ

ಭಾಗವತೋತ್ತಮೆ ಕಮಲಮ್ಮರಾಜು ಅವರು 91 ರ ಇಳಿ ವಯಸ್ಸಿನಲ್ಲಿ ಸಂಕಲಿಸಿರುವ ಅಮೂಲ್ಯವಾದ 902 ಸುಭಾಷಿತ ರತ್ನಗಳು ಈ ಕೃತಿಯಲ್ಲಿದೆ. ವೈವಿಧ್ಯಮಯವಾದ ಜೀವನಾನುಭವದಿಂದ ಕೂಡಿರುವ ಈ ಸುಭಾಷಿತಗಳು ನಮ್ಮ ಬದುಕನ್ನು ಹಸನುಗೊಳಿಸುವ ದೀವಿಗೆಗಳಾಗಿವೆ. ಮನಕೆ ಮುದನೀಡುವ, ನೆಮ್ಮದಿ ನೀಡುವ, ಕಷ್ಟ ಕಾರ್ಪಣ್ಯಗಳಲ್ಲಿ ಮಾರ್ಗದರ್ಶಿಯಾಗುವ ಸುಭಾಷಿತ ರತ್ನಗಳು ಇದರಲ್ಲಿದೆ. ಮನೆಗಳಲ್ಲಿ ಸಂಗ್ರಹಿಸಬಹುದಾದ ಕೃತಿಯಿದಾಗಿದೆ.

**ಲೇಖಕಿ :** ಕಮಲಮ್ಮರಾಜು ತಿಮ್ಮಸಂದ್ರ

**ಬೆಲೆ :** 150/-

**ಪುಟಗಳು :** 155

**ಪ್ರಕಾಶಕರು:** ಕೋಲಾರ ಜಿಲ್ಲೆ ನಂದವರೀಕ ಟ್ರಸ್ಟ್ 80735 50288

**(ಪಂಚಪರ್ವತಗಳಲ್ಲಿ) ಶ್ರೀ ವೇಂಕಟರಮಣ ಸ್ವಾಮಿಯ ಅಧ್ಯಯನೋತ್ಸವ ವೇಳೆಯಲ್ಲಿ ದಿವ್ಯಪ್ರಬಂಧವನ್ನು ಅನುಸಂಧಾನ ಮಾಡುವ ವಿಧಾನ :**

ತೀರ್ಥಾಭಿಗಮನೋತ್ಸವದ ದಿನವನ್ನು ಸೇರಿಸಿಕೊಂಡರೆ ಅಧ್ಯಯನೋತ್ಸವದ ದಿನಗಳು ಇಪ್ಪತ್ತಾಲ್ಕು ಚಿಕ್ಕ ಅಧ್ಯಯನೋತ್ಸವ ಸಮಾರಂಭವು (ಪಗಲ್‌ಪತ್ತು) ಮಾಘ (ಧನುರ್) ಮಾಸದ ಶುಕ್ಲಪಕ್ಷ ಏಕಾದಶಿಯ ಮುಂದಿನ ಹನ್ನೊಂದು ದಿನಗಳು. ಮೊದಲ ದಿನೋತ್ಸವವು ರಾತ್ರಿ 'ಮುದಲ್ ತಿರುವಂದಾದಿ' ಮೊದಲುಗೊಂಡು ಮೂರು ತಿರುವಂದಾದಿಗಳು, ನಾನ್ಮುಗನ್ ತಿರುವಂದಾದಿ ಯಲ್ಲಿಯೇ ಅತ್ಯಧಿಕ ಸಂಖ್ಯೆಯಲ್ಲಿ ಪಾಶುರಗಳನ್ನು ಅನುಸಂಧಿಸಲಾಗುವುದು. ಎರಡನೇ ದಿನ ಪ್ರಾತಃಕಾಲದಲ್ಲಿ ಇಯಚ್ಚಾ - ನೂರು ಪಾಶುರಗಳನ್ನು ಅನುಸಂಧಿಸಲಾಗುವುದು ರಾತ್ರಿ ತಿರುಪ್ಪಲ್ಲಾಂಡು ಆರಂಭವಾಗುವುದು ಮೂರನೇ ದಿನದ ಪ್ರಾತಃ ಕಾಲದಲ್ಲಿ ಪೆರಿಯಳ್ವಾರರ ತಿರುಮೊಳಿಯ ಎರಡು ಶತಕಗಳು ರಾತ್ರಿ ಶೆನ್ನಿಯಾಜ್ಞ, ನಾಲ್ಕನೇಯ ದಿನದ ಬೆಳಗ್ಗೆ ಪೆರಿಯಾಳ್ವಾರ್ ತಿರುಮೊಳಿಯಲ್ಲಿನ ಉಳಿದ ಭಾಗ ರಾತ್ರಿ ವಿಣ್ಣೀಲವೇಲಾಪ್ಪು. ಐದನೇಯ ದಿನದಲ್ಲಿ ಉದಯಕಾಲದಲ್ಲಿ ತಿರುಪ್ಪಾವೈ, ನಾಯ್‌ಚ್ಚಿಯಾರ್ ತಿರುಮೊಳಿ; ರಾತ್ರಿ ಉನೇಲು ಶೆಲ್ವತ್ತು. ಆರನೇ ದಿನ ಬೆಳಗ್ಗೆ ಪೆರುಮಾಳ್ ತಿರುಮೊಳಿ ಮೊದಲುಗೊಂಡು ಕಣ್ಣಿಮಣ್ ಶಿರುತ್ತಾಂಬುವರೆಗೆ ಪ್ರಥಮ ಸಹಸ್ರ (ಮುದಲಾಯಿರಂ) ಪೂರ್ಣವಾಗಿ ರಾತ್ರಿ ತಿರುಮೊಳಿ ಸಮಾರಂಭ ; (ಅನಗ) ಹಾಗೆಯೇ 'ವಾಡಮರದಿಡ್ಡೈವ್ರೋ', ಎಂಟನೇ ದಿನದಲ್ಲಿ ಬೆಳಗ್ಗೆ ತಿರುಮೊಳಿ ಮೂರನೇ, ನಾಲ್ಕನೇ ಶತಕಗಳು ರಾತ್ರಿ 'ಪಂಡೈ ನಾನ್‌ಮರೈ', ಒಂಭತ್ತನೇ ದಿನ ಮುಂಜಾನೆ ಐದು, ಆರು, ಏಳು, ಶತಕಗಳು ರಾತ್ರಿ ತೆಲ್ಲಿಯಾರ್ ದೇವರೆಕ್ಕಂ ಹೆತ್ತನೇ ದಿನ ಬೆಳಗ್ಗೆ ಎಂಟನೇ ಒಂಭತ್ತನೇ ಶತಕಗಳು; ರಾತ್ರಿ ಕಾದಿಲ್ ಕಡಿಪ್ಪಿಟ್ಟು ಹನ್ನೊಂದ ನೆಯ ದಿನ ಬೆಳಗ್ಗೆ ಹತ್ತನೇ ಶತಕವು; ಹನ್ನೊಂದನೇ ಶತಕವು ರಾತ್ರಿ ತಿರುಕ್ಕರು ನ್ದಾಣ್ಣಕಂ,ತಿರುನೇಡುನ್ದಾಣ್ಣಕಂ ತಿರುಮೊಳಿಯ ಮುಕ್ತಾಯ ಹೀಗೆ ಹನ್ನೊಂದು



**ಧಾರಾವಾಹಿ**

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಡಿ.ಎಸ್.ಬದ್ರಿನಾಥ್

ದಿನಗಳಲ್ಲಿ ರಾತ್ರಿಯಲ್ಲಿ ಪ್ರಬಂಧಗಾಯಕರು ಕೋಯಿಲ್ ತಿರುವಾಯ್‌ಮೊಳಿಯನ್ನು ಸಂಗೀತದೊಂದಿಗೆ ಅನುಸಂಧಿಸುತ್ತಾರೆ. ಮರುದಿನ ಪ್ರಾತಃಕಾಲದಲ್ಲಿ ಉಳಿದಿದನ್ನು ಅನುಸಂಧಿಸ ತಕ್ಕದ್ದು.

ನಂತರ ಶುದ್ಧ ಏಕಾದಶಿ ಮೊದಲುಗೊಂಡು ಹಿರಿಯ ಅಧ್ಯಯನೋತ್ಸವ (ರಾಪತ್ತು) ಹತ್ತು ದಿನಗಳವರೆಗೆ ಪ್ರಾತಃ ಕಾಲದಲ್ಲಿ ನೈವೇದ್ಯವಾದ ನಂತರ ನಾಲ್ಕು ವೇದಗಳು, ಇತಿ ಹಾಸ ಪುರಾಣಗಳನ್ನು ಅನುಸಂಧಿಸಲ್ಪಡುತ್ತವೆ. ರಾತ್ರಿಯ

**ತಿರುಮಲೆಯಲ್ಲಿ ಅಧ್ಯಯನೋತ್ಸವವು ಎರಡನೇ ದಿನದಿಂದ ಆರಂಭಗೊಂಡು ಇಪ್ಪತ್ತೊಂದು ದಿನಗಳವರೆಗೆ ಸಾಯಂಕಾಲ ಸಮಯದಲ್ಲಿ 'ಮಲ್ತೆಕುನಿಯ ನಿನಂಪೆರುಮಾಳ್' (ಉತ್ಸವಮೂರ್ತಿ) ಮೆರವಣಿಗೆಯನ್ನು ರಥಬೀದಿಯಲ್ಲಿ ಮಾಡುವಾಗ ಉತ್ತರದ ಬೀದಿಯಲ್ಲಿ ಶಿರಿಯ ತಿರುಮಡಲ್‌ನ್ನು ಅನುಸಂಧಿಸುತ್ತಾರೆ.**

ವೇಳೆಯಲ್ಲಿ ಪ್ರತಿನಿತ್ಯ ತಿರುವಾಯ್‌ಮೊಳಿಯ ಒಂದು ಶತಕ ವನ್ನು ಅನುಸಂಧಿಸಲಾಗುತ್ತದೆ. ಹನ್ನೊಂದನೇಯ ದಿನದಲ್ಲಿ ರಾತ್ರಿ ಕಣ್ಣಿನುಣ್ ಶಿರುತ್ತಾಂಬು.ಹನ್ನೆರಡನೇ ದಿನ ರಾತ್ರಿ (ರಾಮಾ ನುಜ) ನೂತ್ತಾಂದಾದಿ; ಮರುದಿನ ಜ್ಞಾನವರಾಹ ಸ್ವಾಮಿ ತಿರು ವಾಯ್‌ಮೊಳಿಯ ವರ್ಣನೆ. ನಂತರದ ದಿನ ತೀರ್ಥಾ ಭಿಗಮ ನೋತ್ಸವವು.

ತಿರುಮಲೆಯಲ್ಲಿ ಅಧ್ಯಯನೋತ್ಸವವು ಎರಡನೇ ದಿನ ದಿಂದ ಆರಂಭಗೊಂಡು ಇಪ್ಪತ್ತೊಂದು ದಿನಗಳವರೆಗೆ ಸಾಯಂ ಕಾಲ ಸಮಯದಲ್ಲಿ 'ಮಲ್ತೆಕುನಿಯ ನಿನಂಪೆರುಮಾಳ್' (ಉತ್ಸವಮೂರ್ತಿ) ಮೆರವಣಿಗೆಯನ್ನು ರಥಬೀದಿಯಲ್ಲಿ ಮಾಡು ವಾಗ ಉತ್ತರದ ಬೀದಿಯಲ್ಲಿ ಶಿರಿಯ ತಿರುಮಡಲ್‌ನ್ನು ಅನು ಸಂಧಿಸುತ್ತಾರೆ. ಅಧ್ಯಯನೋತ್ಸವದ ಮೊದಲದಿನ ಶ್ರೀಮಣಿ ಮಂಟಪದಲ್ಲಿ ಸ್ವಾಮಿ ಆಲಿಸಿ ಅನುಗ್ರಹಿಸಿದ ಪ್ರಬಂಧಗಳನ್ನು ಮೊದಲುಗೊಂಡು ಹಿರಿಯರ ಸಮ್ಮುಖದಲ್ಲಿ (ಮೂಲ ವಿರಾಟು) ಸಮಯಕ್ಕೆ ತಕ್ಕಂತೆ ಸಂಧರ್ಭಾನುಸಾರ ಅನುಸಂಧಿ ಸಲ್ಪಡು ತ್ತವೆ. ವಿಶ್ವಕ್ಸೇನರ ಸನ್ನಿಧಿಗೆ ಪ್ರಯಾಣ ಬೆಳಸುವಾಗ ತಿರುವಿರು ತ್ತಮವನ್ನು ಅನುಸಂಧಿಸತಕ್ಕದ್ದು. ಶ್ರೀವೇಂಕಟಾಚಲ ಪತಿಯ ದೊಡ್ಡ ಅಧ್ಯಯನೋತ್ಸವವು ಮುಕ್ತಾಯದ ದಿನ ಪ್ರತಿನಿತ್ಯ ದಂತೆ ವಿಶ್ವಕ್ಸೇನರೊಡನೆ ಭಗವದ್ರಾಮಾನುಜರೊಡನೆ ಶ್ರೀಮಣಿ ಮಂಟಪದಲ್ಲಿ ತಿರುವಾಯ್‌ಮೊಳಿ ಬಣ್ಣಿಸಿ ನಂತರ ವೇದಗಳಿಗೆ ಸಮಾಪನಮಂಗಳವನ್ನು ಜರುಗಿಸಿ, ತೀರ್ಥ, ಶ್ರೀ ಶಠಾರಿ ಪ್ರಸಾ ದವನ್ನು ವಿನಿಯೋಗವಾದ ಬಳಿಕ ಭಗವದ್ರಾಮಾನುಜರು ಮೂಲವಿರಾಟ್ ಮಂಗಳಶಾಸನವನ್ನು ಪಠಿಸಲು ಶ್ರೀಮಣಿ ಮಂಟಪದಿಂದ ವಿಜಯ ಪ್ರದಕ್ಷಿಣೆಗಳನ್ನು ಮಾಡಿ, ಜಿಯ್ಯಾರು, ಶ್ರೀವೈಷ್ಣವರು ಪ್ರಬಂಧಗಾಯಕರೆಲ್ಲರೂ ಕಲೆತು ಸ್ತೋತರಾಜಾ ನುಸಂಧಾನವನ್ನು (ಸ್ತೋತ್ರರತ್ನವನ್ನು ಶ್ರೀ ಅಳವಂದಾರು ಸ್ತೋತ್ರ) ಮಾಡಿ, ಹೊರಟು, ಶ್ರೀಕೃಷ್ಣ ಮಂಟಪದಲ್ಲಿನ ಮೂಲ ಮೂರ್ತಿಗೆ ಹಾರ ಸಮರ್ಪಿಸಿ ನಂತರ ಜಿಯ್ಯರನ್ನು ಮೊದಲು ಗೊಂಡು,ಭಗವದ್ರಾಮಾನುಜರು ಅನುಸಂಧಿಸುವಂತೆ ತಿರುಪ್ಪ ಲ್ಲಾಂಡುಯಲ್ಲಿರುವ ಎರಡು ಪಾಶುರಗಳು, ಒಳುವಿಲ್ ಕಾಲಂ, ಉಲಗಮುಂಡ, ತಾಯ್ತುಂದೆ, ಅಖಿಲ ಜಭುವನಜನ್ಮ (ಶ್ಲೋಕ), ಶರಣಾಗತಿ ಗದ್ಯದ ಪೂರ್ವ ಖಂಡ ವನ್ನಾಲಿಸಿ ಅನುಸಂಧಾನ ಮಾಡುವಾಗ ಶ್ರೀ ವೇಂಕಟಾ ಚಲಪತಿ ದಿವ್ಯಹಾರ, ಪರಿಪಟ್ಟ ವನ್ನು (ಶೇಷವಸ್ತ್ರ), ಶ್ರೀಶಠಾರಿ, ಪ್ರಸಾದ,ಧರಿಸಿ ಬಿಟ್ಟ ಪೀತವಸ್ತ್ರ ದಿವ್ಯಚರಣ ಮೊದಲಾದ ಬಹುಮಾನಗಳನ್ನು ಅನುಗ್ರಹಿಸುವ ನಂತರ ತಿರುಗಿ ಭಗವ ದ್ರಾಮಾನುಜಾಚಾರ್ಯರು ಅನುಸಂಧಿ ಸುವ ತೆರದಿ ಅಗಲ ಕಿಲ್ಲೆನ್, ಒಳುವಿಲ್ ಕಾಲಮ್, ತಾಯ್ತುಂದೆ ಯಂಬ ಮೂರನೇ ಪಾಶುರವನ್ನು ಅಖಿಲಭುವನಜನ್ಮ ಎಂಬ ಶ್ಲೋಕವನ್ನು, ಮನೋವಾಕ್ಕಾಯೈ!ಎಂಬ ಚೂರ್ಣವನ್ನು ಎಲ್ಲರೂ ಸೇರಿಸಿ ಅನುಸಂಧಿಸಿದ ನಂತರ ಸನ್ನಿಧಿಯಲ್ಲಿ ನೆರೆದ ಜನರೆಲ್ಲರು,

"ಶ್ರೀ ರಂಗರಾಜ ಚರಣಾಂಬುಜ ರಾಜಹಂಸಃ
ಶ್ರೀ ವೇಂಕಟೇಶ ಕರುಣಾಕಲಶಾರ್ಣವೇಂದುಃ
ಶ್ರೀ ದೇವರಾಜ ಜಯಡಿಂಡಿಮ ವಾಙ್ಮಯಶ್ರೀಃ
ರಾಮಾನುಜೋ ವಿಜಯತೇ ಯತಿರಾಜರಾಜಃ
ಜಯತಿ ಸಕಲ ವಿದ್ಯಾವಾಹಿನಿ ಜನ್ಮಶೈಲಃ
ಸರ್ವದೇಶದಶಾಕಾಲೇ ಷ್ವವ್ಯಾಹತಪರಾಕ್ರಮಾ
ರಾಮಾನುಜಾರ್ಯದಿವ್ಯಾಜ್ಞ ವರ್ಧತಾ ಮಭಿವರ್ಧತಾಂ"

ಶ್ರೀ ರಂಗನಾಥಸ್ವಾಮಿಯ ಚರಣ ಕಮಲಗಳೆಲ್ಲ ರಾಜ ಹಂಸನಾದವನು, ಶ್ರೀ ವೇಂಕಟೇಶನ ಕರುಣೆಗೆ ಪಾತ್ರನಾದ ಕ್ಷೀರಸಾಗರಕ್ಕೆ ಚಂದ್ರಸಾದೃಶನಾದವನು ಶ್ರೀಕಾಂಚಿಪುರ ದೇವರಾಜರಾಜಸ್ವಾಮಿಗೆ ಜಯಜಯಕಾರ ಹಾಕುವ ಡಿಂಡಿಮ ಗಳಿಂದ ಕೂಡಿದ ವಾಙ್ಮಯ ಸ್ವರೂಪನೂ,ಯತಿರಾಜರುಗಳಿಗೆ ರಾಜನಾದ ಶ್ರೀರಾಮಾನುಜಾಚಾರ್ಯರು ಸರ್ವೋತ್ಕೃಷ್ಟರಾಗಿ ವಿರಾಜಿತರಾಗಬೇಕಲ್ಲವೇ)

(ಸಕಲ ವಿದ್ಯೆ ವಿದ್ಯಮಾನಗಳಿಗೆ ಜನ್ಮ ಪರ್ವತವಾದ (ಶ್ರೀರಾಮಾನುಜಾಚಾರ್ಯರು) ಮಹಾತ್ಮರಾಗಿ ಭಾಸವಾಗು ತ್ತಾರೆ.

(ಮುಂದುವರೆಯುತ್ತದೆ)



# ಮಹಾ ಸಾಧಕ ಯತಿ ಶ್ರೀವಿಜಯೀಂದ್ರ ತೀರ್ಥರು


- ಓಂ ಪ್ರಕಾಶ್ ಭಟ್ಟ
99640 25922


ಮಹಾಭಾರತ ಯುದ್ಧವಾದ ಮೇಲೆಯೂ ಸಾವಿರಾರು ವರ್ಷಗಳ ಕಾಲ ಭರತ ಭೂಮಿಯಲ್ಲಿ ಪಾಂಡವರ ಪುಣ್ಯ ಪ್ರಭಾವದಿಂದಾಗಿ ಸುಖಸಮೃದ್ಧಿಯಿತ್ತು. ಆದರೆ ಕಲಿಕಾಲದ ಪ್ರಭಾವದಿಂದಾಗಿ ವೈದಿಕಧರ್ಮ ಶಿಥಿಲವಾಗುತ್ತಾ ಹೋದಾಗ ದಾರ್ಶನಿಕರು ತಮ್ಮ ತಮ್ಮ ಮಾತಿಗೆ ತೋಚಿದಂತೆ ಮತ - ಧರ್ಮಗಳನ್ನು ಪ್ರಚಾರ ಮಾಡಿದರು. 12 ನೇ ಶತಮಾನದ ಆದಿಯಲ್ಲಿ ಶ್ರೀಮಧ್ವಾಚಾರ್ಯರು ಉಡುಪಿಯಲ್ಲಿ ಜನಿಸಿ "ತತ್ವವಾದ" ಎಂಬ ಹೊಸ ಮಾರ್ಗ ಸಿದ್ಧಾಂತವನ್ನು ಸಜ್ಜನರಿಗೆ ಅನುಗ್ರಹಿಸಿದರು. ಹಲವಾರು ಜನರ ಮನಸ್ಸಿನಲ್ಲಿದ್ದ ಪ್ರಶ್ನೆಗಳಿಗೆ ಈ ಮತದಲ್ಲಿ ಉತ್ತರ ಸಿಕ್ಕಿದ್ದರಿಂದ ಎಲ್ಲರೂ ಶಿಷ್ಯರಾದರು. ಹೀಗೆ ಮಧ್ವಮತ ತತ್ತ್ವವಾದ ಎಲ್ಲೆಡೆ ಪ್ರಸಾರಗೊಳ್ಳುತ್ತಿತ್ತು. ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠಾಪಿಸಿ ಅಷ್ಟ ಯತಿ ಶಿಷ್ಯರನ್ನು ಪೂಜೆಗೆ ನೇಮಿಸಿ, ಪದ್ಮನಾಭತೀರ್ಥಾದಿ ಇತರ ಶಿಷ್ಯರನ್ನು ದೇಶ ದೆಲ್ಲೆಡೆ ವಿದ್ಯಾ ಪ್ರಸಾರಕ್ಕೆಂದು ನಿಯಮಿಸಿದರು. ಈ ಪರಂಪರೆಯಲ್ಲಿ ಮಾಧವತೀರ್ಥರು, ಅಕ್ಷೋಭ್ಯತೀರ್ಥರು, ಜಯತೀರ್ಥರು, ವ್ಯಾಸ ರಾಜರು ಮುಂತಾದ ಮಹಾಮಹಿಮಾನ್ವಿತ ಯತಿಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಒಮ್ಮೆ ಶ್ರೀ ವ್ಯಾಸರಾಜರು ಸಂಚಾರ ನಿಮಿತ್ತ ಒಂದು ಗ್ರಾಮಕ್ಕೆ ತೆರಳಿದಾಗ ಅಲ್ಲಿನ ಒಂದು ಕುಟುಂಬವು ವ್ಯಾಸ ರಾಜರನ್ನು ಸತ್ಕರಿಸಲು, ಪುತ್ರವಂತನಾಗು ಎಂದು ಹರಸಿದರು. ಆದರೆ ದಂಪತಿಗಳು ವೃದ್ಧರಾಗಿದ್ದರು. ಇದನ್ನು ಬಿನ್ನವಿಸಿದಾಗ, "ಈ ಮಾತನ್ನು ನಾವಾಡಿದ್ದಲ್ಲ, ಶ್ರೀಕೃಷ್ಣ ನುಡಿಸಿದ್ದು. ಯೋಚನೆ ಬಿಡಿ, ಭಗವಂತನ ಅನುಗ್ರಹದಿಂದ ಜನಿಸುವ ಮಗು ಭಗ ವಂತನ ಸೇವೆಗೆ ಇರಲಿ, ಆ ಮಗುವನ್ನು ನಮಗೇ ಅರ್ಪಿಸಿ" ಎಂದರು. ಕಾಲಾಂತರದಲ್ಲಿ ಪ್ರಸವವಾಗಿ ಮಗುವಿಗೆ ಸಂಸ್ಕಾರ ನೀಡಿ, ಉಪನಯನ ಮಾಡಿಸಿ, ಯತಿದೀಕ್ಷೆ ನೀಡಿ ವಿಷ್ಣು ತೀರ್ಥರನ್ನಾಗಿ ಮಾಡಿದರು. ತಾವೇ ಸ್ವತಃ ವಿದ್ಯಾಭ್ಯಾಸ ನೀಡಿ ಸಕಲ ಶಾಸ್ತ್ರದಲ್ಲಿ ಪಾರಂಗತರಾಗುವಂತೆ ನೋಡಿಕೊಂಡರು. ಸಕಲ ವಿದ್ಯೆಗಳನ್ನು ಧಾರೆಯೆರೆದರಲ್ಲದೆ ಚತುಃಷಷ್ಠಿಕಲಾ ಕೋವಿದರನ್ನಾಗಿ ಮಾಡಿ ಎಲ್ಲಾ ರೀತಿಯಿಂದಲೂ 'ವಿಜಯಿ' ಗಳಾಗುವಂತೆ ಬೆಳೆಸಿದರು.

ಮುಂದೆ ಶ್ರೇಷ್ಠ ಜ್ಞಾನಿಗಳೂ, ತಪಸ್ವಿಗಳೂ ಆದ ಶ್ರೀ ಸುರೇಂದ್ರ ತೀರ್ಥರು ವ್ಯಾಸರಾಜರ ಸಂಪರ್ಕಕ್ಕೆ ಬಂದರು. ಮುಂದಿನ ದಿನಗಳನ್ನು ಯೋಚಿಸಿ, ತತ್ವ ಪ್ರಸಾರ ಅದರ ರಕ್ಷಣೆಯ ಅನಿವಾರ್ಯತೆಯನ್ನು ಕಂಡುಕೊಂಡು ಯೋಗ್ಯ ಶಿಷ್ಯನ ಹುಡುಕಾಟದಲ್ಲಿರುವುದನ್ನು ತಿಳಿಸಿದಾಗ ಅವರ ಮನದಿಂಗಿತವನ್ನು ತಿಳಿದು ತಮ್ಮ ಗರಡಿಯಲ್ಲಿ ಬೆಳೆದ ವಿಷ್ಣುತೀರ್ಥರನ್ನು ಅವರಿಗೆ ಸಮರ್ಪಿಸಲು ವ್ಯಾಸರಾಜರು ಸಂತೋಷದಿಂದ ಒಪ್ಪಿದರು. ವಿಷ್ಣುತೀರ್ಥರ ಜ್ಞಾನ-ತಪಸ್ಸು ಮತ್ತು ತತ್ವ ಜ್ಞಾನ ರಕ್ಷಣೆಯಲ್ಲಿರುವ ಬದ್ಧತೆ ಎಲ್ಲರನ್ನು ಆಕರ್ಷಿಸಿತ್ತು. ವ್ಯಾಸ ರಾಜರು ದಂಡಪಲ್ಲಟ ಮಾಡಿ ವಿಜಯೀಂದ್ರತೀರ್ಥ ಎಂದು ನಾಮಕರಣ ಮಾಡಿ ಸುರೇಂದ್ರತೀರ್ಥರಿಗೆ ಉತ್ತರಾಧಿಕಾರಿ


ಯಾಗಿ ನೀಡಿದರು. ಹೀಗೆ ವಿಜಯೀಂದ್ರತೀರ್ಥರ ಅಪರೂಪದ ಜೀವನದ ಒಂದು ಘಟ್ಟ ಇಲ್ಲಿಗೆ ಮುಗಿದು, ನಂತರ ಯತ್ಯಾಶ್ರಮ ನಿಮಿತ್ತ ಎಲ್ಲಾ ಕಡೆ ಸಂಚಾರ ಮಾಡುತ್ತಾ ಮಠದ ನಿರ್ವಹಣೆ ಯನ್ನೂ ವಹಿಸಿಕೊಂಡರು.

ಎಲ್ಲಾ ಕಡೆ ಸಂಚಾರ ಮಾಡುತ್ತಾ ಮಧ್ವಮತ, ವೈಷ್ಣವ ಧರ್ಮ, ವೈಷ್ಣವ ಸಜ್ಜನರ ರಕ್ಷಣೆಗೆ ಶಾಸ್ತ್ರವನ್ನು, 64 ವಿದ್ಯೆ ಗಳನ್ನೂ ಪಣಕ್ಕಿಟ್ಟು ಹೋರಾಡಬೇಕಾಯಿತು. ಇವರನ್ನು ಸೋಲಿಸಲು ಎಲ್ಲಾ ರೀತಿಯ ಕೃತ್ರಿಮ ವಿಧಾನ,ಬಲ ಪ್ರಯೋಗಗಳನ್ನು ನಡೆಸಿದರೂ ಹರಿ-ಗುರುಗಳ ಅನುಗ್ರಹ ದಿಂದ ಎಲ್ಲರನ್ನೂ ಸೋಲಿಸಿದರು. ತಂತ್ರ - ವಾಮಾಚಾರ ಇಂದ್ರಜಾಲ ಶಿಲ್ಪಕಲೆ - ದೊಂಬರಾಟ ಜ್ಯೋತಿಷ್ಯ ಗಣಿಕೆಯ ಪ್ರಲಾಪ-ಸಂಗೀತ ಕಲೆ ನೇಕಾರಿಕೆ-ಸರ್ಪವಿದ್ಯೆ-ವಿಷ ಚಿಕಿತ್ಸೆ ಮುಂತಾದವರನ್ನು ಎದುರಿಸಿ ಅವರೆಲ್ಲರನ್ನೂ ಚತುಃಷಷ್ಠಿ ಕಲಾ ನಿಪುರಣರಾದ ಶ್ರೀ ವಿಜಯೀಂದ್ರರು ಗೆದ್ದರು.

ಕುಂಭಕೋಣಂನಲ್ಲಿ ಮತೀಯ ಹಾವಳಿಗಳನ್ನು ಶಮನಗೊಳಿಸಿ ಸೌಹಾರ್ದ ವಾತಾವರಣ ಸೃಷ್ಟಿಸಿ ಎಲ್ಲರೂ ನೆಮ್ಮದಿಯಿಂದ ಜೀವನ ಮಾಡುವಂತೆ ಏರ್ಪಾಡು ಮಾಡಿ ದರು. ಅಲ್ಲೇ ವಿದ್ಯಾಮಠವನ್ನೂ ಸ್ಥಾಪಿಸಿ ಸಕಲ ಶಾಸ್ತ್ರಗಳನ್ನು ಕಲಿಸುವ ಕೇಂದ್ರವನ್ನು ಪ್ರಾರಂಭಿಸಿ ಶಾಸ್ತ್ರ ರಕ್ಷಣೆ ಮಾಡಿದರು. ಕುಂಭಕೋಣಂನ ಈ ಅಮೋಘ ಬದಲಾವಣೆಯನ್ನು ಗಮನಿಸಿದ ವಿಜಯನಗರದ ರಾಮ ರಾಜನು ಸಾಮಂತ ನಾದ ಚೆವ್ವಪ್ಪ ನಾಯಕನ ಮೂಲಕ ಇವರನ್ನು ಆಸ್ಥಾನಕ್ಕೆ ಬರುವಂತೆ ಪ್ರಾರ್ಥಿಸಿ ಅವರಿಗೆ ರತ್ನಾಭಿಷೇಕವನ್ನೂ ನಡೆ ಸಿದನು.

ಅಪ್ಪಯ್ಯ ದೀಕ್ಷಿತರ ಮತ್ತು ಶ್ರೀ ವಿಜಯೀಂದ್ರರ ಸಮಾಗಮವು ಬಹಳ ಪ್ರಸಿದ್ಧ ದೀಕ್ಷಿತರು ಒಂದೆರಡು ಸಲ ವಲ್ಲ,ಹಲವಾರು ಬಾರಿ ಚರ್ಚೆವಾದಕ್ಕೆ ಬಂದಾಗಲೂ ತಾಳ್ಮೆ ಯಿಂದಲೇ ಎಲ್ಲದಕ್ಕೂ ಉತ್ತರಿಸಿ ಅವರನ್ನು ಪರಾಜಿತ ಗೊಳಿ ಸಿದ್ದರು. ವಿದ್ಯಾ ಪಕ್ಷಪಾತಿಗಳಾದ ಶ್ರೀ ವಿಜಯೀಂದ್ರರು ಅವರ ವಿದ್ವತ್ತನ್ನು ಮೆಚ್ಚಿ ಕೈತುಂಬಾ ಬಹುಮಾನವನ್ನೂ ಕೊಡು ತ್ತಿದ್ದರು.

ವಿಜಯೀಂದ್ರರ ಜೀವನದ ಮಹಾಸಾಧನೆಗಳಲ್ಲಿ ಅವರ ಗ್ರಂಥರಚನಾ ಕೌಶಲವೂ ಅಮೋಘವಾಗಿ ಕಾಣು ತ್ತದೆ. 104 ಗ್ರಂಥಗಳನ್ನು ಬರೆದಿದ್ದಾರೆ. ಸೂತ್ರ ಪ್ರಸ್ಥಾನ, ಶ್ರುತಿ-



ಉಪನಿಷತ್ ಪ್ರಸ್ಥಾನ,ಗೀತಾ ಪ್ರಸ್ಥಾನ, ವ್ಯಾಸತ್ರಯ ಟಿಪ್ಪಣಿ ಗಳು, ಖಂಡನ - ಮಂಡನ ಗ್ರಂಥಗಳು, ಪರಮತ ಸಂಗ್ರಹ ಗ್ರಂಥ, ಸ್ವತಂತ್ರ ಗ್ರಂಥಗಳು, ಸ್ತೋತ್ರ - ಕಾವ್ಯ - ನಾಟಕ - ದಾಸಸಾಹಿತ್ಯ ಕೃತಿಗಳನ್ನು ರಚಿಸಿ ಶತಾಧಿಕ ಗ್ರಂಥಕರ್ತೃ ಗಳಾಗಿದ್ದಾರೆ. ಕಂಬಾಲೂರು ರಾಮಚಂದ್ರತೀರ್ಥರು, ತರಂ ಗಿಣಿ ರಾಮಾಚಾರ್ಯರಂತಹ ಹಲವಾರು ಶಿಷ್ಯರನ್ನೂ ಹೊಂದಿ ದ್ದರು.

ತಮ್ಮ ಬಳಿಯಲ್ಲೇ ಅಧ್ಯಯನ ಮಾಡಿದ ಸುಧೀಂದ್ರ ತೀರ್ಥರಿಗೆ ಮಠದ ಎಲ್ಲಾ ಜವಾಬ್ದಾರಿಗಳನ್ನೂ ಒಪ್ಪಿಸಿ 90 ವರ್ಷಕ್ಕಿಂತಲೂ ಹೆಚ್ಚು ತುಂಬು ಜೀವನ ನಡೆಸಿದ ಶ್ರೀ ವಿಜ ಯೀಂದ್ರತೀರ್ಥರು ಕುಂಭಕೋಣಂನಲ್ಲಿ ವೃಂದಾವನಸ್ಥ ರಾದರು. ಅವರ ದೊಡ್ಡ - ಭವ್ಯ ವೃಂದಾವನ ಅಲ್ಲೇ ಇದೆ.

ಹೀಗೆ ವಿದ್ವಾಂಸರಿಗೆ ಆಸರೆಯಾಗಿ, ಮಧ್ವಮತದ ಉದ್ಧಾರಕರಾಗಿ ತಿರುಪತಿ ಶ್ರೀನಿವಾಸನ ಮಹಾಭಕ್ತರಾಗಿ, ರಾಜ ಮಹಾರಾಜರ ಮನ್ನಣೆ ಗಳಿಸಿದ ವಾದಿಗಳಿಗೆ ಪ್ರಚಂಡರಾದ, ಶತಾಧಿಕ ಗ್ರಂಥ ಕರ್ತೃಗಳಾದ ಚತುಃಷಷ್ಠಿಕಲಾ ನಿಪುಣರಾದ ಶ್ರೀವಿಜಯೀಂದ್ರತೀರ್ಥರ ಸಾಧನೆ - ಮಹಾತ್ಮೆಗಳು ಅಪಾರ. ಅದನ್ನು ನಾವು ಆದಷ್ಟು ತಿಳಿದುಕೊಳ್ಳಲು ಪ್ರಯತ್ನಿಸೋಣ. ಅವರ ಆರಾಧನಾ ಪ್ರಯುಕ್ತ ಅವರ ಚರಮ ಶ್ಲೋಕವನ್ನಾ ದರೂ ಪಠಿಸಿ ಪಾವನರಾಗೋಣ.

ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ ।
ನಮತಾಂ ಕಲ್ಪತರವೇ ಜಯೀಂದ್ರಗುರವೇ ನಮಃ॥



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಇದನ್ನು ಗಮನಿಸುವಾಗ ಮತ್ತೊಂದು ವಿಚಾರ ಜ್ಞಾಪಕಕ್ಕೆ ಬರುತ್ತೆ. ಒಂದು ಕಾಲಕ್ಕೆ ತಿರುಪತಿ ಯಾತ್ರೆಯೇ ಕಷ್ಟಕರವಾಗಿತ್ತು. ಜನ ಗುಂಪು ಗುಂಪಾಗಿ ಬೆಟ್ಟವನ್ನು ಹತ್ತುತ್ತಿದ್ದರು, “ಗೋವಿಂದಾ, ಗೋವಿಂದಾ” ಎಂದು ಅವರು ಕೂಗುತ್ತಾ ಸಾಗುತ್ತಿದ್ದರೆ ಅವರ ಕೂಗು ಗಗನವನ್ನು ಬೇಧಿಸುತ್ತಿದ್ದಿತು. ಕುಲಶೇಖರ ಆಳ್ವಾರ್ ಹೇಳುವಂತೆ ‘ಘುಷ್ಯತೇಯಸ್ಯನಗರೇ ರಂಗ ಯಾತ್ರಾ ದಿನೇ ದಿನೇ’ ಎನ್ನುವಂತೆ ರಂಗಯಾತ್ರಿಗಳ ಕೊರಲು ಧ್ವನಿಯಿಂದ ಇಡೀ ಶ್ರೀರಂಗವೇ ತುಂಬಿರುತ್ತಂತೆ! ತಿರುಪತಿ ಒಂದು ಕಾಲಕ್ಕೆ ಗೋವಿಂದ ನಾಮಸ್ಮರಣದಿಂದ ತುಂಬಿರುತ್ತಿತ್ತು. ಇಂದಿನ ದಿನಗಳಲ್ಲಿ ಈ ಸಂಭ್ರಮ ಕಂಡು ಬರುವುದಿಲ್ಲ. ಜನರೂ ಮೂರು ನಾಲ್ಕು ಸಂಸಾರದ ಮಂದಿಮಾರು ಒಟ್ಟಾಗಿ ಸೇರಿಕೊಂಡು ಯಾತ್ರೆಗೆ ಹೋಗುತ್ತಿದ್ದರು. ಇಂದಿನ ದಿನಗಳಲ್ಲಿ ಆ ಸಂಭ್ರಮ ಕಂಡು ಬರುವುದಿಲ್ಲ, ನೋಡಬೇಕೆಂದರೂ ಸಿಕ್ಕುವುದಿಲ್ಲ. ತಿರುಮಲೆ ದೇವಸ್ಥಾನದಲ್ಲಿ ಕೂಡ ಇಂದಿನ ಸುಸಂಸ್ಕೃತರೆಂದು ಹೇಳಿಕೊಳ್ಳುವ ಯಾತ್ರಾರ್ಥಿಗಳು ಗೋವಿಂದ ನಾಮ ಸ್ಮರಣೆಗೆ ಹಿಂತೆಗೆಯುತ್ತಾರೆ. ಇದು ನಾವು ಮುಂದುವರೆದಿರುವ ಸ್ಥಿತಿಯನ್ನು ತೋರಿಸುತ್ತದೆ. ಅಂತು ಅಂದು ಅವರು ತಿರುಪತಿ ಬೆಟ್ಟವನ್ನು ಹತ್ತಿ ಹೋಗಬೇಕಾದರೆ ಜೋರಾಗಿ ಈ ಗೋವಿಂದ ನಾಮಸ್ಮರಣೆ ಮಾಡುತ್ತಿದ್ದರು. ಇದರ ಕಾರಣ ಹಲವು ಬಗೆಯದು. ಒಂದು ಭಕ್ತಿ ಮತ್ತೊಂದು ದೀರ್ಘ ಪ್ರಯಾಣವು ಗಣನೆಗೆ ಬರದಿರಲು ಮತ್ತೊಂದು ಆಯಾಸ ತಿಳಿಯದಿರಲೆಂಬುದಾಗಿ ಮಗದೊಂದು ಕಾಡಿನ ಮಧ್ಯೆ ಸಾಗಬೇಕು. ಕಾಡಿನ ಮರ, ಗಿಡ, ಪೊದೆಗಳಲ್ಲಿ ಹುಲಿ, ಸಿಂಹ ಮುಂತಾದ ಕಾಡು ಪ್ರಾಣಿಗಳು ಅಡಗಿ ಕುಳಿತಿರುವ ಸಂಭವವುಂಟು.ಅವುಗಳಿಗೆ ತಾವು ಗುಂಪಾಗಿ ಹೋಗುತ್ತಿರುವುದರಿಂದ ಹೆದರಿಕೆ ಉಂಟು ಮಾಡಲು ಈ ಉಪಾಯ ಮತ್ತೊಂದು ಕಾರಣವೂ ಉಂಟು. ಕಳ್ಳಕಾರರು ಕಾಡಿನಲ್ಲಿ ಅವಿತು ಕುಳಿತು ಯಾತ್ರಾರ್ಥಿಗಳ ಮೇಲೆ ಎರಗುತ್ತಿದ್ದ ಸಂದರ್ಭವೂ ಇದ್ದಿತು. ಜನ ಗುಂಪಾಗಿ ಹೋದರೆ ಅವರು ಮೇಲೆ ಕವಿಯಲು ಹಿಂಜರಿಯುತ್ತಿದ್ದರು. ತಮ್ಮ ಗುಂಪು ದೊಡ್ಡದಾಗಿದೆ ಎಂದು ತೋರ್ಪಡಿಸಿಕೊಳ್ಳಲು ಯಾತ್ರಾರ್ಥಿಗಳು ಗೋವಿಂದ ನಾಮಸ್ಮರಣೆಯನ್ನು ಜೋರಾಗಿ ಮಾಡುತ್ತಿದ್ದುದು. ತಾವು ಎಂತಹ ಅಪಾಯವನ್ನು ಎದುರಿಸಲೂ ಸಿದ್ಧರಿದ್ದೇವೆ ಎನ್ನುವ ಎಚ್ಚರಿಕೆ ಅದು. ಈ ರೀತಿಯ ತಿರುಪತಿ ಯಾತ್ರೆಯ ರಿವಾಜು ಈಗ್ಗೆ ೫೦-೬೦ ವರ್ಷಗಳ ಹಿಂದೆಯೂ ರೂಢಿಯಲ್ಲಿದ್ದಿತು. ಆಗ ಈಗಿನಂತೆ ಬಸ್ ಸೌಕರ್ಯವಿರಲಿಲ್ಲ. ಹೀಗೆ ಯಾತ್ರೆ ಮುಗಿಸಿಕೊಂಡು ಬಂದವರನ್ನು ಊರಿನ ಜನ ಸಂಭ್ರಮದಿಂದ ಸ್ವಾಗತಿಸಿ ಮನೆಗಳಲ್ಲಿ ಸಮಾರಂಭಗಳನ್ನು ನಡೆಸುತ್ತಿದ್ದರು. ಕಾರಣ ಅವರು ದೇವರ ದರ್ಶನ ಪಡೆದು ಪುಣ್ಯಗಳಿಸಿರುವ ಹಿರಿಯರು ಎಂಬುದಾಗಿ, ಸಾಲದ್ದಕ್ಕೆ ಜೀವಮಾನದಲ್ಲಿ ಒಮ್ಮೆಯೋ, ಎರಡು ಸಲವೋ ಸಂಘಟಿಸಬಹುದಾದ ಇಂತಹ ಸುಸಂಧಿಯನ್ನು ಸುಸೂತ್ರವಾಗಿ ಸಾಂಗ ಮಾಡಿ ಕೊಂಡು ಬಂದಿರುವ ಸಂತೋಷ. ಪ್ರಾಣಾಪಾಯವಿಲ್ಲದೆ ಕಳ್ಳ

ಕಾಕರು, ವನ್ಯ ಮೃಗಗಳ ಉಪಟಳಗಳಿಂದ ಪಾರಾಗಿ ಕ್ಷೇಮವಾಗಿ ಊರಿಗೆ ಹಿಂತಿರುಗಿದರಲ್ಲ, ಅದೇ ಪುನರ್ಜನ್ಮ ಬಂದಂತೆ ಎನ್ನುವ ಮತ್ತೊಂದು ಹಿರಿಯದಾದ ಭಾವ. ಈ ಎಲ್ಲ ಭಾವಗಳೊಂದಿಗೆ ತಿರುಪತಿ ಯಾತ್ರೆ ನೆಲಸಿತ್ತೆಂದು ಬೇರೆಯಾಗಿ ನಾವು ಹೇಳಬೇಕಾಗಿಲ್ಲ.

ಇಷ್ಟೊಂದು ಸಂಭ್ರಮವಾದ ತಿರುಪತಿ ತಿಮ್ಮಪ್ಪನಿಗೆ ಪ್ರಾಚೀನ ಕಾಲದಿಂದಲೇ ವೈಭವದ ಜಾತ್ರೆ, ಗುಡಿಗೋಪುರ ಇದ್ದಿರಬಹುದಾದ ಸಾಧ್ಯತೆ ಮೇಲಿನ ವಿಮರ್ಶನದಿಂದ ಲಭಿಸುತ್ತದೆ. ಆದರೆ ಆ ಗುಡಿ ಗೋಪುರಗಳು ಕಾಲಕ್ರಮದಲ್ಲಿ ಬಿದ್ದು ಹೋಗಿಯೋ, ಶಿಥಿಲವಾಗಿಯೋ ಮತ್ತೆ ಬೇರೆ ಬೇರೆ ಕಾಲಗಳಲ್ಲಿ ಜೀರ್ಣೋದ್ಧಾರಗೊಂಡು ಇರಬಹುದಾದ ಕಲ್ಪನೆಗೆ ಸಾಕಷ್ಟು ಪೋಷಣೆ ದೊರೆಯುತ್ತದೆ.

ಇನ್ನು ಗುಡಿ ಇದ್ದರೆ ಅರ್ಚಕ, ಅರ್ಚಕನಿದ್ದರೆ ಪೂಜೆ ಎಲ್ಲ ಕ್ರಮವಾಗಿಯೇ ಸಾಗುತ್ತಿತ್ತು.ಜನ ಗರ್ಭಗುಡಿಯಿಂದ ಹೊರಗೆ ನಿಂತು ದರ್ಶನ ಪಡೆದರೂ ಅವರೇ ಪೂಜೆ ನಡೆಸಿದಂತೆಯೇ ಅರ್ಥ. ಈಗಲೂ "ಅವರು ಸೇವೆ ನಡೆಸಿದರು" ಎನ್ನುವ ಮಾತಿಗೆ ಅವರ ಪೂಜೆಯನ್ನು ಅರ್ಚಕ ಮುಖೇನವೋ ದೇವಸ್ಥಾನದ ಸಿಬ್ಬಂದಿಯ ಮೂಲಕವೋ ನಡೆಸುವುದು ಎಂದೇ ಅರ್ಥ. ಹೀಗೆ ಎಲ್ಲ ಜಾತಿಯ ಭಕ್ತರೂ ಹಿಂದಿನಿಂದಲೇ ನೆರೆದು ಎಲ್ಲರಿಗೂ ದೇವರಾಗಿ ಮೆರೆದ ಈ ಸ್ವಾಮಿಯನ್ನು ಆಳ್ವಾರ್ ಆಗಲೇ "ಅವರವರ್ ತಾಮ್ ತಾಮ್ ಅರಿಂದ ವಾರೇತ್ತಿ ಇವರಿವರ್ ಎಂಬೆರುಮಾನ್ ಎನ್ರುಂ" ಎಂದು ಹೇಳಿರುವುದರಲ್ಲಿ ಆಶ್ಚರ್ಯವೇನು? ಈಗಲೂ ತಿರುಪತಿ ತಿಮ್ಮಪ್ಪನಿಗೆ ಭಕ್ತರು ಹಲವಾರು ಜಾತಿ ಪಂಥಗಳಿಗೆ ಸೇರಿದವರು. ಅವರು ತಿರುಪತಿಗೆ ಹರಕೆ ಹೊತ್ತು ಯಾತ್ರೆ ಹೋಗಿ ದೇವರಿಗೆ ನಡೆದುಕೊಳ್ಳುವುದನ್ನು ನಾವು ಕಾಣಬಹುದು. ಅವರವರ ಮನಸ್ಸಿನಲ್ಲಿ ಆ ದೇವರು ತಮ್ಮವನೆಂದೇ ಭಾವನೆ ತುಂಬಿರುತ್ತದೆ. ಅವರವರ ಭಾವನೆಗಳಿಗನುಸಾರವಾಗಿ ಆ ದೇವರನನ್ನು ಪೂಜಿಸುತ್ತಾರೆ, ಎಂದರೆ ಅವರೇ ಗರ್ಭಗೃಹವನ್ನು ಹೊಕ್ಕು ದೇವರನ್ನು ಮುಟ್ಟಿಯೆ ಪೂಜಿಸಬೇಕೆಂಬ ಅರ್ಥ ಎಲ್ಲಿದೆ? ಜನ ಧೂಪ ದೀಪಾದಿ ಹಣ್ಣು ಹಂಪಲನ್ನೊಯ್ದು ಅರ್ಚಕನ ಮೂಲಕ ಪೂಜೆ ಸಲ್ಲಿಸಿದರೂ ಕೂಡ ತಾವೇ ಪೂಜೆ ಸಲ್ಲಿಸಿದೆವೆಂದು ಹೇಳಿಕೊಳ್ಳುವುದು. ತಾವೇ ಪೂಜೆ ಸಲ್ಲಿಸಿದರೂ ಕೂಡ ತಾವೇ ಪೂಜೆ ನಡೆಸಿದೆವೆಂದು ತೃಪ್ತಿಪಟ್ಟುಗೊಳ್ಳುವುದು ಈ ರೀತಿಯ ಮುಕ್ತವಾದ ಸೇವೆ ತಿರುಮಲೆಯಲ್ಲಿ ತಿ.ತಿ.ದೇ., ಆಡಳಿತ ಬರುವವರೆಗೂ ಜಾರಿಯಲ್ಲಿತ್ತು. ಆ ಸೇವೆಗೆ ಒಂದು ಕಾಲಕ್ಕೆ 'ದೊಂಬಿ ಸೇವೆ', 'ಧರ್ಮಸೇವೆ' ಎನ್ನುವ ಹೆಸರಿದ್ದಿತು. ಆದರೆ ಆ ದೊಂಬಿಯಲ್ಲೂ ಜನ ಸಾಕಷ್ಟು ಕಾಲ ನಿಂತು ಮನದಣಿಯೆ ದರ್ಶಿಸಿ ಆನಂದ ತೃಪ್ತಿಗಳನ್ನು ಹೊಂದುತ್ತಿದ್ದರು. ಅಷ್ಟೋತ್ತರಾದಿಗಳನ್ನು ನೆರವೇರಿಸಿಕೊಂಡು ತಾವೇ ತಂದು ನೀಡಿದ ಹಣ್ಣು ಹಂಪಲುಗಳನ್ನು ನಿವೇದನ ಮಾಡಿಸಿ ಪ್ರಸಾದವನ್ನು ಸ್ವೀಕರಿಸಿ ತೃಪ್ತಿಯಿಂದ ಹಿಂತಿರುಗುತ್ತಿದ್ದರು. ಈಗಿನ ವ್ಯವಸ್ಥೆಯಲ್ಲಿ ಈ ಮುಕ್ತ ಅವಕಾಶಾದಿಗಳು ಮಾಯವಾಗಿ ಬಿಟ್ಟು ಇರುವುದು ಭಕ್ತಾದಿಗಳ ಸೌಭಾಗ್ಯವೋ ದೌರ್ಭಾಗ್ಯವೋ ಹೇಳಲು ಶಕ್ತನಲ್ಲ. ಜನರೇ ಬೆಳಸಿಕೊಂಡ ಕಟ್ಟುಪಾಡಿಗೆ ವಿಮರ್ಶೆ ಮಾಡಿದರೂ ಫಲವಿಲ್ಲ.

ಮತ್ತೊಂದು ಗೊಂದಲಮಯವಾದ ಸನ್ನಿವೇಶವನ್ನುಶ್ರೀ ಪಿ. ಸೀತಾಪತಿಯವರು ತಮ್ಮ Sri Venkateswara ಪುಸ್ತಕದಲ್ಲಿ ೨೭ ರಿಂದ ೨೯ ವರೆಗಿನ ಪುಟಗಳಲ್ಲಿ ಪ್ರಸ್ತಾಪಿಸುವುದರ ಮೂಲಕ ಎತ್ತಿರುತ್ತಾರೆ.

We have then the more reliable evidence of the Alwars. It is well known that the early Alwars who were themselves Vaishnavas have in the songs composed by them conceded the 'Hari Hara' aspects of the Lord of Tirumalai - Thus poygai Alwar sings about the Lord of Tirumalai as follows:

"His name Aran (Haran) and Naranan (Narayanan) ; His Vehicle, the Bull and the Bird; His word the Book and Morai; His house of residence, the Hill (Kailasa) and the waters (ocean) ; His Function destruction and protection; the weapon in hand the trident - spear and the disc; His form, my though one is fire and dark colud." (History of Tirupati by Dr. S. Krishnaswamy Ayyanagar 1952 , page 30).

There are several other verses by the above alwar in the same strain.

The two other Alwars Bhutam Alwar and pay . Alwar have sung several verses in the same strain.

" He has in his form the flowing matted locks (Jatai) the high peaked crown ; The shining dagger and the chakram; the snake coiling him and the golden sutram round his waist. In him, my father on Thirumalai, the two forms have gracfully blended into one" (Pay Alwar's verse quoted from pages 69-70. History of Tirupati by T.K.T. Veera Raghavacharya 1953).

(ಮುಂದುವರೆಯುತ್ತದೆ)



## 108 ದಿವ್ಯ ದೇಶಗಳು

# ತಿರುಚ್ಚೇರೈ

- ಆಚಾರ್ಯ ಚಕ್ರವರ್ತಿ ರಂಗನಾಥನ್
ಕನ್ನಡಾನುವಾದ - ಸೂರ್ಯವಂಶಿ

ಶ್ರೀಮತ್ಸಾರ ಸರೋಜನೀತಟ ಭುವಿ ಶ್ರೀಸಾರನಾಥೋ ಹರಿಃ
ಪುಣ್ಯಂ ಸಾರವಿಮಾನಮತ್ರ ಮಹಿಷೀ ಶ್ರೀಸಾರನಾಯಕ್ಯಸೌ।
ಕ್ಷೇತ್ರಂ ಸಾರಮ್ ಅತೀವ ಸಹ್ಯಗಿರಿಜಾ ಕೃತ್ವಾತಪೋ ದುಷ್ಕರಂ ।
ಗಂಗಾ ಖ್ಯಾತಿಮ್ ಅವಾಪ ತತ್ರ ಹರಿಣಾ ಪ್ರಾಚೀ ಮುಖೇನ ಅದರತ್॥

ಭಗವಂತನು ಮಾನವನನ್ನು ನಿಸ್ಸಾರವಾದ ಈ ಸಂಸಾರ ಸಾಗರದಿಂದ ಕಾಪಾಡಬೇಕೆಂದೇ ಭೂಲೋಕದಲ್ಲಿ ನೂರಾಎಂಟು ದಿವ್ಯಕ್ಷೇತ್ರಗಳಲ್ಲಿ ನೆಲೆಸಿದ್ದಾನೆ. ಆ ಪರಮೋತ್ಕೃಷ್ಟವಾದ ಕ್ಷೇತ್ರಗಳಲ್ಲಿ "ತಿರುಚ್ಚೇರೈ" ಕೂಡಾ ಒಂದು. ಈ ಕ್ಷೇತ್ರವು ಕುಂಭಕೋಣದ ಪೂರ್ವ - ದಕ್ಷಿಣ ದಿಕ್ಕಿಗೆ ಹದಿನೈದು ಕಿಲೋಮೀಟರ್ ದೂರದಲ್ಲಿ ಎರಡು ನದಿಗಳ ನಡುವೆ ಇರುವ "ನಾಟ್ಯಕೋವಿಲ್" ಎಂಬ ದಿವ್ಯದೇಶದ ಸಮೀಪದಲ್ಲಿ ಐದು ಕಿಲೋಮೀಟರ್ ದೂರದಲ್ಲಿ ಮೂರು ಪ್ರಾಕಾರಗಳನ್ನು, ಎರಡು ರಾಜಗೋಪುರಗಳನ್ನು ಒಳಗೊಂಡಂತಹಾ ಅದ್ಭುತವಾದ ಪ್ರಕೃತಿ ಶೋಭೆಯ ನಡುವೆ ವಿರಾಜಮಾನವಾಗಿದೆ. ಈ ಕ್ಷೇತ್ರಕ್ಕೆ ಸಾರಕ್ಷೇತ್ರವೆಂದೂ, ಪಂಚಸಾರ ಕ್ಷೇತ್ರ, ಚೇರೈ ಎಂಬ ಹೆಸರುಗಳಿವೆ.

ಸ್ಥಳ ಪುರಾಣದ ಪ್ರಕಾರ ವೇದಗಳನ್ನು ಕಾಪಾಡಬೇಕೆಂದು ಸಂಕಲ್ಪಿಸಿದ ಬ್ರಹ್ಮದೇವನು ಆ ವೇದಗಳನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಭದ್ರವಾಗಿರಿಸಬೇಕೆಂದುಕೊಂಡು, ಒಂದು ಮಡಿಕೆಯನ್ನು ತಯಾರಿಸಲಾರಂಭಿಸಿದ ಎಷ್ಟೇ ಪ್ರಯತ್ನಿಸಿದರೂ ಆ ಮಡಿಕೆ ಸಿದ್ಧವಾಗಲಿಲ್ಲ. ಈ ರೀತಿ ಅನೇಕ ಮಡಿಕೆಗಳನ್ನು ತಯಾರುಮಾಡಿದ. ಆದರೆ ಅವು ಯಾವುವೂ ಸರಿಯಾಗಿ ಸಿದ್ಧವಾಗಲಿಲ್ಲ. ಇನ್ನು ಈ ವೇದಗಳನ್ನು ಕಾಪಾಡುವುದಕ್ಕೆ ವೇದ ನಾಯಕನಾದ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದಾಗ, ದೇವದೇವನು ತಾನು ನೆಲೆಸಿರುವಂತಹಾ ಸ್ಥಳದಲ್ಲಿನ ಮಣ್ಣಿನ ಮೂಲಕ ಈ ಮಡಿಕೆಯನ್ನು ತಯಾರಿಸಬೇಕೆಂದು ಆದೇಶಿಸಿದ. ಬ್ರಹ್ಮದೇವನು ಭಗವಂತನ ಆಜ್ಞೆಯ ಪ್ರಕಾರ ಸಾರವಾದ ವೇದಗಳನ್ನು ಕಾಪಾಡುವುದಕ್ಕೆ ಈ ಸಾರವಂತವಾದ ಭೂಮಿಯಿಂದ ಮಣ್ಣನ್ನು ತೆಗೆದುಕೊಂಡು ಮಡಿಕೆಯನ್ನು ತಯಾರಿಸಿದ. ಬ್ರಹ್ಮಾಂಡಪುರಾಣದಲ್ಲಿ ಆರು ಅಧ್ಯಾಯಗಳಲ್ಲಿ ಈ ವಿಷಯ ಹೇಳಲಾಗಿದೆ. ಬ್ರಹ್ಮದೇವನು ಸಾರವಂತವಾದ ವೇದಗಳನ್ನು ಆ ಊರಿನ ಅಂದರೆ ಆ ಕ್ಷೇತ್ರದ ಮಣ್ಣಿನಿಂದ ತಯಾರಿಸಿ ಮಡಿಕೆಯಲ್ಲಿ ಇರಿಸಿ ಕಾಪಾಡಿದ್ದನಾದ್ದರಿಂದ ಆ ಕ್ಷೇತ್ರಕ್ಕೆ ಸಾರಕ್ಷೇತ್ರವೆಂದು, ಸಾರ ಪುಷ್ಕರಿಣಿ ಎಂದು ಕರೆಯುತ್ತಾರೆ.

ಬ್ರಹ್ಮದೇವನಿಗೆ ವೇದಗಳನ್ನು ಕಾಪಾಡುವುದಕ್ಕೆ ಸಹಕರಿಸಿದ ಭಗವಂತನು ಈ ಕ್ಷೇತ್ರದಲ್ಲಿ ಸಾರನಾಥನೆಂದು ನೆಲೆಸಿ ಎಲ್ಲರನ್ನೂ ಅನುಗ್ರಹಿಸುತ್ತಿದ್ದಾನೆ. ಸಾರನಾಥನಿಗೆ ಎಲ್ಲಿಲ್ಲದ ವೈಭವ, ಸ್ವಾಮಿಯ ಪಕ್ಕದಲ್ಲಿ ಅಮ್ಮನವರು ಸಾರನಾಯಕಿಯಾಗಿ ಶ್ರೀದೇವಿ, ಭೂದೇವಿ ನೀಳಾದೇವಿ, ಮಹಾಲಕ್ಷ್ಮಿ ಎಂದು ಐದು ಜನ ದೇವಿಯರೊಂದಿಗೆ ನೆಲೆಸಿದ್ದಾನೆ. ಮೂಲ ಮೂರ್ತಿಯಾದ ಸಾರನಾಥನು ಪೂರ್ವಾಭಿಮುಖವಾಗಿ ನಿಂತಿರುವ ಭಂಗಿಯಲ್ಲಿ ಎಲ್ಲರನ್ನು ಅನುಗ್ರಹಿಸುತ್ತಿದ್ದಾನೆ. ಪಂಚಸಾರ ಕ್ಷೇತ್ರವೆಂದರೆ ಸ್ವಾಮಿ ಸಾರನಾಥ, ಸಾರಕ್ಷೇತ್ರ ಸಾರವಿಮಾನ, ಸಾರನಾಯಕಿ, ಸಾರ ಪುಷ್ಕರಿಣಿ ಎಂದು ಕರೆಯಲ್ಪಡುತ್ತಿರುವ ಪಂಚಸಾರ ಕ್ಷೇತ್ರವಾಗಿದೆ.

ಹಾಗೆಯೇ ಶ್ರೀರಾಮ, ಹನುಮಂತ, ರುಕ್ಮಿಣಿ, ಸತ್ಯಭಾಮ, ಶ್ರೀನರಸಿಂಹ,ಮಹಾಲಕ್ಷ್ಮೀ,ನೀಲಾದೇವಿ, ಮೊದಲಾದ ದೇವತಾ ಮೂರ್ತಿಗಳಿಗೆ ಪ್ರತ್ಯೇಕವಾದ ಸನ್ನಿಧಿಗಳಿವೆ. ಅಶ್ವತ್ಥವೃಕ್ಷ ಇಲ್ಲಿನ ಸ್ಥಳ ವೃಕ್ಷವಾಗಿದೆ. ಗಂಗೆ, ಯಮುನಾ, ಸರಸ್ವತಿ, ಕಾವೇರಿ ನದಿಗಳಿಗೆಲ್ಲಾ ಇಲ್ಲಿ ಮನುಷ್ಯರೂಪದಲ್ಲಿ ಆ ವಿಂಧ್ಯ ಪರ್ವತದ ಅಧೋಭಾಗದಲ್ಲಿ ಒಂದು

ಸಂದರ್ಭದಲ್ಲಿ ಆಟವಾಡುತ್ತಿರುವಾಗ ವಿಶ್ವಾಸನೆಂಬ ಗಂಧರ್ವನು ಅವರನ್ನು ನೋಡಿ, ನಮಸ್ಕರಿಸಿ ಹೋದನಂತೆ. ಆ ಘಟನೆಯನ್ನು ನೋಡಿದ ಕೂಡಲೇ ನದೀದೇವತೆಗಳಿಗೆ ಒಂದು ರೀತಿಯ ಅನುಮಾನವುಂಟಾಗಿ ಆತ ಯಾರನ್ನು ನೋಡಿ ನಮಸ್ಕರಿಸುತ್ತಿದ್ದಾನೆ? ಅವನ ನಮಸ್ಕಾರಕ್ಕೆ ನಮ್ಮಲ್ಲಿ ಯಾರು ಅರ್ಹರು? ಎಂಬ ಸಂದೇಹವುಂಟಾಯಿತು. ಆಗ ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಗಂಧರ್ವನು ಕಾವೇರಿ, ಗಂಗಾದೇವಿಯನ್ನು ನೋಡಿ ಪುನಃ ನಮಸ್ಕರಿಸಿದ, ಆಗ ಕಾವೇರಿ ತನ್ನ ಸಂದೇಹವನ್ನು ಹೊರೆ ಗೆಡುಹಿದಾಗ ನಿಮ್ಮಲ್ಲಿ ಯಾರು





ಅರ್ಹರೋ ಅವರಿಗೆ ನಮಸ್ಕರಿಸಿದೆ ಎಂದು ಹೇಳಿ ಹೋದನು. ಕಾವೇರಿ ಗಂಗಾ ಇಬ್ಬರೂ ಬ್ರಹ್ಮದೇವನ ಬಳಿಗೆ ಹೋಗಿ ತಮ್ಮ ಅನುಮಾನವನ್ನು ಪರಿಹರಿಸಬೇಕೆಂದು ಕೇಳಿಕೊಂಡರು. ಆದರೆ ಬ್ರಹ್ಮದೇವನೇ ಗಂಗಾದೇವಿಗೆ ನಮಸ್ಕರಿಸಿದ. ಏಕೆಂದರೆ ತ್ರಿವಿಕ್ರಮಾವತಾರದಲ್ಲಿ ಆ ವಿಷ್ಣುವಿನ ಪಾದದಿಂದ ಗಂಗಾದೇವಿ ಉದ್ಭವಿಸಿದಳಾದ್ದರಿಂದ ಆಕೆಗೆ ಮಹತ್ವವನ್ನು ನೀಡಿದ. ಆದರೆ ಕಾವೇರಿ ನದಿ ನೇರವಾಗಿ ಭಗವಂತನನ್ನೇ ಪ್ರಾರ್ಥಿಸಿದಳಂತೆ. ಭಗವಂತನು ಗರುಡಾರೂಢ ನಾಗಿ ಆ ಕಾವೇರಿ ನದಿಯ ಮುಂದೆ ಪ್ರತ್ಯಕ್ಷನಾಗಿ "ನೀನು ಗಂಗಾ ನದಿಗಿಂತಲೂ ಉತ್ಕೃಷ್ಟವಾದ ನದಿಯೆಂದು ಕರೆಯಿಸಿಕೊಳ್ಳುತ್ತೀ ಮತ್ತು ಆ ಉಭಯ ಕಾವೇರಿ ನಡುವೆ ರಂಗನಾಥನಿಗೆ ಸೇವೆ ಮಾಡುತ್ತೀ ಆಗ ಎಲ್ಲರೂ ನಿನ್ನನ್ನು ಹೊಗಳುತ್ತಾರೆ'' ಎಂದೂ ಅನುಗ್ರಹಿಸಿದ. ಭಗವಂತನು ಕಾವೇರಿ ನದಿಗೆ ಆ ವೈಭವವನ್ನು ತಮಿಳ ತೈಮಾಸದಲ್ಲಿ ಪುಷ್ಯ ನಕ್ಷತ್ರದಂದು ಅನುಗ್ರಹಿಸಿದನಂತೆ. ಆ ಸಮಯದಲ್ಲಿ ಉತ್ಸವಗಳೂ ನಡೆಯುತ್ತವೆ. ಅದೇ ಅಲ್ಲದೇ ಇಲ್ಲಿನ ಕಾವೇರಿ ನದಿ ಒಂದು ಕೈಯಲ್ಲಿ ಒಂದು ಮಗುವನ್ನು ಹಿಡಿದುಕೊಂಡಿರುವಂತೆ ನೋಡಬಹುದು. ಆದ್ದರಿಂದ ಕಾವೇರಿ ನದಿಯನ್ನು ಭಗವಂತನು ಈ ರೀತಿ ಅನುಗ್ರಹಿಸಿ ದ್ದಾನೆಂದು ತಿಳಿದುಕೊಳ್ಳಬಹುದು.

ಮಾರ್ಕಂಡೇಯ ಮಹರ್ಷಿ ತನ್ನ ತಪಸ್ಸಿನ ಮೂಲಕ ಸಾರನಾಥ ಸ್ವಾಮಿಯನ್ನು ದರ್ಶಿಸಿದ . ಆತ ಒಟ್ಟು ಹದಿಮೂರು ಪಾಶುರಗಳಿಂದ ಆ ಸಾರನಾಥ ಸ್ವಾಮಿಯ ಮಂಗಳಾಶಾಸನವನ್ನು ರಚಿಸಿದ್ದಾನೆ. ಅದರ ಮೂಲಕ ಭಾಗವತ ಶ್ರೇಷ್ಠತೆಯೇ ಪ್ರತೀ ಒಬ್ಬರಿಗೂ ಮುಖ್ಯವೆಂದು ತಿಳಿಸಿದ್ದಾನೆ. ಈ ಕ್ಷೇತ್ರದಲ್ಲಿ ಪಾಂಚರಾತ್ರ ಆಗಮದ ಪ್ರಕಾರ ಆರಾಧನೆ ಗಳು ನಡೆಯುತ್ತವೆ. ಆ ಸ್ವಾಮಿಯನ್ನು ಯಾರು ದರ್ಶಿಸುತ್ತಾರೋ ಅವರಿಗೆ ವಿಶೇಷವಾದ ಅನುಗ್ರಹವುಂಟಾಗಿ ಸಕಲ ಪಾಪಗಳೂ ತೊಲಗಿ ಹೋಗುತ್ತವೆ.


## ಹೆಲ್ಮೆಟ್ ತಪ್ಪದೇ ಧರಿಸಬೇಕು

**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**




**ತೆಲುಗು ಮೂಲ -ಡಾ ಸಿ. ಮಧುಸೂದನ್ ಶರ್ಮ**
**90007 61390**
**ಅನುವಾದ- ಶ್ರೀಮತಿ**

ಪ್ರಾಯೇಣಾಹರ ವೈಷಮ್ಯಾತ್ ಅಜೀರ್ಣ ಜಾಯತೇನೃಣಾಂ।
ತನ್ಮೂಲೋ ರೋಗ ಸಂಘಾತಃ ತದ್ವಿನಾದ್ವಿನಾಶಾ ದ್ವಿನಶ್ಯತಿ"

ಎಂದು ಪ್ರಾಮಾಣಿಕ ಆಯುರ್ವೇದ ಗ್ರಂಥ ಅಷ್ಟಾಂಗ ಸಂಗ್ರಹದಲ್ಲಿ ಉಲ್ಲೇಖಿತವಾಗಿದೆ.

ಸಾಧಾರಣವಾಗಿ ಆಹಾರ ವ್ಯತ್ಯಯದಿಂದಾಗಿ ಮನುಷ್ಯರಿಗೆ ಅಜೀರ್ಣವ್ಯಾಧಿಗಳು ಉಂಟಾಗುತ್ತವೆ. ಅಜೀರ್ಣವೇ ಎಲ್ಲಾ ರೋಗಗಳಿಗೆ ಮೂಲವೆಂದೂ, ಅಜೀರ್ಣವಿಲ್ಲದಿದ್ದರೆ ವ್ಯಾಧಿಗಳೆಲ್ಲವೂ ಓಡಿ ಹೋಗುತ್ತವೆಂದೂ ಇದರ ಸ್ಥೂಲ ಅರ್ಥವನ್ನು ನಾವು ಅರಿತುಕೊಳ್ಳಬೇಕು.

ಆಹಾರ ಚೆನ್ನಾಗಿ ಜೀರ್ಣವಾಗಿ ಅಜೀರ್ಣವಾಗದಿರಲು ಆಹಾರ ಪದಾರ್ಥಗಳು ಅಡಿಗೆಯಲ್ಲಿ ಬಳಸುವ ಕೊತ್ತಂಬರಿ, ಕರಿಬೇವಿನಂತಹ ಎಲೆಗಳನ್ನು ಜೋಡಿಸಿ ಉಪಯೋಗಿಸುವ ಸಂಪ್ರದಾಯವನ್ನು ನಮ್ಮೆಲ್ಲರಿಗೂ ಒದಗಿಸಿಕೊಟ್ಟಿದ್ದಾರೆ ನಮ್ಮ ಮಹರ್ಷಿಗಳು.

ವರ್ಷಪೂರ್ತಿ ತಾಜಾವಾಗಿ ಲಭಿಸುವ, ವಿಶೇಷ ಪೌಷ್ಟಿಕಾಂಶಗಳಿಂದ ಕೂಡಿದ ಆರೋಗ್ಯಕ್ಕೆ ಪುಷ್ಟಿಯೆನ್ನೊದಗಿಸುವ ಸುಗಂಧ ಭರಿತ ಸೊಪ್ಪು ಕೊತ್ತಂಬರಿ.

ಅಡುಗೆಯ ತಯಾರಿಯಲ್ಲಿ ಈ ಕೊತ್ತಂಬರಿಯನ್ನು ರುಚಿ ಹಾಗೂ ಸುವಾಸನೆಗಾಗಿ ಬಳಸುತ್ತಾರೆ.

ಕೊತ್ತಂಬರಿಯನ್ನು ಪಚ್ಚಡಿ,ತೊವ್ವೆ,ರಸಂ ಸಲಾಡ್,ಪುಳಿಯೋಗರೆ, ಮೊಸರನ್ನ ಮೊದಲಾದವುಗಳ ತಯಾರಿಕೆಯಲ್ಲೂ ಸುವಾಸನಾ ದ್ರವ್ಯವಾಗಿ ಉಪಯೋಗಿಸುತ್ತಾರೆ.

ನಮ್ಮ ಶರೀರಕ್ಕೆ ಅತ್ಯಂತ ಅವಶ್ಯಕವಾದ ಸೂಕ್ಷ್ಮ ಪೋಷಕಾಂಶಗಳು ಕೊತ್ತಂಬರಿಯಲ್ಲಿದ್ದು ನಮ್ಮ ಆರೋಗ್ಯವನ್ನು ಸಂರಕ್ಷಿಸುವುದರಲ್ಲಿ ಪ್ರಯೋಜಕವಾಗಿವೆ.

ದಿನನಿತ್ಯದಲ್ಲಿ ನಾವು ಎದುರುಗೊಳ್ಳುವ ಅನಾರೋಗ್ಯಗಳಿಗೆ ಹೇಗೆ ಔಷಧಿಯಾಗಿ ಬಳಸಿಕೊಳ್ಳಬೇಕೆಂದು ಪ್ರಸ್ತುತ ತಿಳಿದುಕೊಳ್ಳೋಣ.

**ಮೊಡುವೆಗಳು ತಗ್ಗಲು :**

ಒಂದು ಟೀ ಸ್ಪೂನ್ ಕೊತ್ತಂಬರಿ ಮುದ್ದೆಯಲ್ಲಿ ಒಂದೆರಡು ಚಿಟಿಕೆ ಅರಶಿನ ಪುಡಿ ಕಲಿಸಿ ಮುಖದ ಮೇಲೆ ಲೇಪನ ಮಾಡಿಕೊಂಡು ಒಂದು ತಾಸು ಬಿಟ್ಟು ತೊಳೆದುಕೊಳ್ಳಬೇಕು. ಇದನ್ನು ಮಾಡುವುದರಿಂದ ಕರಿಮೆಚ್ಚೆಗಳು ಸಹಾ ಮಾಯವಾಗುತ್ತದೆ.

**ಅಂಗೈ ಅಂಗಾಲು ಉರಿ ತಗ್ಗಲು :**

ದಿನವೂ ಒಂದು ಬಾರಿ 200 ಮಿ.ಲೀ. ಮಜ್ಜಿಗೆಯಲ್ಲಿ 20 ಮಿ.ಲೀ. ಕೊತ್ತಂಬರಿ ಎಲೆಗಳ ರಸ ಕಲಿಸಿ ಸೇವಿಸುತ್ತಿರಬೇಕು. ಮಧುಮೇಹದಲ್ಲಿ ಬಾಧೆಗೊಳಗಾಗಿರುವ ಬಹಳ ಮಂದಿಗೆ ಈ ಔಷಧವು ಅವರ ಸಮಸ್ಯೆಗೆ ಬಹಳ ಉಪಯುಕ್ತವಾಗಿದೆ. ಈ ಔಷಧಿ ನಮ್ಮ ಶರೀರದಲ್ಲಿ ಇನ್ಸುಲಿನ್ ಉತ್ಪತ್ತಿಯನ್ನು ಅದರ ಸಾಮರ್ಥ್ಯರ್ಯವನ್ನು ಹೆಚ್ಚಿಸಿ ರಕ್ತದಲ್ಲಿ ಸಕ್ಕರೆಯ ಅಂಶವನ್ನು ತಗ್ಗಿಸಲು ಸಹಕರಿಸುತ್ತದೆ. ಮಧುಮೇಹಿಗಳಲ್ಲದವರಲ್ಲೂ ಈ ಸಮಸ್ಯೆಯಿದ್ದರೆ ಈ ಔಷಧ ದ್ರವದಲ್ಲಿ ಒಂದು ಟೀ ಸ್ಪೂನ್ ಸ್ಫಟಿಕ ಬೆಲ್ಲವನ್ನು ಕಲಿಸಿ ಸೇವಿಸಬೇಕು.

**ಮೂಗಿನಿಂದ ರಕ್ತಸ್ರಾವವಾಗುತ್ತಿದ್ದರೆ:**

ದಿನವೂ ಒಂದೆರಡು ಬಾರಿ ಕೊತ್ತಂಬರಿ ರಸವನ್ನು 2,3 ಹನಿಗಳನ್ನು ನಿಧಾನವಾಗಿ ಮೂಗಿನಲ್ಲಿ ಹಾಕಿದರೆ ಶೀಘ್ರದಲ್ಲಿ ಸಮಸ್ಯೆ ಬಗೆಹರಿಯುತ್ತದೆ.

**ಪಾರ್ಶ್ವ ತಲೆನೋವಿಗೆ :**

ಕೊತ್ತಂಬರಿ ಪೇಸ್ಟನ್ನು ಉಂಡೆಯಾಕಾರವಾಗಿ ಮಾಡಿ ತಲೆಯ ಮೇಲಿನ ಭಾಗಕ್ಕೆ ಹಾಕಿ ಕಟ್ಟು ಕಟ್ಟಿಕೊಂಡು ಒಂದು ತಾಸು ಬಿಟ್ಟು ತೆಗೆದರೆ ಒಳ್ಳೆಯ ಫಲಿತಾಂಶ ದೊರಕಲಿದೆ.

**ಕಾಮಿಣಿ ತಗ್ಗಲು :**

ದಿನವೂ ಒಂದೆರಡು ಬಾರಿ,ಬಾರಿಯೊಂದಕ್ಕೆ 200ಮಿ.ಲೀ.ತಾಜಾ ಮಜ್ಜಿಗೆಯಲ್ಲಿ 20 ಮಿ.ಲೀ.ಕೊತ್ತಂಬರಿ ರಸವನ್ನು ಕಲಿಸಿ ಸೇವಿಸಿ,ಸುಲಭವಾಗಿ ಜೀರ್ಣವಾಗುವಂಥ ಆಹಾರವನ್ನು ಸೇವಿಸುತ್ತಿದ್ದರೆ ಕಾಮಿಣಿ ಖಾಯಿಲೆ ಶೀಘ್ರದಲ್ಲಿ ಕಡಿಮೆಯಾಗುತ್ತದೆ.

**ಕಣ್ಣ ಸೆಳೆತ, ಕಣ್ಣುರಿ, ಕಣ್ಣು ಕೆಂಪಾಗುವುದು ಕಡಿಮೆಯಾಗಲು :**

ಶುಭ್ರವಾಗಿ ತಯಾರಿಸಿದ ಕೊತ್ತಂಬರಿ ರಸದಲ್ಲಿ ಒಂದು ಬಟ್ಟೆ ಅಥವಾ ಹತ್ತಿಯನ್ನು ನೆನೆಸಿ ಕಣ್ಣಿನ ಮೇಲೆ 15 ನಿಮಿಷಗಳು ಇಟ್ಟುಕೊಂಡರೆ ಒಳ್ಳೆಯ ಪರಿಶಮನ ದೊರಕುತ್ತದೆ.

**ಕೈಕಾಲು ಬಾವಿಗೆ :**

ದಿನವೂ ಎರಡು ಬಾರಿ, ಬಾರಿಯೊಂದಕ್ಕೆ 250 ಮಿ.ಲೀ. ನೀರಿನಲ್ಲಿ ಒಂದು ಕಟ್ಟು ಕೊತ್ತಂಬರಿ ಎಲೆಗಳು ಅರ್ಧ ಟೀ ಸ್ಪೂನ್ ಜೀರಿಗೆ ಅರ್ಧದಷ್ಟು ಕಲ್ಲುಸಕ್ಕರೆ ಹಾಕಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ ಇಳಿಸಿ ಬಿಸಿ ಯಾರಿದ ಬಳಿಕ ಶೋಧಿಸಿ ಸೇವಿಸಬೇಕು.

**ಮೈಯುರಿಗೆ:**

ದಿನವೂ ಒಂದೆರಡು ಬಾರಿ ಕೊತ್ತಂಬರಿ ರಸವನ್ನು ಅಥವಾ ಗಂಧವನ್ನು ಬೆರೆಸಿಯಾದರೂ, ಹಾಗೆಯೇ ಆದರೂ ಲೇಪನ ಮಾಡಿಕೊಳ್ಳುತ್ತಿದ್ದರೆ ಅತಿ ಶೀಘ್ರದಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ.ಹೀಗೆ ಉಪಯೋಗಿಸುವುದರಿಂದ ಚರ್ಮದ ಮೇಲೆ ಕೆಂಪು, ದದ್ದು,ತುರಿಕೆ ಮಾಯವಾಗುತ್ತವೆ.

**ರಕ್ತ ಪರಿಚಲನೆ ನಿಯಂತ್ರಣಕ್ಕೆ:**

ದಿನವೂ ಬೆಳಗ್ಗೆ 100 ಮಿ.ಲೀ ನೀರಿನಲ್ಲಿ 20 ಕೊತ್ತಂಬರಿ ಎಲೆಗಳು, 20 ತುಳಸಿ ಎಲೆಗಳು, 20 ಪುದಿನ ಎಲೆಗಳು, 5 ಗ್ರಾಂ ಜೀರಿಗೆ ಹಾಕಿ ಮಿಕ್ಸಿಯಲ್ಲಿ ಚೆನ್ನಾಗಿ ಕಲಿಸಿ, ಶೋಧಿಸಿ ಕುಡಿಯಬೇಕು. ರಕ್ತ ಪರಿಚಲನೆಯು ನಿಯಂತ್ರಣಕ್ಕೆ ಬಂದ ನಂತರ 100 ಮಿ.ಲೀ. ನೀರಿನಲ್ಲಿ ಈ ಪದಾರ್ಥಗಳನ್ನು ಸ್ವಲ್ಪ ಪ್ರಮಾಣದಲ್ಲಿ ಮಾತ್ರವೇ ಹಾಕಿ ಕಲಿಸಿ ಔಷಧವನ್ನು ತಯಾರು ಮಾಡಿಕೊಂಡು ಸೇವಿಸುತ್ತಿರಬೇಕು. ಈ ಔಷಧಿಯನ್ನು ಹೀಗೆ ಸೇವಿಸುವುದರಿಂದ ನಮ್ಮ ದೇಹಕ್ಕೆ ಹಾನಿಯುಂಟು ಮಾಡುವ ಕೊಲೆಸ್ಟ್ರಾಲ್ (ಎಲ್.ಡಿ.ಎಲ್.) ಕಡಿಮೆಯಾಗಿ, ದೇಹಕ್ಕೆ ಪೂರಕವಾದ ಕೊಲೆಸ್ಟ್ರಾಲ್ (ಎಚ್.ಡಿ.ಎಲ್) ಕೂಡಾ ಬೆಳವಣಿಗೆಯಾಗುತ್ತದೆ.ತದ್ವಾರ ಎದೆನೋವು, ಎದೆ ಸೆಳೆತಯಂತಹ ವ್ಯಾಧಿಗಳು ಬಾರದಂತೆ ರಕ್ಷಣೆಯುಂಟಾಗುತ್ತದೆ.

## ಕೊತ್ತಂಬರಿಯ ಉಪಯೋಗಗಳು



- ಕೊಂತ್ತಬರಿಯಿಂದ ಮೊಡವೆಗಳು ಕಡಿಮೆಯಾಗುತ್ತದೆ.
- ಅಂಗೈ ಹಾಗೂ ಅಂಗಾಲು ಉರಿ ಕಡಿಮೆಯಾಗುತ್ತದೆ.
- ಮೂಗಿನಿಂದ ರಕ್ತಸ್ರಾವವಾಗುತ್ತಿದ್ದರೆ ಕಡಿಮೆಯಾಗುತ್ತದೆ.
- ಪಾರ್ಶ್ವ ತಲೆನೋವಿಗೆ ಕೊಂತ್ತಬರಿಯಿಂದ ಕಡಿಮೆಯಾಗುತ್ತದೆ.
- ಕಾಮಿಣಿ ಕಡಿಮೆಯಾಗಲು
- ಕಣ್ಣ ಸೆಳೆತ, ಕಣ್ಣುರಿ, ಕಣ್ಣು ಕೆಂಪಾಗುವುದು ಕಡಿಮೆಯಾಗುತ್ತದೆ.
- ಕೈಕಾಲು ಬಾವಿಗೆ
- ಮೈಯುರಿಯು ಕಡಿಮೆಯಾಗುತ್ತದೆ.
- ರಕ್ತಪರಿಚಲನೆ ನಿಯಂತ್ರಣಕ್ಕೆ ಬರುತ್ತದೆ.



## ಮೇ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

### ಮೇಷ

ಅಂದುಕೊಂಡ ಗುರಿಯನ್ನು ಸಾಧಿಸುವಿರಿ. ಅನೇಕ ಸವಾಲುಗಳನ್ನು ಅತಿಕ್ರಮಿಸಿ, ಅವಿಶ್ರಾಂತವಾಗಿ ಕೆಲಸಮಾಡುತ್ತಾ ಮಾನಸಿಕ ಒತ್ತಡ ನಿಮ್ಮನ್ನು ಆವರಿಸಿ ಒಂದು ವರದಂತೆ ಪರಿಣಮಿಸಲಿದೆ. ಜನ್ಮರಾಶಿಯ ಗುರುವು ನಿಮ್ಮನ್ನು ಆಶಾದಾಯಕ ದಿಕ್ಕಿನಲ್ಲಿ ಕೊಂಡೊಯ್ದು ವಿಜಯದೆಡೆಗೆ ನಡೆಸುತ್ತಾ ನಿಮ್ಮಲ್ಲಿನ ಆಶಾವಾದವನ್ನು ಮತ್ತಷ್ಟು ಬೆಳೆಸುತ್ತಾನೆ.

### ವೃಷಭ

ಉದ್ಯೋಗ ವಿಷಯಗಳು ಅನುಕೂಲಕರ ಆಕಸ್ಮಿಕ ಧನಲಾಭ, ಕಾರ್ಯಜಯ ಸರ್ವತ್ರ ಅನುಕೂಲಗಳನ್ನುಂಟುಮಾಡುತ್ತವೆ. ಮಾಸದ ದ್ವಿತೀಯಾರ್ಧದಲ್ಲಿ ಕೋಪದಿಂದಾಗಿ ಕೆಲಸಗಳು ಕೆಟ್ಟು. ಪ್ರಯಾಣಗಳು ಒದಗಿಬರಲಿವೆ. ಸಫಲವಾಗಲಿವೆ. ವ್ಯಾಪಾರ ವಹಿವಾಟುಗಳಲ್ಲಿ ಪೆಟ್ಟು ಬಡಿತಗಳುಂಟಾಗಲಿವೆ. ರಕ್ತಪರಿಚಲನೆ, ಹೃದಯ ಸಂಬಂಧಿ ವಿಷಯಗಳಲ್ಲಿ ವೈದ್ಯಕೀಯ ಸಲಹೆಗಳನ್ನು ತೆಗೆದುಕೊಳ್ಳಬೇಕಾಗವುದು.

### ಮಿಥುನ

ಲಾಭಸ್ಥಾನದಲ್ಲಿ ರವಿ ಬುಧರು ಸಮಸ್ತೈಶ್ವರ್ಯಗಳನ್ನು ಒದಗಿಸಿ ಕೊಡುತ್ತವೆ. ಆಹ್ಲಾದಕರವಾದ ಜೀವನ ಸಾಗಿಸುವಿರಿ. ಆಧ್ಯಾತ್ಮಿಕ ರಂಗದಲ್ಲಿ ನಿಮ್ಮ ಸಂಕಲ್ಪಬಲದ ಮೇರು ಪ್ರಗತಿಗೊಳ್ಳಲಿದೆ. ಆತ್ಮವಿಶ್ವಾಸದಿಂದ ಮುನ್ನಡೆಯುವಿರಿ. ಉದ್ಯೋಗಿಗಳಿಗೆ ಸ್ಥಾನಪಲ್ಲಟ, ಪದೋನ್ನತಿ ಉಂಟಾಗುತ್ತದೆ.

### ಕರ್ಕಾಟಕ

ಅಧಿಕ ಧನವ್ಯಯ ಕುಟುಂಬದಲ್ಲಿ ಸುಭೋಗ, ವೃತ್ತಿ ಉದ್ಯೋಗ ವಿಷಯದಲ್ಲಿ ಆನಂದದಿಂದ ಇರುವಿರಿ. ಉದ್ಯೋಗ ಉನ್ನತಿ ಉಂಟಾಗಲಿದೆ. ವ್ಯಾಪಾರಸ್ಥರಿಗೆ ಅಧಿಕ ಆದಾಯಗಳುಂಟಾಗುತ್ತವೆ. ಸುಖಕರವಾದ ಜೀವನ ವನ್ನು ಆಸ್ವಾದಿಸುವಿರಿ.ಕುಟುಂಬ ವಾತಾವರಣವು ಚೆನ್ನಾಗಿರುತ್ತದೆ. ಇದರಿಂದ ಮಾನಸಿಕ ಪ್ರಶಾಂತತೆಯು ಲಭಿಸುತ್ತದೆ.

### ಸಿಂಹ

ಪ್ರಮೋಷನ್‌ನಿಂದ ಕೂಡಿದ ಹೊಸ ಅವಕಾಶಗಳನ್ನು ಹೊಂದುತ್ತೀರಿ ಮೇಲಧಿಕಾರಿಗಳಿಂದ ಗುರುತಿಸಲ್ಪಡುವಿರಿ. ಕುಟುಂಬ ಸಭ್ಯರು ಹಾಗೂ ಸ್ನೇಹಿತರು ನಿಮ್ಮನ್ನು ಗೌರವಿಸುತ್ತಾರೆ ಮತ್ತು ನೀವು ಸಾಮಾಜಿಕ ರಂಗದಲ್ಲಿ ಸಹಾ ಪ್ರಶಂಸೆಗಳನ್ನು ಹೊಂದುವಿರಿ. ಆರೋಗ್ಯ ವಿಷಯಗಳು ಅನುಕೂಲಕರವಾಗಿರುತ್ತವೆ.

### ಕನ್ಯ

ವೃತಿ ವಿಷಯಗಳಲ್ಲಿ ಸಂಸ್ಥಾಪಕ ಮಾರ್ಪಾಡುಗಳನ್ನು ಮಾಡಬೇಕಾಗಿ ಬರುತ್ತದೆ. ಆದರೆ ವರ್ಷವೆಲ್ಲಾ ಒದಗಿಬರುವ ಅಂಶಗಳು ಸ್ವಲ್ಪ ಹೆಚ್ಚಾಗೇ ಇರುತ್ತವೆ.ಕೆಲಸದೊತ್ತಡ ಹೆಚ್ಚಾಗಿರಲಿದೆ ಶುಭಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ವೃತ್ತಿ ವಿಷಯಗಳಲ್ಲಿ ಅನುಕೂಲಕರ ತದ್ವಾರ ಧನಾದಾಯ ವಾಗುತ್ತದೆ. ಸಾಲಗಳನ್ನು ತೀರಿಸಲು ಒಂದು ಸದವಾಕಾಶವನ್ನು ಗುರುತಿಸುವಿರಿ.

### ತುಲಾ

ಆನಂದಕರವಾದ ವಾತಾವರಣವನ್ನು ಅನುಭವಿಸುವಿರಿ. ಮೇಲಧಿಕಾರಿಗಳಿಂದ ದಂಡಮಾನಗಳುಂಟಾಗಲಿವೆ. ನಿಮಗೆ ಅವರ ಪ್ರಶಂಸೆಗಳು ದೊರಕಲಿವೆ. ನೀವು ವೃತ್ತಿ ವಿಷಯಗಳಲ್ಲಿ ಮೆರೆಯುವಿರಿ. ನಿರುತ್ಸಾಹವುಂಟಾಗದಂತೆ ನೀವು ನಿಮ್ಮ ಜೀವನ ಸಂಗಾತಿ ಹಾಗೂ ಮಕ್ಕಳ ಜೊತೆ ಉತ್ತಮವಾದ ಸಂಬಂದವನ್ನು ಬೆಳಸಿಕೊಳ್ಳುವುದಲ್ಲಿ ಸರಿಯಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಉದ್ಯೋಗಸ್ಥರು ನಿಮ್ಮ ವೃತ್ತಿ ವೈಪುಣ್ಯವನ್ನು ಬೆಳಸಿಕೊಳ್ಳಲು ಕೃಷಿಮಾಡಬೇಕು.

### ವೃಶ್ಚಿಕ

ಹತ್ತು ಜನರಲ್ಲಿ ಗುರುತಿಸಲ್ಪಡುವಿರಿ. ಸಾಮಾಜಿಕಪರವಾದ ಅಂಶಗಳಲ್ಲಿ ಮುನ್ನಡೆ, ಮಕ್ಕಳ ವಿಷಯದಲ್ಲಿ ಸಂತೋಷವನ್ನುಂಟು ಮಾಡುತ್ತದೆ. ಮಕ್ಕಳು ಪರೀಕ್ಷೆಗಳಲ್ಲಿ ವಿಜಯವನ್ನು ಸಾಧಿಸುವರು. ನಿಮ್ಮ ವೃತ್ತಿ ವ್ಯಾಪಾರಗಳಲ್ಲಿ ಮಾನಸಿಕ ಒತ್ತಡ ಹೆಚ್ಚಾಗಲಿದೆ. ಕೆಟ್ಟ ಸಹವಾಸಗಳಿಂದ ದೂರದಲ್ಲಿದ್ದರೆ ಅಭಿವೃದ್ಧಿಯುಂಟಾಗಲಿದೆ ಸಂಪದ ಎಲ್ಲಾ ವಿಲಾಸಮಯವಾದ ಜೀವನವನ್ನು ಆಸ್ವಾದಿಸುವಿರಿ.

### ಧನಸ್ಸು

ಈ ಮಾಸದಲ್ಲಿ ಸುಬ್ರಮಣ್ಯ ಆರಾಧನೆ ಮಾಡುವುದು ಒಳಿತು. ಇತರರಿಗೆ ಸಹಾಯ ಮಾಡುವುದಲ್ಲಿ ಮುಂದುವರೆಯಲಿದ್ದಿರೀ. ಸಂಕಲ್ಪಸಿದ ಕೆಲಸಗಳು ನೆರವೇರುವಿಕೆ. ದ್ರವ್ಯ ಲಾಭವು, ಧನಲಾಭವು ಕುಟುಂಬ ವಾತಾವರಣ ಸುಖ-ಸಂತೋಷಗಳಿಂದ ಇದ್ದು, ಪುತ್ರ ಸೌಖ್ಯ ಉಂಟಾಗಲಿದೆ.

### ಮಕರ

ಸಂತಾನ ವಿಷಯಗಳಲ್ಲಿ ಸಂತೋಷ ಉಂಟಾಗುತ್ತದೆ.ಇದು ಪರೀಕ್ಷೆಗಳಲ್ಲಿ ವಿಜಯ, ಮತ್ತುಷ್ಟು ವಿನೋದ ಅವಕಾಶಗಳನ್ನು ಕಲ್ಪಿಸುವ ಸುಸಮಯ. ದ್ಯೂತ ಇಲ್ಲವೇ ಉಪಕರಣಗಳಿಂದ ಹಲವು ಲಾಭಗಳು ಸಿಗಲಿವೆ. ಗೃಹ ಸೌಖ್ಯಕ್ಕೆ ಪ್ರಧಾನ್ಯತೆಯನ್ನು ನೀಡಿ ಪ್ರಯಾಣ ಗಳನ್ನು ಆಯೋಜಿಸಲಿದ್ದೀರಿ.

### ಕುಂಭ

ಶುಭ ಯೋಗಗಳುಂಟಾಗಲಿವೆ. ಧನವ್ಯಯದ ಮೇಲೆ ನಿಯಂತ್ರಣ ಅಗತ್ಯ. ಧೈರ್ಯದೊಂದಿಗೆ ಮುಂದೆ ಸಾಗಿ ವಿಜಯವನ್ನು ಸಾಧಿಸುವಿರಿ. ಇದು ಉದ್ಯೋಗ ವಿಷಯ ವಾದರೂ ಆಗಬಹುದು ಇಲ್ಲದೇ ನಿಮ್ಮ ಜೀವನಕ್ಕೆ ಸಂಬಂಧಿಸಿದ ನೂತನ ಯೋಜನೆ ಯಾದರೂ ಆಗಿರಬಹುದು. ಮಕ್ಕಳ ವಿಜಯವು ನಿಮ್ಮನ್ನು ತಲೆಯೆತ್ತಿ ತಿರುಗುವಂತೆ ಮಾಡುತ್ತವೆ.

### ಮೀನ

ಸುಖ ಸಂಪದ, ಆಸ್ತಿ ಹಾಗೂ ಶಾರೀರಕ, ಮಾನಸಿಕ ಬಲವನ್ನು ಬಗ್ಗೂಡಿಸುವ ಸಮಯ. ಆಸ್ತಿ, ಹೆಸರು, ಕೀರ್ತಿಗಳಿಂದ ಒಳ್ಳೆಯ ಆದಾಯ, ಕುಟುಂಬದಲ್ಲಿ ಆನಂದ , ಒಳ್ಳೆಯ ಆರೋಗ್ಯ ಹಾಗೂ ಭೌತಿಕ ಸುಖಗಳು ಶುಕ್ರ ಸಂಚಾರದಿಂದ ಉಂಟಾಗಲಿವೆ. ವಿಲಾಸಮಯ ವಾದ ಜೀವನ ಶೈಲಿಯನ್ನು ಆಸ್ವಾದಿಸುವಿರಿ. ಕುಟುಂಬದ ಉನ್ನತಿಗಾಗಿ, ಶುಭ ಕಾರ್ಯಗಳನ್ನು ಆಯೋಜಿಸುವಿರಿ .

# पञ्च विंशः पाठः

# ಪಾಠ : 25

# ಸಂಸ್ಕೃತ ಕಲಿಯೋಣ...!!

ರಚನೆ:-ಕೆ. ಸೂರ್ಯನಾರಾಯಣ

कूपः = ಭಾವಿ
रामठम् = ಹಿಂಗು
लवणम् = ಉಪ್ಪು, ಉಪ್ಪಾಗಿ, ಉಪ್ಪಾದ
गमनम् = ಹೋಗುವಿಕೆ

खादित्वा = ತಿಂದು
खादितुम् = ತಿನ್ನುವುದಕ್ಕೆ
कर्तुम् = ಮಾಡುವುದಕ್ಕೆ
आगमनम् = ಬರುತ್ತಾನೆ

गच्छति- ಹೋಗುತ್ತಾನೆ    नयति - ಒಯ್ಯುತ್ತಾನೆ    आगच्छति- ಬರುತ್ತಾನೆ

## ಪ್ರಶ್ನೆ

1. बालकः अस्मद्गृहे अन्नं खादित्वा गृहम् अगच्छत्।
2. अहं कूपस्य आरान् स्नानं कर्तुम् अगच्छम्।
3. त्वं कुत्र खादितुं गच्छसि?
4. कुत्रापि न गच्छामि।
5. अरे! युष्मद्गृहे लवणमस्ति रे?
6. लवणं किञ्चिदस्ति।
7. तर्हि शाकं कथं करिष्यसि?
8. शाके लवणं किमर्थं रे?
9. लवणं नास्ति चेत् शाकं सम्यक् न स्यात्।
10. अतः त्वं स्नानं कृत्वा शीघ्रं भोजनं कुरु।

## ಉತ್ತರ

1. ನೀನು ನಿನ್ನ ತಂದೆಯನ್ನು ಎಲ್ಲಿಗೆ ಕರೆದೋಯ್ಯುತ್ತಿದ್ದಿಯಾ?
2. ನಾನು ನಮ್ಮ ತಮ್ಮನನ್ನು ಮನೆಗೆ ಕರೆದುಕೊಂಡು ಹೋಗುತ್ತಿದ್ದೇನೆ.
3. ಅಲ್ಲಿಗೆ ಏಕೆ?
4. ಊಟ ಮಾಡೋಕೆ.
5. ಅಲ್ಲಿ ಅನ್ನವನ್ನು ತಿಂದು ಅಲ್ಲಿ ಇರು.
6. ನಿನ್ನ ತಮ್ಮನು ಎಲ್ಲಿದ್ದಾನೆ?
7. ಅವನು ನಮ್ಮ ಮನೆಯಲ್ಲಿ ಭಾವಿಯಲ್ಲಿ ಸ್ನಾನವನ್ನು ಮಾಡು ತ್ತಿದ್ದಾನೆ.
8. ನಿಮ್ಮ ಭಾವಿಯಲ್ಲಿ ನೀರಿದೆಯಾ?
9. ಸ್ವಲ್ಪವಿದೆ ಆದರೇ ಚೆನ್ನಾಗಿ ಇಲ್ಲ.
10. ಹಾಗಾದರೇ ಅಲ್ಲಿ ಹೇಗೆ ಸ್ನಾನ ಮಾಡುತ್ತಾನೆ?


## ಪ್ರಶ್ನೆ

1. ಬಾಲಕನು ನಮ್ಮ ಮನೆಯಲ್ಲಿ ಅನ್ನವನ್ನು ತಿಂದು ಮನೆಗೆ ಹೋದನು.
2. ನಾನು ಭಾವಿಯ ಹತ್ತಿರ ಸ್ನಾನವನ್ನು ಮಾಡೋಕೆ ಹೋಗಿದ್ದೆ
3. ನೀನು ಎಲ್ಲ ತಿನ್ನುವುದಕ್ಕೆ ಹೋಗುತ್ತೀಯಾ?
4. ಎಲ್ಲಿಗೂ ಹೋಗಲ್ಲ.
5. ಓಯ್ ನಿಮ್ಮ ಮನೆಯಲ್ಲಿ ಉಪ್ಪು ಇದೆಯಾ?
6. ಉಪ್ಪು ಸ್ವಲ್ಪ ಇದೆ.
7. ಹಾಗಾದರೆ ಪಲ್ಯ ಹೇಗೆ ಮಾಡುತ್ತೀಯಾ?
8. ಪಲ್ಯದಲ್ಲಿ ಉಪ್ಪು ಏತಕ್ಕಲೇ?
9. ಉಪ್ಪು ಇಲ್ಲವಾದರೇ ಪಲ್ಯ ಬಹುಶಾ ಚೆನ್ನಾಗಿರಲ್ಲ
10. ಆದ್ದರಿಂದ ನೀವು ಸ್ನಾನ ಮಾಡಿ ವೇಗವಾಗಿ ಊಟ ಮಾಡು

## ಉತ್ತರ

1. त्वं तव पितरं कुत्र नयसि?
2. अहं मम अनुजस्य गृहं प्रति नयामि।
3. तत्र किमर्थम्?
4. भोजनकरणार्थम्।
5. तत्र अन्नं खादित्वा अत्र वस।
6. तव अनुजः कुत्र अस्ति?
7. सः अस्मद्गृहे कूपे स्नानं कुर्वन् अस्ति।
8. युष्मद् कूपे जलमस्ति वा रे?
9. किञ्चिदस्ति परं सम्यक् नास्ति।
10. तर्हि तत्र कथं स्नानं करोति?

# ಶ್ರೀವೆಂಕಟಾಚಲ ಮಹಾತ್ಮ್ಯೆ





ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,
ಅನುವಾದ – ಶ್ರೀಮತಿ. ಎಸ್. ಪಾರ್ವತಿ

ಕಳೆದ ಸಂಚಿಕೆಯಿಂದ

ಸೃಷ್ಟಿಕರ್ತನಾದ ಬ್ರಹ್ಮನು ನಿದ್ರೆಗೆ ಜಾರಿದ್ದರಿಂದ ಭೂಲೋಕದಲ್ಲಿ ಅಲ್ಲೋಲ ಕಲ್ಲೋಲ ಏರ್ಪಟ್ಟಿತು. ಲೋಕ ಬಾಂಧವನಾದ ಸೂರ್ಯನು ತನ್ನ ತೀಕ್ಷ್ಣ ಕಿರಣಗಳಿಂದ ಎಲ್ಲಾ ಜೀವಿಗಳಿಗೆ ಹೆಚ್ಚಿನ ಶಾಖದ ಅನುಭವ ನೀಡಿದ್ದಾನೆ. ಪ್ರಳಯಕಾಲದಲ್ಲಿ ಅಕಾಲ ತಾಂಡವ ಮಾಡುವ ಜ್ವಾಲೆಗಳಂತೆ ತಾನೇನು ಕಡಿಮೆ ಅಲ್ಲವೆಂದು ಮಹೋನ್ನತ ಶಾಖದಿಂದ ಪ್ರಜ್ವಲಿಸುತ್ತಿದ್ದನು.ಸಜೀವಿಗಳು,ನಿರ್ಜೀವಿಗಳು ಎಲ್ಲಾ ಆ ಜ್ವಾಲೆಗಳಿಂದ ನಲುಗಿದವು. ಇದೆಲ್ಲವೂ ಸಾಲದೆನ್ನುವಂತೆ ವಾಯುವು ಅಗ್ನಿಗೆ ಜೊತೆಯಾದನು. ವಿನಾಶಕಾರಿ ಮೇಘಗಳು ಜಗಮಗಿಸುತ್ತಾ ದೊಡ್ಡ ದೊಡ್ಡ ಹನಿಗಳೊಂದಿಗೆ ವರ್ಷಧಾರೆಯನ್ನು ಸುರಿಸಿದವು ಇನ್ನೇನು?ಎಲ್ಲಿ ನೋಡಿದರೂ ನೀರು.ಈ ಅಗಾಧವಾದ ಪ್ರವಾಹದಿಂದ ಭೂಮಿಯಲ್ಲಿ ಅಲ್ಲೋಲ ಕಲ್ಲೋಲವಾಯಿತು. ಇಂತಹ ವಾತಾವರಣಕ್ಕಾಗಿ ಎದುರು ನೋಡುತ್ತಿದ್ದ ಹಿರಣ್ಯಾಕ್ಷ ಎಂಬ ರಾಕ್ಷಸನು ಭೂಮಿಯನ್ನು ರಸಾತಲಕ್ಕೆ ತಳ್ಳಿದನು. ಭೂಮಿಯು ರಾಕ್ಷಸರ ಕೈ ಸೇರಿತು. ಹೀಗೆಯೇ ಬಹಳ ಕಾಲ ಸಾಗಿತು. ಚತುರ್ಮುಖನಿಗೆ ರಾತ್ರಿ ಕಳೆಯಿತು. ಬ್ರಹ್ಮನು ಎದ್ದು ಹಿಂದಿನಂತೆಯೇ ಸೃಷ್ಟಿಕಾರ್ಯವನ್ನು ಪ್ರಾರಂಭಿಸಲು ಮುಂದಾದನು. ಇವೆಲ್ಲವನ್ನೂ ವೀಕ್ಷಿಸುತ್ತಿದ್ದ ವಿಷ್ಣುವು ಸರ್ವಲೋಕ ರಕ್ಷಣೆಗಾಗಿ ಶ್ವೇತವರಾಹ ರೂಪವನ್ನು ಧರಿಸಿ, ರಸಾತಲವನ್ನು ಸೇರಿದನು. ರಸಾತಲಕ್ಕೆ ಬಿದ್ದಿದ್ದ ಭೂಮಿಯನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸುತ್ತಿದ್ದಾಗ ಹಿರಣ್ಯಾಕ್ಷನು ಅಡ್ಡ ಬಂದನು. ಇವರಿಬ್ಬರ ನಡುವೆ ಮಾರಾಮಾರಿ ಯುದ್ಧ ನಡೆಯಿತು. ಕೊನೆಗೆ ವಿಷ್ಣುವು ತನ್ನ ಹರಿತವಾದ ಆಯುಧದಿಂದ ಹಿರಣ್ಯಾಕ್ಷನ ತಲೆಯನ್ನು ಚೂರು ಚೂರು ಮಾಡಿದನು. ಭಯಂಕರವಾಗಿ ನಡೆದ ಹೋರಾಟದಲ್ಲಿ ಸ್ರವಿಸಿದ ರಕ್ತಧಾರೆಯಿಂದ ಆ ಪ್ರದೇಶವು ಕೆಂಪು ಬಣ್ಣಕ್ಕೆ ತಿರುಗಿತು. ಈ ಬದಲಾವಣೆಯನ್ನು ಗುರುತಿಸಿದ ದೇವತೆಗಳಿಗೆ ಭಯವಾಯಿತು. ಆದರೆ ಸ್ವಲ್ಪ ಸಮಯದ ನಂತರ ಸಮಾಧಾನಗೊಂಡು ತಮ್ಮ ಯೋಗದೃಷ್ಟಿಯಿಂದ ರಸಾತಲದಲ್ಲಿ ನಡೆದ ಪರಿಣಾಮವನ್ನು ತಿಳಿದುಕೊಂಡು ಶಾಂತಚಿತ್ತರಾದರು. ಪ್ರಕೃತಿಯನ್ನೇ ಬುಡಮೇಲು ಮಾಡಿದ ಲೋಕ ಕಂಟಕನ ಸಂಹಾರವಾಗಿದ್ದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಶ್ವೇತವರಾಹಧಾರಿಯನ್ನು ಸಹಸ್ರನಾಮದಿಂದ ಸ್ತುತಿಸಿದರು. ಆಗ ಹೂವಿನ ಮಳೆ ಸುರಿಯಿತು.ಮಂಗಳ ವಾದ್ಯಗಳು ಮೊಳಗಿದವು.ಇಂತಹ ವಿಪತ್ತುಗಳು ಪುನರಾವರ್ತನೆ ಆಗದಂತೆ ಇರಲು ಸ್ವಾಮಿಯನ್ನು ಆ ಸಮಯದಲ್ಲಿ "ಸರ್ವತೀತ ಕಂಟಕನಾದ ರಾಕ್ಷಸನ ಸಂಹರಿಸಿದ್ದೀರಿ. ಆದರೂ

ನಮ್ಮದೊಂದು ಬಿನ್ನಹ. ಆ ಪ್ರದೇಶದಲ್ಲಿಯೇ ತಾವು ನೆಲೆಸಿ, ಭಕ್ತರ ಸೇವೆ ಸ್ವೀಕರಿಸಿ ಕೃಪೆ ತೋರಿಸಬೇಕೆಂದು ನಮ್ಮ ಕೋರಿಕೆ. ಆಗಲೇ ಭೂಲೋಕವಾಸಿಗಳು ಚಿಂತೆ ಇಲ್ಲದೇ ಸುಖವಾಗಿರುತ್ತಾರೆ ಎಂದರು. ಭಕ್ತವತ್ಸಲನಾದ ಸ್ವಾಮಿ ಅವರ ಕೋರಿಕೆಯನ್ನು ಮನ್ನಿಸಿದರು.

ಆನಂತರ ಭೂಮಿಯು ಸ್ಥಿರವಾಗಿ ನಿಲ್ಲಲು ಆ ಪ್ರದೇಶವನ್ನು ಸಮತಟ್ಟು ಮಾಡಿದನು. ಆಗ ಎಲ್ಲರೂ ಸಮಾಧಾನದ ಉಸಿರನ್ನು ಬಿಟ್ಟರು. ಹಾಗೆಯೇ ದೇವತೆಗಳು ತಮ್ಮ ತಮ್ಮ ಸ್ವಸ್ಥಾನಕ್ಕೆ ಮರಳಿ ಹೋದರು.

ಶ್ವೇತವರಾಹ ಮೂರ್ತಿಯು ತನ್ನ ಆಗಮನಕ್ಕಾಗಿ ಎದುರು ನೋಡುತ್ತಿದ್ದ ಗರುಡನನ್ನು ನೋಡಿದನು. "ಖಗೇಂದ್ರ ಅಲ್ಲೋಲ ಕಲ್ಲೋಲವಾದ ಭೂತಲವನ್ನು ಯಥಾಸ್ಥಿತಿಗೆ ತರಲು ರಾಕ್ಷಸ ನಿರ್ಮೂಲನಾರ್ಥವಾಗಿ ಘೋರ ಅವತಾರವನ್ನು ಎತ್ತಿದ್ದೇನೆ. ಸರ್ವಾಂಗಸುಂದರಾಂಗಿ ನನ್ನನ್ನು ನೋಡಿರುವ ಶ್ರೀದೇವಿ ಈ ವೇಷದಲ್ಲಿ ನೋಡಲು ಹಿಂಜರಿಯುವುದಿಲ್ಲವೇ?ಅದಲ್ಲದೇ ರಸಾತಲದಿಂದ ಉದ್ಭವಿಸಿರುವ ರಮಣಿ ಭೂದೇವಿಯು ನನ್ನ ಧೈರ್ಯ ಸಾಹಸಗಳನ್ನು ಮೆಚ್ಚಿ ಕಾಮಿಸಿದ್ದಾಳೆ. ನಾನೂ ಕೂಡಾ ಆ ವಸುಂಧರೆಯನ್ನು ಕಾಮಿಸಿದ್ದೇನೆ. ಇಬ್ಬರೂ ಅನ್ಯೋನ್ಯವಾಗಿದ್ದೇವೆ. ಈ ಸಮಯದಲ್ಲಿ ಆ ಭಾಮಾಮಣಿಯನ್ನು ಬಿಟ್ಟು ಬರಲು ಮನಸ್ಸಾಗುತ್ತಿಲ್ಲ".

ಪಕ್ಷಿರಾಜಾ ! ಮನಸ್ಸಿನಲ್ಲಿ ಅಡಗಿಸದೇ ಹೇಳುತ್ತಿದ್ದೇನೆ, ಆಭರಣಗಳಿಂದ ಕಂಗೊಳಿಸುವ ವಯ್ಯಾರದಿಂದ ದರ್ಶನೀಯಳಾದ ಕನಕಲಕ್ಷ್ಮಿ ತನ್ನ ಕಠಿಣ ಶರೀರವನ್ನು, ಮೈಯೆಲ್ಲಾ ಉದ್ದದ ಕೂದಲಿರುವ ದೇಹವನ್ನು ಯಾರಾದರೂ ಹೆದರುವ ಈ ವಿಕಾರದಿಂದ ಇರುವ ನನ್ನನ್ನು ನೋಡಿದರೇ ತಿರಸ್ಕರಿಸುವುದಿಲ್ಲವೇ? ಈ ಜಿಗುಪ್ಸೆಗೊಳ್ಳುವ ವೇಷದಲ್ಲಿ ವೈಕುಂಠಕ್ಕೆ ಹೇಗೆ ಬರಲಿ?ನನ್ನ ಕ್ರೂರ ರೂಪವನ್ನು ನೋಡಿ "ನೀನ್ಯಾರು" ಎಂದು ಕೇಳಿದರೆ ನಾನೇನಿನ್ನ ಪತಿದೇವರು ಎಂದು ಪರಿಚಯ ಮಾಡಿಕೊಳ್ಳುವುದು ಮುಜುಗರವಲ್ಲವೇ? ಇಷ್ಟು ಕಾರಣಗಳಿಂದ ಸಂದೇಹಗಳಿಂದ ಈಗ ವೈಕುಂಠಕ್ಕೆ ಹೋಗಲು ನನಗೆ ಮನಸ್ಸಿಲ್ಲ. ಪ್ರಸ್ತುತ ನನ್ನನ್ನು ನನ್ನ ರೂಪವನ್ನು ಮೆಚ್ಚಿಸುವ ವನಿತೆಯೊಂದಿಗೆ ಇರಬೇಕೆನಿಸುತ್ತದೆ." ಎಂದನು. "ಸ್ವಾಮಿ ! ಅಮ್ಮನನ್ನು ಕುರಿತು ನೀವು ಹೀಗೆ ಮಾತಾಡಬಾರದು. ಭೂಲೋಕವಾಸಿಗಳ ಹಿತಕ್ಕಾಗಿ ನೀವು ಶ್ವೇತವರಾಹರೂಪವನ್ನು ಧರಿಸಿರುವಿರೆಂದು, ರಾಕ್ಷಸ ಸಂಹಾರ ಮಾಡಿ ಮಾನವರನ್ನು ರಕ್ಷಿಸಿದ್ದೀರೆಂದು ನಿಮ್ಮ ಲೋಕೋತ್ತರವಾದ ನಿಮ್ಮ ಕಾರ್ಯಗಳಿಗೆ ಆದಿಲಕ್ಷ್ಮಿಯು ಪರವಶವಾಗುತ್ತಾರೆ. ಆದರೆ ಬೇರೆ ರೀತಿಯಲ್ಲಿ ಊಹಿಸಿಕೊಳ್ಳುವುದು. ನನಗೆ ವಿಚಿತ್ರವಾಗಿದೆ. ಏನೇನೋ ಸಂದೇಹಗಳಿಂದ ಏನೇ ನನ್ನೋ ಏಕೆ ಊಹಿಸಿಕೊಳ್ಳುತ್ತೀರಿ? ನಾನು ಅಧಿಕ ಪ್ರಸಂಗಿಯಾಗಿ ಮಾತಾಡಿದ್ದರೆ ಕ್ಷಮಿಸಿ " ಎಂದು ಖಗೇಂದ್ರನು ಹೇಳಿದನು.

ಸ್ವಾಮಿ ! ಅಮ್ಮ ನಿಮ್ಮಿಂದ ಯಾವ ಸಂದರ್ಭದಲ್ಲೂ ದೂರ ಆಗದ ವನಿತ ಶಿರೋಮಣಿ. ಸದಾ ವಕ್ಷಸ್ಥಲ ವಾಸಿನಿಯಾದ ಅಮ್ಮನವರು ನಿಮ್ಮ ಸೂಕರಾಕಾರವನ್ನು ನೋಡಿ ಜಿಗುಪ್ಸೆಗೆ ಒಳಪಡುವಳೆಂದು ಅನಿಸುವುದಿಲ್ಲ. ನೀವು ಸರ್ವಜ್ಞರು ಹೆಚ್ಚಾಗಿ ಮಾತಾಡಿದ್ದರೆ ಕ್ಷಮಿಸಿ ಎಂದು ಕೈ ಮುಗಿದನು.

" ಪುಣ್ಯಾತ್ಮ!! ಏನಾದರೂ ಸರಿ ನಾನು ಈ ವೇಷದಲ್ಲಿ ವೈಕುಂಠಕ್ಕೆ ಬರುವುದಿಲ್ಲ. ಸ್ವಲ್ಪ ಕಾಲ ಭೂತಲದಲ್ಲಿ ವಾಸಿಸುತ್ತೇನೆ. ಹಿರಣ್ಯಾಕ್ಷ ಸಂಹಾರದಿಂದ ದುಷ್ಟ ಶಿಕ್ಷಣ ಪೂರ್ತಿ ಆಗಿಲ್ಲ. ಇನ್ನೂ ಎಷ್ಟೋ ರಾಕ್ಷಸರು ಇದ್ದಾರೆ.ಅವರನ್ನು ಹೇಳ ಹೆಸರಿಲ್ಲದಂತೆ ನಾಶ ಮಾಡಬೇಕು.ಹಾಗಾದರೆ ಈಗ ನೀನು ವೈಕುಂಠಕ್ಕೆ ಹೋಗಿ ಬಾ. ಹಾಗೆಯೇ ಇಲ್ಲಿ ನಡೆದ ಎಲ್ಲಾ ಘಟನೆಗಳನ್ನು ಆದಿಲಕ್ಷ್ಮಿಗೆ ಹೇಳು. ಅಂದ ಹಾಗೆ ಇನ್ನೊಂದು ಮಾತು. ನನಗೆ ಕ್ರೀಡಾಚಲದಲ್ಲಿ ವಿಹರಿಸುವ ಬಯಕೆ ಆಗಿದೆ. ವೈಕುಂಠದಿಂದ ಕ್ರೀಡಾಚಲವನ್ನು ಭೂತಲಕ್ಕೆ ತೆಗೆದುಕೊಂಡು ಬಾ" ಎಂದು ಹೇಳುತ್ತಿದ್ದಂತೆ ರಕ್ಕೆಗಳನ್ನು ಆಗಲಿಸಿ ಗರುಡನು ವೈಕುಂಠಕ್ಕೆ ತೆರಳಿದನು.

(ಮುಂದುವರೆಯುತ್ತದೆ)

ನೀತಿಕಥೆ

# ಉಪಕಾರ ಪ್ರವೃತ್ತಿ ನಮ್ಮದಾಗಲಿ

ಎ.ಆರ್. ರಘುರಾಮ
9916138436

ಮನುಷ್ಯ ಸಮುದಾಯ ಜೀವಿ, ಮನುಷ್ಯನೇ ಏಕೆ? ಜೀವ ಜಗತ್ತಿನ ನೂರೆಂಟು ಜೀವರಾಶಿಗಳು ಕೂಡ ಸಂಘ ಜೀವಿಗಳೇ ಆಗಿವೆ. ಹುಲಿ, ಸಿಂಹಗಳಂತಹ ಮಾಂಸಾಹಾರಿಗಳೂ, ಆನೆ, ಜಿರಾಫೆ, ಕಾಡೆಮ್ಮೆ, ಜಿಂಕೆಗಳಂತಹ ಸಸ್ಯಾಹಾರಿಗಳೂ, ಪಾರಿವಾಳ, ಗುಬ್ಬಿ, ಗಿಳಿ ಮುಂತಾದ ಪಕ್ಷಿಗಳೂ ಸಂಘ ಜೀವನವನ್ನೇ ಇಷ್ಟಪಡುತ್ತವೆ.

ಕ್ರಿಮಿ ಕೀಟಗಳು ಸಹ ಸಾಮ್ರಾಜ್ಯ ಕಟ್ಟಿಕೊಂಡು ಗುಂಪಿನಲ್ಲೇ ಜೀವನ ನಡೆಸುತ್ತವೆ. ಈ ಗುಂಪು ಜೀವನದಲ್ಲಿ ಸಮಾನ ಜೀವನಾಭಿರುಚಿ ಇರುತ್ತದೆ. ಆಹಾರ ಸಂಸ್ಕೃತಿ ಇರುತ್ತದೆ. ಒಂದೇ ಬಗೆಯ ಜೈವಿಕ ಕ್ರಿಯೆಗಳಿರುತ್ತವೆ.

ಎಲ್ಲ ಜೀವಿಗಳೂ ತಮ್ಮ ಅಸ್ತಿತ್ವದ ಉಳಿವಿಗಾಗಿ ಸಂಘ ಜೀವನವನ್ನು ಮತ್ತಷ್ಟು ಗಟ್ಟಿಮಾಡಿಕೊಳ್ಳಲು ಪ್ರಯತ್ನಿಸುತ್ತವೆ. ಜತೆಗೆ ಸಂಘ ಜೀವನದಲ್ಲಿ ಇತರ ಸಂಕುಲಗಳಿಂದ ರಕ್ಷಣೆ ದೊರೆಯುತ್ತದೆ. ಜೀವನಕ್ಕೆ ಆಪತ್ತು ಬಂದಾಗ ಸಂಘ ಬದುಕು ರಕ್ಷಣೆಗೆ ಬಂದು ಕಾಪಾಡುತ್ತದೆ.

ಸಂಸ್ಕೃತಿ ಮತ್ತು ಭಾವ ಪ್ರಪಂಚದಲ್ಲಿ ನಾಗರಿಕತೆಗಳನ್ನು ವ್ಯವಹರಿಸುವ ಮನುಷ್ಯ ಇನ್ನೂ ಹೆಚ್ಚು ಸಂಘಜೀವಿಯಾಗಿರುತ್ತಾನೆ. ಅದನ್ನು ಬಳಸಿ ಕೊಂಡು ಸಂಸ್ಕೃತಿ, ನಾಗರೀಕತೆಗಳನ್ನು ಕಟ್ಟಿದ್ದಾನೆ. ಸಾಹಿತ್ಯ, ಸಂಗೀತ, ಶಿಲ್ಪ - ಮುಂತಾದ ಕಲಾ ಜಗತ್ತನ್ನೂ ಸೃಷ್ಟಿಸುತ್ತಾನೆ. ಅಷ್ಟೇ ಅಲ್ಲದೆ ಈ "ಬದುಕಿನಾಚೆಯ ಬದುಕಿ" ನ ಬಗ್ಗೆ ಚಿಂತಿಸಿದ್ದಾನೆ. ಪಾಪ, ಪುಣ್ಯ, ಸ್ವರ್ಗ, ನರಕಗಳ ಬಗ್ಗೆ ಮಾತನಾಡಿದ್ದಾನೆ.

ಅದಕ್ಕಿಂತಲೂ ಎತ್ತರದ ಆಧ್ಯಾತ್ಮದ ಬಗ್ಗೆ ತಲೆ ಕೆಡಿಸಿಕೊಂಡಿದ್ದಾನೆ. ಇಂಥ ನೆಲೆಯಲ್ಲೇ ಆತನಿಗೆ ಉಪಕಾರ ಸ್ಮರಣೆಯು ಒಂದು ದೊಡ್ಡ ಮೌಲ್ಯವಾಗಿ ಕಂಡಿದೆ. ತನ್ನ ಕಷ್ಟ ಕಾಲದಲ್ಲಿ ಸಹಾಯ ಮಾಡಿದವರನ್ನು, ಆಪತ್ಕಾಲದಲ್ಲಿ ರಕ್ಷಣೆ ಮಾಡಿದವರನ್ನು ಜಾತಿ, ಕುಲ, ಮತಗಳ ಯಾವ ಗೋಡೆಗಳನ್ನು ಲೆಕ್ಕಿಸದೆ ಸ್ಮರಣೆ ಮಾಡುವ, ಹೃದಯದಲ್ಲಿಟ್ಟು ಪೂಜಿಸುವ ಸಾವಿರಾರು ವ್ಯಕ್ತಿಗಳನ್ನು ನಾವು ಕಾಣಬಹುದು. ಈ ಉಪಕಾರ ಕ್ರಿಯೆಯನ್ನು ತಮ್ಮ ಹಿರಿಯರು ಋಣವೆಂದು ಭಾವಿಸಿದರು.

ಮಹಾಭಾರತ ಕಾವ್ಯದಲ್ಲಿ ದ್ರೋಣ, ಭೀಷ್ಮಾದಿಗಳು ಕೌರವರ ಋಣದ ಭಾರದಲ್ಲಿದ್ದರು. ಅದಕ್ಕಾಗಿಯೇ ತಮ್ಮ ಪ್ರಾಣತ್ಯಾಗವನ್ನೂ ಮಾಡಿದರು. ಹಾಗೆಯೇ ರಾಮಾಯಣದಲ್ಲೂ ತಮಗೆ ಉಪಕಾರ ಮಾಡಿದ ಶ್ರೀ ರಾಮನ ಋಣವನ್ನು ತೀರಿಸಲು ಸುಗ್ರೀವ ರಾಮನ ಪರವಾಗಿ ಹೋರಾಡುತ್ತಾನೆ. ಇಲ್ಲಿ ಉಪಕಾರ ಸ್ಮರಣೆಯೂ ಋಣದ ರೂಪದಲ್ಲಿ ಕ್ರಿಯಾಶೀಲವಾಗುತ್ತದೆ. ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕೆಂಬ ಮೌಲ್ಯಯುತ ಕಾರ್ಯ ನಮ್ಮ ಸಂಸ್ಕೃತಿಯಲ್ಲಿದೆ. ಆ ಉಪಕಾರವನ್ನು ಸ್ಮರಿಸುವುದು ಜತೆಗೆ ತೀರಿಸುವುದು ವ್ಯಕ್ತಿಯ ಕರ್ತವ್ಯ. ಇಲ್ಲದಿದ್ದರೆ ಅದು ಋಣವಾಗಿ ಕಾಡುವುದೆಂದೂ ನಮ್ಮ ಪೂರ್ವಿಕರು ಭಾವಿಸಿದ್ದರು. ಉಪಕಾರ ಪಡೆದವರು ಅವರ ಸ್ಮರಣೆ ಮಾಡುವುದು ಹಾಗೂ ಅದನ್ನು ತೀರಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದು ಸರಿ. ಅದನ್ನು ಒಂದು ನಾಗರೀಕ ಮೌಲ್ಯವೆಂದು ಕರೆಯಬಹುದು. ಆದರೆ ಉಪಕಾರ ಮಾಡಿದವರು ತಾವು ಮಾಡಿದ ಉಪಕಾರವನ್ನು ಒಂದು ಶೋಷಣೆಯ ಅಸ್ತ್ರವನ್ನಾಗಿ , ಆಗ್ರಹದ ಮಾರ್ಗವಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಉಂಟು.

ನಾನು ಅಂದು ನಿಮಗೆ ಇಂತಿಥಾ ಸಹಾಯ ಮಾಡಿದ್ದೆ. ಆಪತ್ತಿನಲ್ಲಿ ಕೈ ಹಿಡಿದಿದ್ದೆ. ಇಂದು ನನಗೆ ನೀವು ಅದಕ್ಕೆ ಪ್ರತಿಯಾಗಿ ಈ ಸಹಾಯವನ್ನು ಮಾಡಲೇ ಬೇಕು ಎಂದು ಪಟ್ಟು ಹಿಡಿಯುವ ಅನೇಕರನ್ನು ನಾವು ಕಂಡಿದ್ದೇವೆ. ಈ ದೃಷ್ಟಿಯ ಉಪಕಾರವು ಅಂತಃಕರಣದ ಮೂಲಕ ಬಂದಿರುವುದಿಲ್ಲ. ದುರಾಲೋಚನೆಯಿಂದ, ಸ್ವಾರ್ಥದಿಂದ ಮಾಡಿದ ಉಪಕಾರಕ್ಕೆ ಬೆಲೆ ಬರುವುದಿಲ್ಲ. ಉಪಕಾರದ ಹಿಂದೆ ಈ ದೃಷ್ಟಿ ಇದ್ದರೆ ಅದನ್ನು ಗೌರವಿಸುವುದು, ಮಾನ್ಯ ಮಾಡುವುದು ಸಲ್ಲದು.

'ಲೋಕೋಪಕಾರಾರ್ಥಂ ಇದಂ ಶರೀರಂ' ಎಂಬ ಉಕ್ತಿ ಇದೆ. ಯಾವುದೇ ನಿರೀಕ್ಷೆ ಇಟ್ಟುಕೊಳ್ಳದೆ ನಮಗೆ ಕೈಲಾದಷ್ಟು ಸಹಾಯ ಮಾಡುವ ಪ್ರವೃತ್ತಿ ನಮ್ಮಲ್ಲಿದ್ದಾಗ ಲೋಕ ನಮ್ಮನ್ನು ಸದಾ ಸ್ಮರಿಸುತ್ತದೆ.

ಬಾ ಲ ವಿ ನೋ ಧಿ ನಿ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ......

ಪಕ್ಕದಲ್ಲಿರುವ ಗೊಂಬೆಯನ್ನು ಬರಿಯೋಣ...





ನಾನಾ ವಿಧಾರಿ ಕೃತಬಾಧ ವಿದೂರ ಮೂರ್ತೇ ಶ್ರೀ
ವಿಷ್ಣುದಾಸ ಪರಿಪಂಥಿ ಜನಾರ್ಪಿತಾರ್ತೇ!
ಸರ್ವಜ್ಞ ಪೂರ್ಣ ಬಲವೀರ್ಯ ವಿಶಾಲ ಕೀರ್ತೆ ಶ್ರೀ
ಭಾರತೀಶ ಮಮ ದೇಹಿ ಕರಾವಲಂಬಮ್ ॥11॥

ನಾನಾ ವಿಧ ಶತೃಗಳಿಂದ ಉಂಟಾಗುವ ಬಾಧೆಗಳನ್ನು ನಿವಾರಿಸುವ, ಶ್ರೀ ವಿಷ್ಣುವಿನ ದಾಸರಾದ, ಶ್ರೀ ವಿಷ್ಣುಭಕ್ತರಾದ ಆರ್ತ ಜನರಿಗೆ ಮಾರ್ಗದರ್ಶಕರಾದ, ಸರ್ವಜ್ಞರಾದ, ಪೂರ್ಣವಾದ ಬಲವೀರ್ಯದಿಂದ ವಿಸ್ತಾರವಾದ ಕೀರ್ತಿಯುಳ್ಳ ಶ್ರೀ ಭಾರತೀಪತಿ ಯಾದ ವಾಯುದೇವರು ನಮ್ಮನ್ನು ಕಾಪಾಡಲಿ.

– ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ


**ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....**

ರಿ ಅ ಳ ರೆ ತೇ ಳೀ ಲು ರ

ಅ ರ ಮ ಡೀ ಲ್ಲಾ ಅ ಏ ದ

ಉತ್ತರಗಳು:
ಅಳಲು ಏರಿದರೆ ಅರಳೀ ಮರ ಅಲ್ಲಾಡೀತೇ?







**ದಾರಿ ತೋರಿಸಿ**

ಪ್ರಹ್ಲಾದನು ಯಾವ ಹಾದಿಯಲ್ಲಿ ಹೋದರೆ ನರಸಿಂಹ ಸ್ವಾಮಿಯನ್ನು ದರ್ಶಿಸುತ್ತಾನೆ ಮಕ್ಕಳೇ ಪ್ರಹ್ಲಾದನಿಗೆ ದಾರಿಯನ್ನು ತೋರಿಸಿ.

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ಕ್ವಿಜ್ 10

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳು ಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.05.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗು ವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**



# ರಸಪ್ರಶ್ನೆಗಳು


01. ಶ್ರೀಹರಿಗೆ ಪ್ರಿಯವಾದ ಮಾಸ ಯಾವುದು? ..................................................
02. ಎಷ್ಟು ದಿನಗಳ ಕಾಲದವರೆಗೆ ಗರ್ಭಗುಡಿಯನ್ನು ಮುಚ್ಚಲು ಹೇಳಿದರು? ..................................................
03. ಇಂದ್ರಜಿತ್ ಅನ್ನು ಯಾರು ಕೊಂದರು? ..................................................
04. ನರಸಿಂಹನು ಏನನ್ನು ಸೀಳಿಕೊಂಡು ಹೊರ ಬಂದನು? ..................................................
05. ಶ್ರೀನಿವಾಸ ದೇವಸ್ಥಾನದ ಹಿಂಬದಿಯಲ್ಲಿ ಯಾರ ದೇವಸ್ಥಾನವಿದೆ? ..................................................
06. ಯಾರ ಮೂಲಕ ಜಗತ್ತನ್ನು ಸೃಷ್ಟಿಗೆ ತರುವನು? ..................................................
07. ಸೌಬಲೇಯಿಯ ಮತ್ತೊಂದು ಹೆಸರೇನು? ..................................................
08. ನಾರದರ ವೀಣೆಯ ಹೆಸರೇನು? ..................................................
09. ಅಧ್ಯಯನೋತ್ಸವಗಳು ಎಷ್ಟು ದಿನಗಳವರೆಗೆ ನಡೆಯುತ್ತದೆ? ..................................................
10. ವಿಜಯೀಂದ್ರರು ಎಷ್ಟು ಗ್ರಂಥಗಳನ್ನು ಬರೆದಿದ್ದಾರೆ? ..................................................
11. ತಿರುಪತಿ ಬೆಟ್ಟವನ್ನು ಹತ್ತುವಾಗ ಏನೆಂದು ನಾಮಸ್ಮರಣೆ ಮಾಡಬೇಕು? ..................................................
12. ಎರಡು ನದಿಗಳ ನಡುವೆ ಇರುವ ದಿವ್ಯ ದೇಶ ಯಾವುದು? ..................................................
13. ಯಾವ ಸೊಪ್ಪನ್ನು ಅಡುಗೆಯ ಸುವಾಸನೆಗೆ ಬಳಸುತ್ತಾರೆ? ..................................................
14. ಸೃಷ್ಟಿಕರ್ತನು ನಿದ್ದೆಗೆ ಜಾರಿದಾಗ ಭೂಲೋಕದಲ್ಲಿ ಏನಾಯಿತು? ..................................................
15. ದೇವತೆಗಳು ರಾಕ್ಷಸರು ಸೇರಿ ಏನು ಮಾಡಿದರು? ..................................................

**ಹೆಸರು :**
**ಚಂದಾ ಸಂಖ್ಯೆ :**
**ತಂದೆಯ ಹೆಸರು :**
**ತಾಯಿಯ ಹೆಸರು:**
**ವಿಳಾಸ :**
**ದೂರವಾಣಿ ಸಂಖ್ಯೆ :**

**ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು**




ಪ್ರಹ್ಲದ, ಕ್ಷೀರಸಮುದ್ರ, ಅನ್ನಮಯ್ಯ, ಬಾಲ ಹನುಮ ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.


ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.




ರಂಗೋಲಿ, ನವಿಳು,ಬೆಟ್ಟ, ಚೈನಿನ ಡಾಲರ್,ಹುಡುಗ, ಕೆಲವು ಬಾಡರ್‌ನಲ್ಲಿ ಕಲರ್ ಇಲ್ಲ, ಕಾಂಪೋಡ್ ಗೋಡೆ

# ಚಿತ್ರಕಥೆ ಶ್ರೀ ಕೂರ್ಮಾವತಾರ

ಕಥೆ : ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ. ತುಲಸೀ ಪ್ರಸಾದ್




ಅಷ್ಟರಲ್ಲಿ ಮಂದರಗಿರಿ ಸಮುದ್ರಕ್ಕೆ ಜಾರಿತು.
ದೇವತೆಗಳು ಮತ್ತು ದಾನವರು ಗೊಂದಲಕ್ಕೊಳಗಾದರು.
ಅಯ್ಯೋ! ಕವೆ ಇಲ್ಲದೆ ಕಡೆಯುವುದು ಹೇಗೆ ?
ಮಥಿಸುವುದು ಹೇಗೆ
ಶ್ರೀಹರಿ ! ಕಾಪಾಡು.... ಕಾಪಾಡು
ಶ್ರೀಹರಿ! ಪ್ರತ್ಯಕ್ಷವಾಗಿ ರಕ್ಷಣೆ ನೀಡಿದರು.
ಶ್ರೀಹರಿಯು ಕೂರ್ಮ ರೂಪವನ್ನು ಧರಿಸಿ ತನ್ನ ಬೆನ್ನಿನ ಮೇಲೆ ಮಂದಾರವನ್ನು ಹೊತ್ತಿದ್ದನು. ದೇವತೆಗಳು....
ಅಡೆತಡೆ ದೂರವಾಗಿದೆ ಕಡೆಯಲು ಪ್ರಾರಂಭಿಸೋಣ....
ಮತ್ತೆ ಮಥಿಸುವುದು ಪ್ರಾರಂಭವಾಗಿದೆ.
ದೇವತೆಗಳು ಮತ್ತು ದಾನವರು ಆದಿ ಕೂರ್ಮಕ್ಕೆ ನಮಸ್ಕರಿಸಿದರು.
ನಮಸ್ತೆ ಶ್ರೀ ಕೂರ್ಮ ನಾರಾಯಣ !
ಸರ್ವೇ ಜನಾಃ ಸುಖಿನೋಭವಂತು !

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -''ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ. ರೋಡ್ಡು, ತಿರುಪತಿ - 517 507''.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

ತಿರುಮಲ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ 22-03-2023 ರಂದು ನಡೆದ ಯುಗಾದಿ ಆಸ್ಥಾನ ಕಾರ್ಯಕ್ರಮದ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಶ್ರೀ ಶ್ರೀ ಶ್ರೀ ದೊಡ್ಡ ಜೀಯರ್ ಮತ್ತು ಶ್ರೀ ಶ್ರೀ ಶ್ರೀ ಚಿಕ್ಕ ಜೀಯರ್ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ದಂಪತಿಗಳು ಪಾಲ್ಗೊಂಡರು.






ಒಂಟಿಮಿಟ್ಟ ಶ್ರೀ ಕೋದಂಡ ರಾಮಸ್ವಾಮಿಯವರಿಗೆ 05-04-2023 ರಂದು ನಡೆದ ಕಲ್ಯಾಣೋತ್ಸವಕ್ಕೆ ಆಂಧ್ರಪ್ರದೇಶ ರಾಜ್ಯದ ವತಿಯಿಂದ ಸ್ವಾಮಿಯವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ಗೌ॥ ಪೆದ್ದಿರೆಡ್ಡಿ ರಾಮಚಂದ್ರಾರೆಡ್ಡಿ ದಂಪತಿಗಳು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ದಂಪತಿಗಳು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.









SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-04-2023 and Posting at Tirupati RMS.Regd. with the Registrar of Newspapers for India underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

